ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ ಈಗಾಗಲೇ ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಮತ್ತು ಅವರ ಹತ್ತಿರ ಈಗಾಗಲೇ ಸುಮಾರು ಒಂದು ಲ ರೂಪಾಯಿಗಳು 32 ಆರ್.ಡಿ. ಅವರಿಗೆ ಕೊಟ್ಟಿರತಕ್ಕ ಹಣ ಇದೆ.

ಶ್ರೀ ಕೆ. ವೆಂಕಟಪ್ಪ.—32 ಆರ್.ಡಿ. ಕೊಟ್ಟಿರುವುದು ಡೀಪನಿಂಗ್ ಆಫ್ ವೆಲ್ಸ್‌ಗೆ ಕೊಟ್ಟಿರ ತಕ್ಕದ್ದು ಎಂದು ಗೊತ್ತಾಗಲಿಲ್ಲ. ಆದರೆ 64ರ ಫ್ಯಾಮಿನ್ ರಿಲೀಫ್‌ನಲ್ಲ 5-6 ಸಾವಿರ ರೂಪಾಯಿ ಗಳ ಹಣವನ್ನು ಇಟ್ಟಿದ್ದಾರೆ. ಬಾವಿಗಳು ಪ್ರಾಮುಖ್ಯವಾಗಿರುವುದರಿಂದ ಅತಿ ಶೀಘ್ರವಾಗಿ ಇದನ್ನು ವಿಚಾರ ಮಾಡಿ ತಾವು ಆದೇಶ ಕೊಡಬೇಕು. ಸರ್ಕಾರದಿಂದ ಒಂದು ಸರ್ಕ್ಯುಲರ್ ಹೋಗಿರುವುದರಿಂದ ಸುಮಾರು 50 ಮನೆಗಳು ಇದ್ದರೆ ಒಂದು ಬಾವಿ, ಇಲ್ಲದಿದ್ದರೆ ಒಂದು ತಲೆಗೆ 80 ರೂಪಾಯಿ ಖರ್ಚು ಬೀಳತಕ್ಕ ಬಾವಿಗಳನ್ನು ಮಾಡಿ ಎಂದು ಆದೇಶ ಕೊಟ್ಟಿದ್ದಾರೆ. 50 ಮನೆ ಇದ್ದರೆ 80 ರೂಪಾಯಿನಂತೆ ಲೆಕ್ಕ ಮಾಡಿದರೆ ಒಂದು ಬಾವಿಗೆ ನಾಲ್ಕು ಸಾವಿರ ರೂಪಾಯಿಯಾಗು ತ್ತದೆ. ನಾಲ್ಕು ಸಾವಿರದಲ್ಲಿ 80 ಅಡಿ ಬಾವಿಯನ್ನು ತೆಗೆಯುಲಕ್ಕೆ ಸಾಧ್ಯವೇ ? ಆದಕ್ಕೆ ದಯ ಮಾಡಿ ಆ ಸರ್ಕ್ಯುಲರ್ ಅನ್ನು ಸಡಿಲಸಿ ಒಂದು ಹಳ್ಳಿಯಲ್ಲಿ ಎಷ್ಟೇ ಮನೆಗಳು ಇರಲಿ, ಜನರು ಇದ್ದರೆ ಅಂಥ ಕಡೆ ಬಾವಿಗಳನ್ನು ತೆಗೆದುಕೊಳ್ಳಿ ಎಂದು ಆದೇಶ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರ ಸೂಚನೆಗಳನ್ನು ಗಮನದಲ್ಲಿಟ್ಟು ಕೊಂಡು ಅವಶ್ಯ ಬಿದ್ದರೆ ಅಡಿಷನರ್ ಗ್ರಾಂಟ್ ಕೊಟ್ಟು ಆ ಕೆಲಸವನ್ನು ತೀವ್ರತೆಯಿಂದ ಮಾಡಿಸು ತ್ತೇವೆ.

MADAM SPEAKER.—Question hour is over. Now Calling Attention. Notice

2.00 P.M.

CALLING ATTENTION TO A MATTER OF URGENT PUBLIC IMPORTANCE

re : **hardships of the one year PUC passed Students for admission of the degree Course**

Sri H. S. SIDDAPPA (Arsikere).—I call the attention of the Minister for Education to the hardships caused to the students who have passed the former one year Pre-University Course in getting admission to the degree course.

Sri A. R. BADARI NARAYANA (Minister for Education).—Eversince the Intermediate Course in Mysore State was abolished and it was replaced by Pre University Course, the minimum qualification for entering any of the Degree courses in the State has been the completion of Pre-University for joining B.Sc., B.A., etc., Pre-Engineering for joining B.E., Course, and Pre-Professional Course for joining Medical. In 1971, the P.U.E. Course was taken away from the Universities and a sepearate Board with Statewide jurisdiction was created for administering it. The duration of P.U.E. Course was also increased to two years. Since then there has been the problem of fixing up a common eligibility for entering a Degree course in the State. This is all the more necessary because of

migration of Students between the Universities in the State as well as from the Universities outside the State. Even though One Year P.U.E. Course is not being run in any of the colleges in the State, there are still a few students who have yet to complete the course. Some of them have one or two subjects to complete and others are failed students who are again appearing for one year P.U.E. Course examination.

After the increase of the duration of the P.U.E. Course, steps have also been taken by the Universities to revise the Three Year degree Courses accordingly. As the P.U.E. Course has become more advanced the Degree Course has also been revised. Thus the students who have completed one year P.U.E. may not be able to cope up with the revised Degree course in view of the advance nature of the subjects,

All these questions were considered in a Conference of Vice-Chancellors in the State held at Mysore on 29-1-1973. It was resolved in that Conference that henceforth there should be common minima for eligibility to the degree courses in the State and that minima should be the Two Year P.U.E. Course. This would mean the abolition of Pre-Engineering as well as Pre-Professional Courses also. Similarly, those who are coming from outside the State and who have passed Intermediate/Senior Cambridge will have to take the II Year Examination of the P.U.E. before they become eligible for joining Degree course. This decision which was accepted by all the three Vice-Chancellors in the State is to be implemented from the academic year 1973-74 after due approval is given by the Academic Bodies in the Universities.

Sri H. S. SIDDAPPA.—My submission is that this course comes into force during 1973-74. It should be made applicable to students who get into classes during that year. But, it is given retrospective effect. The students who have passed one year course but could not continue further studies due to some reason or the other, if they want to join now the degree classes, have to undergo one more year course. This works as a hardship.

Sri A. R. BADARINARAYANA.—I have mentioned that there was abolition of pre-engineering and pre-professional course. The benefit of one year is there.

Sri H. S. SIDDAPPA.—That if a benefit only to those students who get into medical or engineering courses. What about those who want to go to B.A. or B.Sc. course.?

Sri A. R. BADARINARAYANA.—I have stated that the curricul of the B.A. and B.Sc. has been revised and with one year course it will not be possible for the students to go upto that level.

Sri H. S. SIDDAPPA.—Even the curriculum of P.U.E. course is changed. So will the Government consider the case of those who have passed one year course but have discontinued and now want to continue their studies ?

Sri A. R. BADARINARAYANA.—The suggestion is noted.

MADAM SPEAKER.—Laying of papers.

Papers Laid on the Table

Sri D. K. NAIKAR (Minister for Law and Parliamentary Affairs).—On behalf of the Minister for Revenue I beg to lay :

Order No. RD 151 EST 72 dated 12th February 1973 – Remission of Stamp duties chargeable in respect of instrument executed by Defence Services etc.

Under Section 9 (2) of the Mysore Stamp Act 1957.

Sir on behalf of the Minister fer Industries, I beg to lay :

Eleventh Annual Report of the Mysore Iron and Steel, Ltd., Bhadravathi for the year 1971-72

Under sub-section 2 of section 639 of the Companies Act, 1956.

MADAM SPEAKER.—The papers are laid. Now Further discussion on the Governor's Address.

Notice Under Rule 312 *re* : Maharasthra—Mysore Border

ಶ್ರೀ ಕೋಣಂಡೂರು ಲಂಗಪ್ಪ (ತೀರ್ಥಹಳ್ಳಿ).—ನಾನು 312ರ ಪ್ರಕಾರ ಒಂದು ನೋಟೀಸ್ ಈ ವಿಷಯದಲ್ಲಿ ಕಳುಹಿಸಿದ್ದೆ. ಕರ್ನಾಟಕದ ಮತ್ತು ಮಹಾರಾಷ್ಟ್ರದ ಇಬ್ಬರೂ ಮುಖ್ಯ ಮಂತ್ರಿಗಳು ಗಡಿ ಸಮಸ್ಯೆಯ ಬಗ್ಗೆ ಚರ್ಚಿಸಿದ್ದಾರೆ ಎನ್ನುವಕ್ಕೆ ವಿಷಯ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರ ಬಗ್ಗೆ ಯಾವ ತಿಳುವಳಿಕೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿಲ್ಲ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಬರಲಿ.

Motion of Thanks to the Governor's Address

(Debate Continued)

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆ ರಾಜ್ಯ ಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯವನ್ನು ವಿರೋಧಿಸಿ ಮಾತನಾಡುತ್ತಾ ಒಂದೆರಡು

ವಿಷಯಗಳನ್ನು ಮಾತ್ರ ಕಾರಾವಕಾಶವಿಲ್ಲದೆ ಇವ್ಮುದರಿಂದ ಉಳಿಸಿಕೊಂಡಿದ್ದೆ. ಇಲ್ಲಿ ಸರ್ಕಾರದವರು ನೀರಾವರಿ ಸೌಲಭ್ಯ ಒದಗಿಸುವ ದೃಷ್ಟಿಯಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ನೀರಾವರಿ ಸಾಲವನ್ನು ರೈತರಿಗೆ ಒದಗಿಸುತ್ತೇವೆಂದು ಹೇಳುತ್ತಿದ್ದಾರೆ. ಅದರಲ್ಲಿ ಒಂದು ನ್ಯೂನತೆ ಏನು ಇದೆ ಏನ್ನುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ಜಿಯಾಲಜಿಕರ್, ವಾಟರ್ ಸರ್ವೀಸ್ ರಿಸೋರ್ಸ್ ನರ್ವೆ ಡಿಪಾರ್ಟ್‌ಮೆಂಟಿನವರು ಏನು ಇದ್ದಾರೆ ಎಲ್ಲೆಲ್ಲಿ ನರ್ವೆಮಾಡಿ ಯಾವಯಾವ ಹಳ್ಳಿಗಳನ್ನು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಸಿಫಾರಸ್ಸು ಮಾಡಿದ್ದಾರೆ ಅಲ್ಲಿಗೆ ಮಾತ್ರ ಸಾಲ ಕೊಡುವುದಕ್ಕೆ ಅವಕಾಶವಾಗುತ್ತದೆ. ಎಲ್ಲಾ ಹಳ್ಳಿಗಳಲ್ಲಿ ನರ್ವೆ ಮಾಡದೆ ಹಾಗೆ ಬಿಟ್ಟು ಕೆಲವು ಹಳ್ಳಿಗಳಲ್ಲಿ ಮಾಡಿ ಹಣವನ್ನು ಕೊಡುತ್ತಾರೆ. ಪತ್ರಿಕೆಗಳಲ್ಲಿ ಪ್ರಚಾರ ಮಾಡುತ್ತಾರೆ ಒಂದೊಂದು ತಾಲ್ಲೂಕುಗಳಲ್ಲಿ ನುಮಾರು ಮುಕ್ಕಾಲುಭಾಗ ಹಳ್ಳಿಗಳನ್ನು ನರ್ವೆ ಮಾಡಿಲ್ಲ. ಈಗ ನರ್ವೆ ಕೂಡ ತಕ್ಷಣದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಅಭಿಪ್ರಾಯ ಏನು ಇದೆ ವಾಟರ್ ರಿಸೋರ್ಸ್ ಅಭಿಪ್ರಾಯ ಕೊಡಲಿ ನಾವು ಸಾಲ ಕೊಡುತ್ತೇವೆ ಎನ್ನುವ ಅಭಿಪ್ರಾಯವನ್ನು ದಯವಿಟ್ಟು ಬದಲಾವಣೆ ಮಾಡಿ ಹಿಂದೆ ಯಾವ ಯಾವ ರೈತ ತನ್ನ ಜಮೀನಿನಲ್ಲಿ ತಾನೇ ಬಾವಿ ತೆಗೆದುಕೊಂಡು ಉತ್ಪಾದನೆ ಮಾಡುವ ದೃಷ್ಟಿಯಿಂದ ಸಾಲ ಪಡೆಯುವುದಕ್ಕೆ ಅತನಿಗೆ ಕೊಡುತ್ತಾ ಇಲ್ಲ. ಎಲ್ಲಾ ಗ್ರಾಮಗಳಲ್ಲಿ ರೈತನಿಗೆ ಸಾಲ ಕೊಡುವ ಅವಕಾಶವನ್ನು ಸರ್ಕಾರ ಕಲ್ಪಿಸಬೇಕು. ಆದರಿಂದ ಹೆಚ್ಚು ಸಹಾಯವಾಗುತ್ತದೆ. ಸರ್ಕಾರದ ಗಮನವನ್ನು ಆ ಕಡೆ ಸೆಳೆಯಬೇಕು ಎಂದು ನನ್ನ ಇಚ್ಛೆಯಾಗಿದೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ನಾರಿನ ಕೈಗಾರಿಕೆಗಳು, ಇತರೆ ಗೃಹ ಕೈಗಾರಿಕೆಗಳು ಇವುಗಳ ಮೇಲೆ ವಿದ್ಯುಚ್ಛಕ್ತಿಯ ಕಡಿತವನ್ನು ಹಾಕಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ನಣ್ಣ ಕೈಗಾರಿಕೆಗಳು, ಸಹಕಾರಿ ಕೈಗಾರಿಕೆಗಳೇನಿವೆ, ಗ್ರಾಮಾಂತರ ಪ್ರದೇಶದ ಜನಗಳ ಅಭಿವೃದ್ಧಿಗಾಗಿ ತಿಂಗಳಿಗೆ ಕೆಲವೊಂದೇ ದಿವಸ ನಡೆಯುವ ಕೈಗಾರಿಕೆಗಳೇನಿವೆ, ಅವುಗಳಿಗೆ ವಿದ್ಯುಚ್ಛಕ್ತಿ ಕಡಿತವನ್ನು ನಿಲ್ಲಿಸಬೇಕು. ವಿದ್ಯುಚ್ಛಕ್ತಿಯನ್ನು ಉಳಿಸಬೇಕಾದ ಕಾಲವಲ್ಲಿ ದೊಡ್ಡ ದೊಡ್ಡ ಪಟ್ಟಣ ಮತ್ತು ನಗರಗಳಲ್ಲಿ ಕಡಿತವನ್ನು ಹಾಕಬೇಕೇ ಏನಾ ಗ್ರಾಮಾಂತರ ಪ್ರದೇಶಗಳಲ್ಲಿ ಹಾಕಬಾರದು, ಅದರಿಂದ ಬಹಳ ಅನ್ಯಾಯ ಮಾಡಿದ ಹಾಗಾಗುತ್ತದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತ ರಾಜ್ಯಪಾಲರ ಭಾಷಣಕ್ಕೆ ತಂದಿರುವ ವಂದನಾ ನಿರ್ಣಯದ ಬಗ್ಗೆ ನಮ್ಮ ಪಕ್ಷದ ವತಿಯಿಂದ ಹಾಗೂ ನನ್ನ ವತಿಯಿಂದ ವಿರೋಧವನ್ನು ವ್ಯಕ್ತಪಡಿಸುತ್ತ, ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತ ಜೊತೆಯಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೂ ಧನ್ಯವಾದಗಳನ್ನು ಅರ್ಪಿಸಿ, ಬರಗಾಲದಿಂದ ನೊಂದಿರತಕ್ಕ ಜನಗಳಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ನನ್ನ ವತಿಯಿಂದ 200 ರೂಪಾಯಿನಷ್ಟು ಕೊಡುವುದಾಗಿ 15ನೇ ತಾರೀಖು ಏನು ಪತ್ರವನ್ನು ತಮಗೆ ಬರೆದಿದ್ದೆ, ಆದರ ಬಗ್ಗೆ ಈಗಲೂ ಕೂಡ ನನ್ನ ಅಭಿಪ್ರಾಯವಿದೆ. ಈ ಹಣವನ್ನು ಖುದ್ದಾಗಿ ತಮಗೆ ಕೊಡುತ್ತೇನೆ. ತಮಗೆ ಹೇಗೆ ತೋಚುತ್ತದೆಯೋ ಹಾಗೆ ಮಾಡಬಹುದು. ಪದೇ ಪದೇ ಈ ಸಭೆಯಲ್ಲಿ ಸದಸ್ಯರು ಬಡವರು ಬಂದಿದ್ದಾರೆ, ಹೊಟ್ಟೆಗೆ ಇಲ್ಲ, ಅವರಿಗೆ ಏನಾದರೂ ಮಾಡಬೇಕು ಎಂದು ಹೇಳುವಂಥ ಸಂದರ್ಭ ಬಂದಾಗ ಈ ದುಡ್ಡು ತಮ್ಮಲ್ಲಿದ್ದರೆ ಉಪಯೋಗವಾಗುತ್ತದೆಯೋ ಏನೋ ಎನ್ನುವ ದೃಷ್ಟಿಯಿಂದ ನನಗೆ ಈ ಎರಡು ತಿಂಗಳ ಕಾಲದಲ್ಲಿ ಬರತಕ್ಕದ್ದರಲ್ಲಿ ಎಂಟನೇ ಒಂದು ಭಾಗವನ್ನು ಎಂದರೆ 200 ರೂಪಾಯಿ ಅಥವ ಅದಕ್ಕಿಂತ ಹೆಚ್ಚಾಗಿ ಆಗುವುದಿದ್ದರೆ ಅದನ್ನೂ ಕೊಡುವುದಕ್ಕೆ ಸದಾ ಸಿದ್ಧವಾಗಿದ್ದೇನೆ. ಅದನ್ನು ಬಹಳ ಸಂತೋಷದಿಂದ ಕೊಡುತ್ತೇನೆ. ಹಾಗೆಯೇ ಇತರೇ ಸದಸ್ಯರೂ ಕೊಡಬೇಕು, ಕೊಟ್ಟರೆ ಒಳ್ಳೆಯದು ಎನ್ನುವ ದೃಷ್ಟಿಯಿಂದ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂಬ ಇಚ್ಛೆ ಇದೆ. ಭೂಕೈನರಿಗೆ ಸ್ಟೆಟುಗಳನ್ನು ಹಂಚಿದ್ದೇವೆಂದು ಆಚ್ಚಾಗಿದೆ. ಕನ್ನಡ ಭಾಷಣದಲ್ಲಿ 4ನೇ ಪುಟದಲ್ಲಿ ಎರಡು ಲಕ್ಷ ಸ್ಟೆಟುಗಳು ಎಂದು ಇದೆ, ಅದೇ ಭಾಷಣದ 11ನೇ ಪುಟದಲ್ಲಿ ಮೂರು ಲಕ್ಷ ಸ್ಟೆಟುಗಳು ಎಂದು ಅಕ್ಷರಗಳಲ್ಲಿ ಆಚ್ಚಾಗಿದೆ. ಸರ್ಕಾರದವರು ಹಂಚಿರುವುದು ಎರಡು ಲಕ್ಷ ಸ್ಟೆಟುಗಳೋ ಅಥವಾ ಮೂರು ಲಕ್ಷ ಸ್ಟೆಟುಗಳೋ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರದ ವತಿಯಿಂದ ಇದರ ಬಗ್ಗೆ ಉತ್ತರ ಬಂದರೆ ಒಳ್ಳೆಯದೇನೋ ಅನ್ನಿಸುತ್ತದೆ. ನಾನು

(ಶ್ರೀ ಕೆ. ಶ್ರೀರಾಮುಲು)

ತಪ್ಪಾಗಿ ಮಾತನಾಡಿದರೆ ಒಳ್ಳೆಯದಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಉತ್ತರ ಬಾರದೆ ಇದ್ದರೆ ನನ್ನ ಅಭಿಪ್ರಾಯದಂತೆ ನಾನು ಮಾತನಾಡಬೇಕಾಗಿ ಬರುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಏನು ವಿವರಣೆ ಕೇಳಿದ್ದಾರೆ ಅದಕ್ಕೆ ಸಕಾಲದಲ್ಲಿ ಅವರಿಗೆ ವಿವರಣೆ ಒದಗಿಸಲಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಅದು ಸಮರ್ಪಕವಾದ ಉತ್ತರವಲ್ಲ ಎಂದು ಹೇಳದೆ ವಿಧಿ ಇಲ್ಲ. ರಾಜ್ಯಪಾಲರ ಭಾಷಣವನ್ನು ಆಚ್ಚು ಹಾಕಿಸಿ ಹಂಚಿದ್ದಾರೆ, ಅನೇಕ ಸ್ಯಾಮ್ಯವಾದ ವಿಚಾರಗಳನ್ನು ಅದರಲ್ಲಿ ಪ್ರಾಸ್ತಾಪ ಮಾಡಿದ್ದಾರೆ. ಅದರಲ್ಲಿ ಅಕ್ಷರಗಳಲ್ಲಿ ಆಚ್ಚಾಗಿರುವುದರಲ್ಲಿ ಒಂದು ಕಡೆ ಎರಡು ಲಕ್ಷ ಎಂದು ಇದ್ದು ಇನ್ನೊಂದು ಕಡೆ ಮೂರು ಲಕ್ಷ ಎಂದಿದೆ. ರಾಜ್ಯಪಾಲರ ಬಾಯಲ್ಲಿ ಕೂಡ ಇದನ್ನು ಹೇಳಿಸಿದ್ದಾರೆ. ಇದು ನಿಜಾಂಶ ಎಂದು ನಮ್ಮ ಮುಂದೆ ಇಡುವುದಾದರೆ ನಮ್ಮ ಯೋಜನೆಗಳು ಎಷ್ಟುಮಟ್ಟಿಗೆ ನಿಜಾಂಶವಾವುವು ಎನ್ನುವ ಪ್ರಶ್ನೆಯನ್ನು ನಾನು ಕೇಳಬೇಕಾಗಿ ಬರುತ್ತದೆ. ಇಂಥ ದೋಷಗಳಿಂದ ಕೂಡಿದ್ದನ್ನು ಆಚ್ಚು ಹಾಕಿ ನಮಗೆ ಕೊಡುತ್ತಿದ್ದಾರೆ. ಮಾನ್ಯ ದೇವೇಗೌಡರು ಮಾತನಾಡುತ್ತ ಹೇಳಿದರು, ಆಡಳಿತ ನಡೆಸುತ್ತಿರುವವರಿಗೆ ಬುದ್ಧಿಯ ಅಭಾವವೂ ಇದೆ ಎನ್ನುವಂತೆ ಹೇಳಿದರು. ಆ ಪ್ರಶ್ನೆಗೆ ಉತ್ತರ ಹೇಳಬೇಕಾಗಿ ಬರುತ್ತದೆ ಇಂಥದ್ದು ಇರಬಾರದಾಗಿತ್ತು ಅಷ್ಟೇ ಅಲ್ಲ, ಸ್ಟೆಟುಗಳನ್ನು ಎಲ್ಲಿ ಹಂಚಿದ್ದಾರೆ, ಯಾರಿಗೆ ಹಂಚಿದ್ದಾರೆ, ಯಾವ ಯಾವ ಸರ್ವೇ ನಂಬರಿನಲ್ಲಿ ಹಂಚಿದ್ದಾರೆ ಮತ್ತು ಯಾವ ಯಾವ ಕೋಮಿನ ವರಿಗೆ ಹಂಚಿದ್ದಾರೆ ಎನ್ನುವುದೂ ಗೊತ್ತಾಗುವಂತೆ ಅಸಂಬ್ಲಿ ಸದಸ್ಯರಿಗೆ ಒಂದು ಪಟ್ಟಿಯನ್ನಾದರೂ ಕೊಟ್ಟಿದ್ದರೆ ಬಹಳ ಚನ್ನಾಗಿರುತ್ತಿತ್ತು ಎಂದು ನನ್ನ ಅಭಿಪ್ರಾಯ. ಸ್ಟೆಟುಗಳನ್ನು ಹಂಚುವ ಹಕ್ಕು ಸರ್ಕಾರದವರಿಗೆ ಮಾತ್ರವೇ ಇಲ್ಲ. ಈ ಸಭೆಗೆ ಆರಿಸಿಬಂದಿರುವವರೆಲ್ಲರಿಗೂ ಆ ಹಕ್ಕು ಇದೆ. ಸರ್ಕಾರ ಸ್ಟೆಟುಗಳನ್ನು ಹಂಚುತ್ತಿದೆಯಲ್ಲ ಎಂದು ನನ್ನ ಕ್ಷೇತ್ರದಲ್ಲಿನ ಮತದಾರರು ನನ್ನನ್ನು ಕೇಳುತ್ತಾರೆ. ಆ ಪ್ರಶ್ನೆಗೆ ನಾನಾದರೂ ಏನು ಹೇಳುವುದಕ್ಕೆ ಆಗುತ್ತದೆ ? ನಭಾಧ್ಯಕ್ಷಿಣಿಯವರೇ ಕಳೆದ 25 ವರ್ಷಗಳಿಂದ ಏನನ್ನು ಮಾಡಿದ್ದು ತಪ್ಪು ಎಂದು ನಾವು ಹೇಳುತ್ತಿದ್ದೇವೆ, ಅವೇ ತಪ್ಪನ್ನು ನಾವು ಈಗ ಮಾಡುತ್ತಿದ್ದೇವೆಂದು ನನಗೆ ಅನ್ನಿಸುತ್ತಿದೆ. ಆ ತಪ್ಪುಗಳಲ್ಲಿ ತಪ್ಪುಗಳು ಇರುವುದನ್ನು ನಾವು ಒಪ್ಪಿಕೊಂಡು ಮುಂದುವರಿಯಬೇಕಾಗಿದೆ. 25 ವರ್ಷಗಳಿಂದ ದೇಶವನ್ನು ಅಧೋಗತಿಗೆ ತಂದವರು ನಾವು ಎನ್ನುವುದನ್ನು ಮರೆಯಬಾರದು. ಯಾರೇ ಆಡಳಿತ ನಡೆಸಿರಲಿ ಅದರಲ್ಲಿ ನಾವೂ ಭಾಗಿಗಳು ಎನ್ನುವುದನ್ನೂ ಮರೆಯಬಾರದು. ಇದು ಒಬ್ಬರ ಮೇಲೆ ಒಬ್ಬರು ಮಾಡತಕ್ಕ ಆಪಾದನೆಯಲ್ಲ. ಹಲವಾರು ವರ್ಷಗಳಲ್ಲಿ ನಾನು ಏನೂ ತಪ್ಪು ಮಾಡಿಲ್ಲ, ಅಕ್ರಾಫಮಾಡಿಲ್ಲ ಎಂದು ಹೇಳುತ್ತೇನೆ. ಯಾವುದೇ ದುಬಾರಿ ಆಸ್ತಿಯನ್ನು ಮಾಡಿಕೊಂಡಿಲ್ಲ ಎಂದು ಹೇಳುವುದಕ್ಕೆ ಸಿದ್ಧವಾಗಿದ್ದೇನೆ. ಹೀಗೆ ಎಷ್ಟು ಜನ ಹೇಳಬಲ್ಲರು ? ಹೀಗೆ ಹೇಳುವವರು ಕೆಲವರಿದ್ದಾರೆ. ಕೆಲವರಿರಬಹುದು, ಹಲವರಲ್ಲ. ಹಲವರು ಆ ರೀತಿ ಹೇಳುವವರಾಬೇಕು ಎನ್ನುವುದು ನನ್ನ ಆಶಯ, ದೇಶಕ್ಕೋಸ್ಕರ ಕಳೆದ 25 ವರ್ಷಗಳಿಂದ ಸೇವೆ ಮಾಡಿದ್ದರೆ ಈ ಹೊತ್ತು ಬರಗಾಲವಿರುತ್ತಿರಲಿಲ್ಲ. ಶ್ರೀ ದೇವೇಗೌಡರು ನಮಗೆ ಬುದ್ಧಿ ಇಲ್ಲ ಎಂದು ಹೇಳತಕ್ಕ ಅಗತ್ಯವಿರಲಿಲ್ಲ. 25 ವರ್ಷಗಳ ಕಾಲ ರಾಜ್ಯಭಾರ ಮಾಡಿದವರು ಅವಿಭಾಜ್ಯ ಕಾಂಗ್ರೆಸ್ಸಿನವರು ? ಹನ್ನೊಂದು ತಿಂಗಳಿನಿಂದ ನಮ್ಮ ಪಕ್ಷ ಆಡಳಿತ ನಡೆಸುತ್ತಿದೆ. ಯಾರೇ ಆಡಳಿತ ನಡೆಸಲಿ ರಾಮಕೃಷ್ಣ ಹೆಗಡೆಯವರಾಗಲೀ, ವೀರೇಂದ್ರ ಪಾಟೀಲರಾಗಲೀ, ನಿಜಲಿಂಗಪ್ಪನವರಾಗಲೀ, ಅವರ ಕಾಲದಲ್ಲಿ ಏನು ಮಾಡಿದರು ಎನ್ನುವ ಪ್ರಶ್ನೆ ಕೇಳಬೇಕಾಗಿ ಬರುತ್ತದೆ. ಹಾಗೆ ಕೇಳುವುದಕ್ಕೆ ಹೋದರೆ ಈ ಸಭೆಯ ಸದಸ್ಯನಾಗಿ ನಾನು ಏನು ಮಾಡಿದೆ ಎಂದು ಕೂಡ ಇಂದು ಪ್ರಶ್ನೆ ಹಾಕಿಕೊಳ್ಳಬೇಕಾಗಿ ಬರುತ್ತದೆ.

ಹಾಗೆ ಮಾಡಲಲ್ಲ. ಪ್ರಶ್ನೆ ಹಾಕುವ ಮೊದಲು ನನ್ನ ಸ್ವತ್ತು, ಮಕ್ಕಳ ಸ್ವತ್ತು, ಹೆಂಡತಿ ಸ್ವತ್ತು ಎಂದು ಮಾಡಿಕೊಂಡಿದ್ದಾರೆ. ಈ ಪ್ರಶ್ನೆ ಮುಖ್ಯ ಮಂತ್ರಿಗಳ ಮುಂದೆ ಬಂದಾಗ ವಿಚಾರಣೆ ಮಾಡುತ್ತಾರೆಯೇ ಎಂದು ಗೊತ್ತಾಗುತ್ತದೆ. ಈ ದೇಶದ ಸ್ವತ್ತು ಹಲವರಿಗೆ ಸೇರಬೇಕಾದ್ದು ಕೇವಲ ಕೆಲವರಿಗೆ ಮಾತ್ರ ಸೇರಿದೆ. ಅದು ಆಗಬಾರದಾಗಿತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಲೋಕ ಪಾಲ, ಲೋಕ ಆಯುಕ್ತ ಮಟ್ಟದಲ್ಲಿ 25 ವರ್ಷಗಳಲ್ಲಿ ಶಾನಕರ, ಮಂತ್ರಿಗಳ, ಮುಖ್ಯಮಂತ್ರಿಗಳ ಆಸ್ತಿ ಪಟ್ಟಿಗಳನ್ನು ತನಿಖೆ ಮಾಡುವುದಕ್ಕೆ ಸರಕಾರ ಆದೇಶ ಕೊಡುತ್ತದೆಯೇ ?

ಶ್ರೀ ಕೆ. ಶ್ರೀರಾಮುಲು.— ತಾವು ಆ ತೀರ್ಮಾನಕ್ಕೆ ಬನ್ನಿ. ಆ ತೀರ್ಮಾನಕ್ಕೆ ನೀವು ಬರುವ ಬದಲು ನಾವು ಬಂದಿದ್ದೇವೆ ಎಂದು ಹೇಳುತ್ತೇನೆ. ಹಾಗೆ ತೀರ್ಮಾನವಾಗೆನಾದರೂ ವಿಚಾರಣೆಗೆ ಬಂದರೆ ದೇವೇಗೌಡರಿಗೆ ಹೇಳುತ್ತೇನೆ ನಿಮ್ಮ ಕಡೆಯವರೇ ಹೆಚ್ಚಿಗೆ ಸಿಕ್ಕಿಕೊಳ್ಳುವುದು ಎಂದು.

ರಾಜ್ಯಪಾಲರ ಭಾಷಣದಲ್ಲಿ ಕಾರ್ಮಿಕರ ಬಗ್ಗೆ ಏನನ್ನೂ ಪ್ರಸ್ತಾಪ ಮಾಡಲಿಲ್ಲ. ಧಾರಣೆ ವಾಸಿಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಲಿಲ್ಲ. ಹಿಂದಿನ ವರ್ಷದ ರಾಜ್ಯಪಾಲರ ಭಾಷಣಕ್ಕೂ ಈ ವರ್ಷದ ರಾಜ್ಯಪಾಲರ ಭಾಷಣಕ್ಕೂ ಹೊಂದಾಣಿಕೆ ಇಲ್ಲ. ಹಿಂದಿನ ವರ್ಷದಲ್ಲಿಯೂ ಸಹ ಪ್ರತಿ ಜಿಲ್ಲೆಯಲ್ಲಿ ಸಾಮಿರಾರು ಜನಕ್ಕೆ ಕೆಲಸ ಕೊಡಿಸುತ್ತೇವೆ ಎಂದು ಭಾಷಣ ಮಾಡಿದ ಪ್ರತಿ ಇದೆ. ಇದರ ಬಗ್ಗೆ ಈ ಸಾಲಿನ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಇಲ್ಲ. ಆದುದರಿಂದ ಇದೇನಾಗಿದೆ ಎಂದರೆ ಯಾರೋ ಕೆಲವು ಅಧಿಕಾರಿಗಳು ತಮಗೆ ತೋಚಿದ್ದನ್ನು ಅಚ್ಚು ಹಾಕಿ ರಾಜ್ಯಪಾಲರ ಕೈಯಿಂದ ಓದಿಸಿ ನಮ್ಮ ಮುಂದೆ ಇಟ್ಟಿದ್ದಾರೆಯೋ ಏನೋ ಎಂಬ ಸಂಶಯ ಖಂಡಿತವಾಗಿ ಬರುತ್ತದೆ. ದುಡಿಯುತಕ್ಕ ಕಾರ್ಮಿಕರನ್ನು, ಬಡವರನ್ನು ಪುರಸ್ಕರಿಸುವ ಬಗ್ಗೆ ಯೋಚನೆ ಇಲ್ಲದೆ ನತ್ಯ ಮಾಡುತ್ತೇನೆ, ಧರ್ಮ ಮಾಡುತ್ತೇನೆ ಎಂದು ಹೇಳಿದರೆ ನಂಬುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಕಳೆದ ವರ್ಷ 22 ನೇ ಮಾರ್ಚ್ ತಿಂಗಳಿನಲ್ಲಿ ಪ್ರಮಾಣ ವಚನ ಮಾಡುವಾಗ ನಾನೂ ಪ್ರಮಾಣ ಮಾಡಿದೆ. ಈಗ ಇವತ್ತು ದಿನನಿತ್ಯ ಮನೆಗೆ ಬೇಕಾಗಿರತಕ್ಕ ಪದಾರ್ಥದ ಬೆಲೆ ಯಾವ ರೀತಿ ಏರುತ್ತಿದೆ ಎಂದು ನೋಡೋಣ. ನಾನು ಪ್ರಮಾಣ ಮಾಡಿದಾಗ, ಕಡಲೆಕಾಯಿ ಎಣ್ಣೆ ಮೂರೂವರೆ ರೂಪಾಯಿ ಇದ್ದದ್ದು ಇವತ್ತು 7 ರೂಪಾಯಿ ಆಗಿದೆ. ಹಿಂದೆ ಸೀಮೆ ಎಣ್ಣೆ ಲೀಟರ್‌ಗೆ 48 ಪೈಸೆ ಇದ್ದದ್ದು 68–70 ಪೈಸೆ ಆಗಿದೆ. ಸೌದೆ ಕೆ. ಜಿ. ಗೆ. 70 ಪೈಸೆ ಇದ್ದದ್ದು ಇವೊತ್ತು 130 ಪೈಸೆ ಆಗಿದೆ. ತೊಗರಿ ಬೇಳೆ ಒಂದು ರೂಪಾಯಿ 75 ಪೈಸೆ ಇದ್ದದ್ದು ಈಗ 2–30-3 ರೂಪಾಯಿಗಳಾಗಿದೆ. ಇತ್ತೀಚೆಗೆ ಕೆಲವು ದೇಶಗಳನ್ನು ನೋಡುವುದಕ್ಕೆ ಅವಕಾಶ ಸಿಕ್ಕಿತು.

ಶ್ರೀ ಕೋಣಂದೂರು ಲಿಂಗಪ್ಪ.—ಕಾಂಗ್ರೆಸ್ಸಿನವರಿಗಾದರೆ ಸಿಕ್ಕುತ್ತದೆ.

ಶ್ರೀ ಕೆ. ಶ್ರೀರಾಮುಲು.—ಕಾಂಗ್ರೆಸ್ಸಿಗೆ ಸೇರಿದವನು ಎಂದು ನನ್ನನ್ನು ಕಳುಹಿಸಲಿಲ್ಲ. ಅದರ ಬಗ್ಗೆ ನನ್ನ ಹತ್ತಿರ ಇದೆ ಯಾರು ಬೇಕಾದರೂ ಅದನ್ನು ನೋಡಬಹುದು. ಅಲ್ಲಿನ ಪ್ರತಿ ಹೋಟೆಲಿನಲ್ಲಿಯೂ ಊಟ ಮಾಡಿದ್ದೇನೆ. ಮತ್ತು ಮನೆಯಲ್ಲೂ ಊಟಮಾಡಿದ್ದೇನೆ. ಅಲ್ಲಿನ ಸರಕಾರ 1935 ಇಸವಿಯಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಧಾರಣೆವಾಸಿಗಳನ್ನು ಸೀಮಿತದಲ್ಲಿ ಇಟ್ಟಿದ್ದಾರೆ. ಒಂದು ವರ್ಷದಿಂದ 2 ಪರ್ಸೆಂಟ್ ಕೂಡ ಜಾಸ್ತಿ ಆಗುವುದಕ್ಕೆ ಅವಕಾಶ ಕೊಡಲಿಲ್ಲ. ನಮ್ಮಲ್ಲಿ ಹೋದ ವರ್ಷದ ಬೆಲೆಗೂ ಈ ವರ್ಷದ ಬೆಲೆಗೂ ಹೋಲಿಸಿ ನೋಡಿದರೆ 100 ಕ್ಕೆ 100 ಪಾಲು ಜಾಸ್ತಿಯಾಗಿದೆ. ಅದು ಹೇಗೆ ಜಾಸ್ತಿ ಆಯಿತು? ಅದಕ್ಕೆ ಕಾರಣ ಏನು? ನಾವು ಏನು ಭಾಷಣಗಳನ್ನು ಮಾಡಿದರೂ ಕೂಡ ಅವರಿಗೆ ದಿನನಿತ್ಯದ ಆಹಾರ ಪದಾರ್ಥಗಳನ್ನು ಕೊಂಡು ಕೊಂಡು ಜೀವನ ಮಾಡುವವರೆಗೆ ನಮ್ಮ ಭಾಷಣ ದಿಂದ ಅವರನ್ನು ತೃಪ್ತಿ ಪಡಿಸುವುದಕ್ಕೆ ಸಾಧ್ಯವಿಲ್ಲ. ಅವರ ಪರಿಸ್ಥಿತಿ ಬಹಳ ಕಠಿಣವಾಗಿದೆ ಎಂದು ನನ್ನ ಅಭಿಪ್ರಾಯ. ಹಿಂದಿನ ಸರಕಾರ ಇದ್ದದ್ದಕ್ಕಿಂತ ನಿಮಗೆ ಕೊಡಲಿಲ್ಲ. ಅವರು ನಿಮಗೆ ವಹಿಸಿದ್ದಾರೆ ಈ ರೀತಿ ನಮ್ಮ ಸರಕಾರಕ್ಕೆ ಅಷ್ಟು ಕಷ್ಟ ಬರುತ್ತಾ ಇರಲಿಲ್ಲ ಎಂದು ಒಪ್ಪುತ್ತೇನೆ. ಆಹಾರ ಧಾರಣೆಗಳ ಬಗ್ಗೆ ನಮ್ಮ ಪಾಲಿಸಿ ಏನು ಇದೆ ಎಂದರೆ ರೇಷನ್ ಕಾರ್ಡ್‌ನಲ್ಲಿ ಒಂದು ಕೆ. ಜಿ. ಅಕ್ಕಿಯನ್ನು ಒಬ್ಬನಿಗೆ ತಿಂಗಳಿಗೆ ಕೊಡುತ್ತೀರಿ. ಅವನಿಗೆ ಒಟ್ಟು ಬೇಕಾಗಿರುವುದು 15 ಕೆ. ಜಿ. ಅಕ್ಕಿ. ನೀವು ಒಂದು ಕೆ. ಜಿ. ಅಕ್ಕಿ ಕೊಟ್ಟರೆ ಉಳಿದ 14 ಕೆ. ಜಿ. ಅಕ್ಕಿಯನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳಬೇಕಾಗುತ್ತದೆ. ನೀವು ಡಿಪೋಗಳಿಗೆ ಏನು ಅಕ್ಕಿಯನ್ನು ಕೊಡುತ್ತೀರಿ ಅದೇ ಅಕ್ಕಿಯನ್ನು ಅವನು ಬ್ಲಾಕ್‌ನಲ್ಲಿ ಜನರಿಗೆ ಮಾರುತ್ತಾನೆ. ರವೆಯನ್ನು ಡಿಪೋಗಳಲ್ಲಿ 1-60 ಪೈಸೆಗೆ ಕೊಟ್ಟರೆ ಅದನ್ನು ಆಚೆಕಡೆ 2–30 ಪೈಸೆಗೆ ಕಳ್ಳತನದಿಂದ ಜನಗಳಿಗೆ ಮಾರುತ್ತಾರೆ. ಅದನ್ನು ಸರಿಪಡಿಸುವುದಕ್ಕೆ ಆಗದೇ ಇರತಕ್ಕ ಪ್ರಶ್ನೆ ಅಲ್ಲ. ಸರಕಾರ ಮನಸ್ಸು ಮಾಡಿದರೆ ಸಾಧ್ಯ ಇದೆ ಎಂದು ಹೇಳುತ್ತೇನೆ. ಈಗ ಬಡವರು ಬ್ಲಾಕ್ ಮಾರ್ಕೆಟ್‌ನಲ್ಲಿ ಹೆಚ್ಚು ದುಡ್ಡು ಕೊಟ್ಟು ಆಹಾರ ಧಾನ್ಯಗಳನ್ನು ಕೊಂಡು ಕೊಂಡು ಜೀವನ ಮಾಡುವಾಗ, ಸರಕಾರದ ಮೇಲೆ ಒಳ್ಳೆಯ ಅಭಿಪ್ರಾಯ ಹೇಗೆ ಬರುವುದಕ್ಕೆ ಸಾಧ್ಯ ಎನ್ನುವ ಪ್ರಶ್ನೆಯನ್ನು ಕಾರಿತು ಪ್ರಸ್ತಾಪ ಮಾಡುತ್ತಿದ್ದೇನೆ.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳುತ್ತೇನೆ. ನಾನು ಮೊನ್ನೆ ದಾಂಡೇಲಿಗೆ ಹೋಗಿದ್ದೆ. ಅಲ್ಲಿ ಪೇಪರ್ ಮಿರ್ ಇರುವುದು ತಮಗೆಲ್ಲಾ ಗೊತ್ತಿದೆ. ಅದು ಪೈ ವೇಟ್‌ಪರ್‌ಸನ್ಸ್ ಕನ್‌ಸೆನ್ ಆಗಿದೆ. ಅಲ್ಲಿ ಪೂರ್ತಿ ವಾರವೂ ಕೆಲಸ ನಡೆಯುತ್ತದೆ. ಐದೂ

(ಶ್ರೀ ಕೆ. ಶ್ರೀರಾಮುಲು)

ವರೆ ಗಂಟೆಗೇ ಬೀದಿ ದೀಪಗಳನ್ನು ಉರಿಸುತ್ತಾರೆ. ? ನಮ್ಮಲ್ಲಿ ಏಳೂವರೆ ಗಂಟೆಗೆ ಬೀದಿ ದೀಪಗಳು ಬರುತ್ತವೆ. ಇಲ್ಲಿನ ಕಾರ್ಮಿಕರಿಗೆ ವಾರಕ್ಕೆ ಮೂರು ದಿವಸ ಕೆಲಸ ಸಿಕ್ಕುವುದಿಲ್ಲ. ಅದುದರಿಂದ ಇಲ್ಲ ನಮಗೆ ವಿದ್ಯುಚ್ಛಕ್ತಿ ಸೌಕರ್ಯ ಇಲ್ಲದೆ ತೊಂದರೆ ಆಗಿದೆ. ಒಂದು ಕಡೆ ಉತ್ಪನ್ನ ಮಾಡುವ ಶಕ್ತಿ ಇದ್ದರೂ ಸರಕಾರ ವಿದ್ಯುಚ್ಛಕ್ತಿಯ ಸೌಕರ್ಯವನ್ನು ಕೊಡದೆ ತೊಂದರೆಯಾಗಿದೆ. ಒಂದು ಕಡೆ ಪ್ರೈವೇಟ್ ಪಾರ್ಟಿಗಳಿಗೆ ಅವರಿಗೆ ಬೇಕಾದಷ್ಟು ವಿದ್ಯುಚ್ಛಕ್ತಿ ಸಪ್ಲೈ ಆಗುತ್ತಾ ಇದೆ. ಇದು ಸರಕಾರದ ನೀತಿಯೇ ಎಂದು ನನಗೆ ಅರ್ಥವಾಗುವುದಿಲ್ಲ. ಇದರ ಬಗ್ಗೆ ಹೇಳುತ್ತಾ ಹೋದರೆ ಬಹಳ ಕಠಿಣವಾಗಿ ಹೇಳಬೇಕಾಗಿ ಬರುತ್ತದೆ. ಮಾನ್ಯ ಮಂತ್ರಿಗಳು ಇಲ್ಲಿಯೇ ಕೂತಿದ್ದಾರೆ. ಈ ತರಹ ಆಗಬಾರದೆಂದು ಹೇಳುತ್ತೇನೆ. ಸರಕಾರ ಒಂದು ಕಡೆ ಖಾಸಗಿಯವರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇರುವಾಗ ಇನ್ನೊಂದು ಕಡೆ ವಿದ್ಯುಚ್ಛಕ್ತಿಯನ್ನು ಸಪ್ಲೈ ಮಾಡದೆ ಇರುವುದಕ್ಕೆ ಕಾರಣ ಏನು ? ಇದನ್ನು ಸರಕಾರ ಬಹಳ ಎಚ್ಚರಿಕೆಯಿಂದ ನೋಡಬೇಕೆಂದು ಹೇಳುತ್ತೇನೆ. ಇದನ್ನು ತಾವು ಉದಾಸೀನದಿಂದ ಕಾಣುವುದಾದರೆ ಬಹುಶಃ 20 ವರ್ಷಗಳ ಕಾಲ ಏನು ಜನ ಸಹಿಸಿದರು ಅದನ್ನು ಇನ್ನು ಮುಂದೆಯೂ ಕೂಡ ಜನ ಸಹಿಸುತ್ತಾರೆ ಎಂದು ತಿಳಿದುಕೊಳ್ಳುವುದು ತಪ್ಪು ಎಂದು ಕೇಳುತ್ತೇನೆ. ಶ್ರೀಮಾನ್ ದೇವೇಗೌಡರು ಭಾಷಣ ಮಾಡುತ್ತಾ ಕೆಲವು ವಿಚಾರಗಳನ್ನು ಹೇಳಿದರು.

2-30 P.M.

ನಾನು ಹೇಳುವುದು ನೀವೂ ಹಾಗೂ ನಾವೂ 1969ರವರೆಗೆ ಒಂದಾಗಿಯೇ ಇದ್ದೆವು. ಆಗ ಇದ್ದ ಬೇಜವಾಬ್ದಾರಿ ಸರಕಾರದ ನೀತಿಯಿಂದಾಗಿ ಇಂತಹ ಕಷ್ಟಗಳೆರ್ಲಾ ಬರುತ್ತಿವೆ. ಈಗ ನೀವು ಬೇರೆಯಾಗಿದ್ದೀರಿ ಮತ್ತು ಇನ್ನು ಸತ್ಯಾಗ್ರಹ ಮಾಡುತ್ತೇವೆಂದು ಬೇರೆ ಹೇಳುತ್ತಿದ್ದಾರೆ. ನಾವೇನೂ ನಿಮ್ಮ ಪಕ್ಷದ ಶ್ರೀ ವೀರೇಂದ್ರ ಪಾಟೀಲರ ಹಾಗೆ, ಹಾಗೂ ರಾಮಕೃಷ್ಣ ಹೆಗ್ಗಡೆಯವರ ಹಾಗೆ ಮನೆಗಳನ್ನು ಮಾಡಿಲ್ಲ ಹಾಗೂ ಇನ್ನಿತರರು ಮಾಡಿರುವ ಹಾಗೆ ಭೂಮಿಗಳನ್ನು ಮಾಡಿಲ್ಲ. ಹೀಗೆ ಭೂಮಿಯನ್ನು ಪಡೆಯುತ್ತಿದ್ದರೆ ಬಡವರಿಗೆ ಮನೆಗಳನ್ನು ಹಂಚಲಿಕ್ಕೆ ಹೇಗೆ ತಾನೇ ಸಾಧ್ಯವಾಗುತ್ತದೆ !

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸದಸ್ಯರಿಗೆ ಒಂದು ಮಾತು ಇಲ್ಲ ಹೇಳಬೇಕಾಗಿದೆ. ಶ್ರೀಮಾನ್ ಹೆಗ್ಗಡೆಯವರೇ ಆಗಲೀ ಇಲ್ಲವೇ ಶ್ರೀ ವೀರೇಂದ್ರ ಪಾಟೀಲರೇ ಆಗಲೀ ಯಾರೇ ಮನೆ ಮಾಡಿರಲಿ ಅದು ಅವ್ಯವಹಾರಗಳಿಂದ ಮನೆ ಕಟ್ಟಿದ್ದರೆ ಇದರ ಬಗ್ಗೆ ಸರಕಾರ ನೇರವಾಗಿ ವಿಚಾರಣೆ ಮಾಡಿ ಹೇಳಬಹುದು. ಸುಮ್ಮನೆ ಇಲ್ಲಿ ಬರೀ ಮಾತು ಹೇಳುತ್ತ, ಅವರ ಮಾಡಿದ ಪಾಪವನ್ನು ನೀವೇಕೆ ಹೊರಬೇಕು ಎಂದು ಹೇಳುವುದು ವಿರೋಧಾಭಾಸವಾಗುತ್ತದೆ. ನಾನು ಆಗಲೇ ಹೇಳಿದ್ದೆ ಜವಾಬುದಾರಿಯಾಗಿರುವವರು ಯಾರೇ ಆಗಿರಲಿ ಅವರು ಅಕ್ರಮ ವ್ಯವಹಾರಗಳನ್ನು ಮಾಡಿದ್ದರೆ ಇದರ ಬಗೆ ವಿಚಾರಣೆ ಮಾಡಲೇಬೇಕು. ಇದಕ್ಕೆ ಸರಕಾರದವರು ನಿರ್ದೇಶನ ಕೊಡುತ್ತಾರೆಯೇ ? ನಾನು ವಿರೋಧಪಕ್ಷದ ನಾಯಕನಾಗಿ ಇಲ್ಲ ಜವಾಬುದಾರಿಯಿಂದ ಈ ಮಾತು ಹೇಳುತ್ತಿದ್ದೇನೆ. ನಾನೇನೂ ಇಲ್ಲ ಮನೆ ಮಾಡಿಲ್ಲ. ಶ್ರೀಮಾನ್ ಚನ್ನ ಬಸಪ್ಪನವರು ಮಾಡಿರಬಹುದು. ಇದಕ್ಕಾಗಿ ನಾನು ಹೇಳುವುದು ಕಳೆದ 25 ವರ್ಷಗಳಿಂದಲೂ ಅವರು ಎಷ್ಟೋ ದೊಡ್ಡ ವ್ಯಕ್ತಿಗಳಾಗಿರಲಿ, ಪ್ರಧಾನ ಮಂತ್ರಿಗಳೇ ಆಗಿರಲಿ, ಇಲ್ಲವೇ ದೇಶದ ಮುಖ್ಯ ಮಂತ್ರಿಗಳೇ ಆಗಿರಲಿ ಇದರ ಬಗ್ಗೆ ಒಂದು ನಿರ್ದಿಷ್ಟವಾದ ನಿರ್ಣಯ ಮಾಡಿ ಈ ಮನೆಯಲ್ಲಿ ತಂದು ಅದರ ಮೂಲಕ ವಿಚಾರಣೆ ಮಾಡಲು ನಿಮ್ಮ ಆಡಳಿತ ಪಕ್ಷಕ್ಕೆ ಧೈರ್ಯ ಇದೆಯೇ ? ಅದನ್ನಾದರೂ ಇಲ್ಲ ತಿಳಿಸಿ.

ಶ್ರೀ ಕೆ. ಶ್ರೀರಾಮುಲು.—ಪರೋಕ್ಷವಾಗಿ ನಿಮಗೆ ಆಗಲೇ ಉತ್ತರ ಹೇಳಿದ್ದೇನೆ. ಸರಕಾರ ಇದರ ಬಗ್ಗೆ ಸರಿಯಾದ ಉತ್ತರ ಕೊಡುತ್ತಾರೆ. ನಾನು ಇಲ್ಲ ಸರಕಾರವನ್ನು ಪ್ರಾರ್ಥನೆ ಮಾಡುವುದು ಆಹಾರ ಪದಾರ್ಥಗಳನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ ಇದರಲ್ಲಿ ಬ್ಲಾಕ್‌ಮಾರ್ಕೆಟ್ಟು ಆಗುತ್ತಿದೆ, ಮತ್ತು ಜನಕ್ಕೆ ಈಗ ರವೆ, ಗೋಧಿ ಹಿಟ್ಟು ಒಂದೂ ಸಿಗುತ್ತಿಲ್ಲ. ಈಚೆಗಂತೂ ಸಾವಿರಾರು ಬೇಕರಿಗಳು ನಗರದಲ್ಲಿ ಆಗಿವೆ. ಇದರಿಂದ ಇಲ್ಲಿಗೆ ಗೋಧಿಯ ಪದಾರ್ಥಗಳು ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೋಗುತ್ತಿವೆ ಇಂತಹವರಿಗೆ ಕೊಟ್ಟಿರುವ ಲೈಸನ್ಸ್‌ಗಳನ್ನು ರದ್ದು ಮಾಡಬೇಕು. ನನಗೇ ತಿಳಿದಿರುವಂತೆ ಒಬ್ಬರು ರಾಜಾಜಿನಗರದಲ್ಲಿ ಹಾಗೂ ಶ್ರೀರಾಂಪುರದಲ್ಲಿ ಮತ್ತು ಯಶವಂತಪುರದಲ್ಲಿ ಒಂದೊಂದು ಬೇಕರಿಗಳನ್ನು ಮಾಡಿಕೊಂಡಿದ್ದಾರೆ. ಹೀಗೆ ಒಂದು ರೇಷನ್ ಡಿಪೋ

ತೆರೆಯಲು ಐದುಸಾವಿರ ರೂಪಾಯಿಗಳ ಲಂಚ ಕೊಟ್ಟರೆ ಅವರಿಗೆ ಸುಲಭವಾಗಿ ಸಿಗುತ್ತದೆ. ಇಂದು ರೇಷನಿಂಗ್ ಪದ್ಧತಿ ತಂದಿರುವುದರಿಂದ ಬ್ಲಾಕ್‌ಮಾರ್ಕೆಟ್ಟು ದಿನೇ ದಿನೇ ಹೆಚ್ಚುತ್ತಿದೆ. ಇದರಿಂದ ಬಡವರು ಜೀವನ ನಡಸಲು ಬಹಳ ತೊಂದರೆಗಳಾಗುತ್ತಿವೆ. ಇವಕ್ಕೆ ಸರಕಾರ ಅವಕಾಶ ಕೊಡ ಬಾರದು. ನಮ್ಮ ಸರಕಾರ ಕಾರ್ಮಿಕರ ಕಡೆ ಹೆಚ್ಚು ಗಮನ ಹರಿಸುತ್ತಿದ್ದು - ಕಾರ್ಮಿಕರಿಗೆ ಹೆಚ್ಚು ಸಹಾಯ ಮಾಡಿದರೆ ಉತ್ಪಾದನೆಯೂ ಜಾಸ್ತಿಯಾಗುತ್ತದೆ. ನಾನು ಅಡಳಿತ ಪಕ್ಷದವ ನಾದರೂ ಕಾರ್ಮಿಕರ ಹಿತರಕ್ಷಣೆ ಸರಕಾರ ಸರಿಯಾಗಿ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳ ಬೇಕಾಗಿದೆ. ಸರಕಾರದವರು ಇವೆಲ್ಲದರ ಕಡೆಗೆ ವಿಚಾರ ಮಾಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Statement of the Minister for Public Works and Electricity

re : Providing employment to people from drought areas

Sri H. M. CHANNABASAPPA.—An assurance was held out on the floor of this House some time during December 1972 that arrangements would be made to provide emyloyment for about 10,000 workers from drought areas. This has been done. In ful-fillment of the assurance held out by me on the floor of this House Yesterday that necessary arrangements would be made to despatch people of drought areas who are now at Bangalore and without employment, to Kalinadi Project area. I wish to submit that prompt action has been taken. Last night a contingent of 59 workers was despatched by M.S.R.T.C. Special Bus. This morning, another special bus left Bangalore with a contingent of 64 workers, one more bus with about 60 or 65 workers has either left by now or is about to leave in about an hour. Others who willing to go will also be sent as and when they come forward. The Deputy Commissioner, Bangalore will keep track of the workers willing to go to Kalinadi and take action as and when necessary.

The workers numbering 123 who were despatched by the first two buses will be put up at Tattihalla camp. The next two bus load of workers will be put up at Panasoli near Dandeli. The 3rd contingent of two bus load of workers who may be despatched, will find their camp at Supa.

It may be mentioned here that already a contingent of 120 worker from land in Gulbarga District have come and camped at Supa. They came on the 7th Feb. 1973.

In this context, I would like to acknowledge with gratitude the help and co-operation rendered by some of the Members of this House including Sriyutus Konandur Lingappa, Kagodu Thimmappa, Viswanatha Reddy Mudnal, Vatal Nagaraj and Bapu Gowda, I look forward for such co-operation and help from all members of this House at all times in finding solutions for this difficult humanitarian work.

I would like to inform Hon'ble Members of this House that the following arrangements are made to look to the comforts of the workers

(SRI H. M. CHANNABASAPPA)

of Drought areas sent to Kalinadi and allied power projects under Mysore Power Corporation.

1. Each contingent of workers is accompanied by an Officer. He will see to their food and other comforts of the workers till they reach the camp allotted to them.

2. *Liaison Officer* : One officer designated. Relief Liaison officer is ordered to be stationed at Dharwar. He will work in close liaison with the officers of Revenue, PWD and other Departments of Government and also Members of Legislature and Parliament to meet the employment requirements of workers in drought stricken areas.

3. *Supervisory Officer* : For each camp of 200 to 300 workers, one Junior Engineer will be posted exclusively to look after their requiremements such as supply of rations, medical facilities etc.

4. *Medical Facilities* : For the time being, the District Health Officers is directed to examine all immigrants and to take such preventive measures as may be necessaay to safeguard the health of the people. Arrangements will also be made for establishing Mobile Hospitals.

5. *RationShops* : Fair Price Ration Shops will be opened one at each camp. Project Authorities will keep atleast for one month's requirements, in stock.

6. *Drinking Water* : The present Labour camps are situated on the banks of streams and rivers. For drinking purposes, chlorinated water will be made available in tanks constructed for the purpose.

7. *Street Lighting* : Wherever the power line is nearer, the Electric lights will be provided for the colony. In other places, Kerosene street lighting will be arranged. Kerosene will also be kept for sale in Fair Price Shops.

8. *Food Grains for aged people* : All aged people will be provided with free rations as per rules framed in this behalf.

9. *Free Food* : Will be supplied during transport and for 3 days subsequent to the workers settling down in their camps.

10. *Law and Order* : As the camps are dispursed in the interior, Police will make necessary arrangements to maintain Law and Order.

11. *Payments*: Payments shall be made on the basis of task-work combined with muster roll. The help of group leaders will be availed of to look to prompt and equitable payment.

12. *Implements*: Necessary implements for workers are already purchased and kept in store.

13. *Nature of Work*: The nature of the work consists of jungle clearing, road formation (earth work) breaking and collection of soling and road metal and brick making etc. Necessary training will be imparted for brick-making to those who are interested.

14. *Educated Un-employees*: Educated un-employees will also be provided with works for which they are suited and the extent possible.

Yesterday members of this House expressed great desire to know the particulars and have list of all works having sizeable employment potetial lying in different taluks of the state. I assure that such a list will be placed before this House very early.

Motion of thanks to the Governor's Address

[Debate Contd.]

ಶ್ರೀ ಕೆ. ಎಂ. ನಾಗಣ್ಣ (ಚೆಕ್ಕಹೇಜೆ).—ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದ ಬೆಳೆರೆ ನಾನು ಮಾತನಾಡುವುದು ಇಷ್ಟೆ. ಈ ಭಾಷಣ ರಾಜ್ಯಪಾಲರದ್ದು ಅಲ್ಲ. ಸರ್ಕಾರದ ವರು ಯಾವ ಭಾಷಣ ಮಾಡಬೇಕೆಂದು ರಾಜ್ಯಪಾಲರಿಗೆ ಆದೇಶ ನೀಡುತ್ತಾರೋ ಅದನ್ನು ಅವರು ಮಾಡುತ್ತಾರೆ. ಈ ಭಾಷಣಕ್ಕೆ ಪೂರ್ತಾ ಜವಾಬ್ದಾರಿ ಸರ್ಕಾರವೇ ಹೊರತು ರಾಜ್ಯಪಾಲರಲ್ಲ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಹೊಸದಾಗಿ ಎನೇನು ಆಶ್ವಾಸನೆಗಳನ್ನು ನೀಡಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಅವಕ್ಕೂ ಹೆಚ್ಚಲು ಹೋದ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಏನೇನು ವಿಷಯಗಳು ಅಡಕವಾಗಿದ್ದವು, ಅದರ ಪೈಕಿ ಎಷ್ಟನ್ನು ಕಾರ್ಯರೂಪಕ್ಕೆ ತಂದಿದ್ದಾರೆಂಬುದನ್ನು ಸಹ ಗಮನಿಸಬೇಕಾಗಿ ಬರುತ್ತದೆ.

ಮೊದಲನೆಯದಾಗಿ ರಾಜ್ಯಪಾಲರ ಭಾಷಣದ ಮೂರನೇ ಪುಟದಲ್ಲಿ ನ್ಯಾಷನಲ್ ಏಮ್ ಪ್ರಚಾರವನ್ನು ಹೇಳಲಾಗಿದೆ. ಈ ನಿಧಿಯ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಅಮ್ಮಂಗಂ ಅವರನ್ನು ಸಹ ಒಬ್ಬ ಭಾಗಿದಾರರನ್ನಾಗಿ ಮಾಡುವುದಕ್ಕೆ ಸರ್ಕಾರ ಕಳಿಸಿತ್ತು. ಆ ವಿಷಯ ಈ ಭಾಷಣದಲ್ಲಿ ಕಾಣುತ್ತಿಲ್ಲ. ಕಾರಣ ಗೊತ್ತಾಗುತ್ತಿಲ್ಲ. ಅಮ್ಮಂಗಂ ಅವರು ನ್ಯಾಷನಲ್ ಏಮ್ ಹೋಗಿದ್ದರು ಎಂದು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದರೆ, ವಿರೋಧಪಕ್ಷದವರಿಗೆ ಹೆಚ್ಚಿನ ಮಾಹಿತಿ ಬಂದೀತು ಎಂಬ ಭಾವನೆಯಿಂದ ಸೇರಿಸಿಲ್ಲವೇನೋ ಎಂದು ನನಗನ್ನಿಸುತ್ತದೆ. ಈ ರೀತಿ ಸೇರಿಸದೇ ಇರುವುದು ತಪ್ಪು ಎಂದು ಹೇಳಿದೆ ವಿಧಿ ಇಲ್ಲ.

ಎರಡನೆಯದಾಗಿ ಅವೇ ಪುಟದಲ್ಲಿ ನೇಕಾರರಿಗೆ ಅನುಕೂಲ ಮಾಡಿಕೊಡುವ ವಿಷಯ ಪ್ರಸ್ತಾಪ ಮಾಡಿದ್ದಾರೆ. ನಾನು ಇದೇ 8ನೆಯ ಮತ್ತು 9ನೇ ತಾರೀಖು ಬೆಳಗಾಂನಲ್ಲಿದ್ದೆ. ಆದೇ ಸಮಯದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಮತ್ತು ಮಾನ್ಯ ರೆವಿನ್ಯೂ ಮಂತ್ರಿಗಳು ಸಹ ಬೆಳಗಾಂಗೆ ಬಂದಿದ್ದರು. ಆವರನ್ನು ಕಾಣಲು ಬಹಳಷ್ಟು ಪ್ರದೇಶಗಳಿಂದ ನೇಕಾರರು ಸಹ ಬಂದಿದ್ದರು. ಸರ್ಕಾರದ ಒಂದು ಅನುಕೂಲದಿಂದ ಸಂತೃಪ್ತರಾಗಿದ್ದೇವೆಂದು ಅವರ್ಯಾರೂ ಹೇಳಿದ ಹಾಗೆ

(ಶ್ರೀ ಕೆ. ಎಂ. ನಾಗಣ್ಣ)

ಕಾಣಲಿಲ್ಲ. ಅಂದರೆ ಅವರುಗಳಿಗೆ ಸರ್ಕಾರದವರು ಯಾವ ಏರ್ಪಾಡುಗಳನ್ನೂ ಮಾಡಿದಂತೆ ಕಾಣಲಿಲ್ಲ. ಇದರ ಬಗ್ಗೆ ಕೇವಲ ಘೋಷಣೆ ಮಾಡಿದಂತೆ ಕಾಣುತ್ತದೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಕೊಳಚೆ ಪ್ರದೇಶಗಳನ್ನು ಇಂಪ್ರೂವ್ ಮಾಡುವ ವಿಷಯವನ್ನು ಹೇಳಲಾಗಿದೆ. ಆದರೆ ಇಂದು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳು ಹೆಚ್ಚಾಗುತ್ತಿರೇ ಇವೆ. ಇಂಪ್ರೂವ್ ಮಾಡುತ್ತಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದು ಸರಿಯಾದುದಲ್ಲ, ವಾಸ್ತವಾಂಶಕ್ಕೆ ದೂರವಾಗಿದೆ ಎಂದು ಹೇಳದೆ ವಿಧಿಯಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇಂಪ್ರೂವ್ ಮಾಡುವುದಕ್ಕೆ ಬದಲು ಎಲ್ಲ ಮುನಿಸಿಪಾಲಿಟಿಗಳನ್ನು ಮತ್ತು, ಕಾರ್ಪೊರೇಷನ್‌ಗಳನ್ನು ರದ್ದು ಮಾಡುತ್ತಿದ್ದಾರೆ. ಇದೇ ತಿಂಗಳು 22ನೇ ತಾರೀಖು ಬೆಳಗಾವಿ ಮುನಿಸಿಪಾಲಿಟಿಯನ್ನು ರದ್ದು ಮಾಡುವವರಿದ್ದಾರೆ. ಎಲ್ಲ ಅಧಿಕಾರಗಳನ್ನು ಕೇಂದ್ರೀಕರಣ ಮಾಡಿಕೊಳ್ಳುತ್ತಿರುವುದರ ಅರ್ಥವಾದರೂ ಸಹ ಏನು ಎಂದು ಕೇಳಬೇಕಾಗಿದೆ. ನಮಗೆ ಸ್ವರಾಜ್ಯ ಬಂದು 25 ವರ್ಷವಾಯಿತು. ಅಲ್ಲಿಂದ ಇಲ್ಲಿಯವರೆಗೆ ಇಂತಹ ಅಕ್ರಮವಾದ ಕೆಲಸವನ್ನು ಯಾರೂ ಮಾಡಿರಲಿಲ್ಲ. ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ ಶ್ರೀ ಆರ್. ಎಂ. ಪಾಟೀಲರು ಬೆಂಗಳೂರು ನಗರ ಕಾರ್ಪೊರೇಷನ್ನನ್ನು ರದ್ದು ಮಾಡುವುದರ ಮೂಲಕ ಒಳ್ಳೆಯ ಕೀರ್ತಿಯನ್ನು ಪಡೆದುಕೊಂಡರು. ಈಗಿನವರು ಸಹ ಎಲ್ಲ ಮುನಿಸಿಪಾಲಿಟಿಗಳನ್ನು ರದ್ದು ಮಾಡುವುದಕ್ಕೆ ಹೊರಟಿದ್ದಾರೆ. ಇದೇ ಅವರ ಕೆಲಸವೆಂದು ಕಾಣುತ್ತದೆ. ಸ್ಲಮ್ ಇಂಪ್ರೂವ್‌ಮೆಂಟ್ ಮಾಡುತ್ತೇವೆಂದು ಈ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುವುದು ವಾಸ್ತವಾಂಶಕ್ಕೆ ದೂರವಾಗಿದೆ.

ಪಶುಸಂಗೋಪನೆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಲಾಗಿದೆ. ಮಿಶ್ರತಳಿ ಜಾನುವಾರುಗಳ ಸುಧಾರಣೆ ಬಗ್ಗೆ ಹೇಳಿದ್ದಾರೆ. ಇಂದು ಬೆಂಗಳೂರು ನಗರ ಒಂದರಲ್ಲಿಯೇ 75 ಸಾವಿರ ಜಾನುವಾರುಗಳಿವೆ. ಇವುಗಳ ಮಾಲೀಕರಿಗೆ ಬೂಸ ಸಿಗುತ್ತಿಲ್ಲ; ಮೇವು ಸಿಗುತ್ತಿಲ್ಲ. ಕೆಲವರು ಜಾನುವಾರುಗಳನ್ನು ರಸ್ತೆಗಳಲ್ಲಿ ಬಿಟ್ಟಿದ್ದಾರೆ. ಮದ್ರಾಸ್‌ನಲ್ಲಿ ಜಾನುವಾರುಗಳ ಅನುಕೂಲಕ್ಕಾಗಿಯೇ ಒಂದು ಕಾರೋನಿಯನ್ನು ಮಾಡಿ ದನಗಳ ಮಾಲೀಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ ಬೆಂಗಳೂರಿನಲ್ಲಿ ಯಾವ ಒಂದು ಅನುಕೂಲವನ್ನೂ ಮಾಡಿಕೊಡದಿರುವುದನ್ನು ನೋಡಿದರೆ ನನಗಾದರೂ ಆಶ್ಚರ್ಯವಾಗುತ್ತದೆ.

ಇನ್ನು ಆಹಾರದ ಹಂಚಿಕೆಯ ಬಗ್ಗೆ ಮಾತನಾಡಬೇಕಾಗಿದೆ; ಅಕ್ಕಿ ಮತ್ತು ಗೊಧಿಯ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ. ಇದರ ಪರಿಣಾಮ ಏನಾಗುತ್ತದೆಂಬುದು ಗೊತ್ತಿಲ್ಲ. ಈಗಾಗಲೇ ದವಸಧಾನ್ಯಗಳ ಬೆಲೆಗಳು ಹಾಸ್ಯಾಸ್ಪದವಾಗುತ್ತಿವೆ. ಬೆಲೆ ಏರಿಕೆಯ ಬಗ್ಗೆ ನಾನು ಅನೇಕ ಪ್ರಶ್ನೆಗಳನ್ನು ಈ ಸದನದಲ್ಲಿ ಹಾಕಿದ್ದೇನೆ. ಮತ್ತು ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದೇನೆ. ಆ ರೀತಿ ಪ್ರಸ್ತಾಪ ಮಾಡಿದಾಗೆಲ್ಲಾ ಮಾನ್ಯ ಆಹಾರ ಸಚಿವೆಯರು ನಮಗೆ ದೆಹಲಿಯಿಂದ ಬೇಕಾದಷ್ಟು ಅಕ್ಕಿ ಬರುತ್ತದೆ. ಅದನ್ನು ಡಿಪೋಗಳಿಗೆ ಹಂಚುತ್ತೇವೆ. ಆಗ ಬೆಲೆಗಳು ಕಡಿಮೆಯಾಗುತ್ತದೆಂಬ ಭರವಸೆ ಕೊಟ್ಟರು. ಆ ಭರವಸೆ ಇಂದು ಪೊಳ್ಳು ಭರವಸೆಯಾಗುತ್ತಿದೆ. ಸುಮಾರು 12,149 ನ್ಯಾಯ ಬೆಲೆ ಅಂಗಡಿಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳುತ್ತಿದ್ದಾರೆ. ಈ ಅಂಗಡಿಗಳಲ್ಲಿ ಅಕ್ಕಿ ಎಲ್ಲಿದೆ ? ತಿಂಗಳಿಗೆ ಒಬ್ಬರಿಗೆ ಒಂದು ಕೆ. ಜಿ. ಅಕ್ಕಿ ಕೊಟ್ಟರೆ ಅವರು ಬದುಕುವುದಕ್ಕೆ ಸಾಧ್ಯವೇ ? ಮಂತ್ರಿಗಳು, ಮಂತ್ರಿಗಳ ಮನೆಯವರು, ಅವರ ವರ್ಗದವರು ಒಂದು ಕೆ.ಜಿ. ಅಕ್ಕಿಯಿಂದ ಬದುಕುತ್ತಿದ್ದಾರೆಯೇ ? ಅಕ್ಕಿ ಹೆಚ್ಚು ಬೇಕಾದರೆ ಬ್ಲಾಕ್‌ಮಾರ್ಕೆಟ್‌ಗೆ ಹೋಗಬೇಕು. ಬ್ಲಾಕ್‌ಮಾರ್ಕೆಟ್‌ನವರಿಗೆ ಸರ್ಕಾರದವರು ಅನುಕೂಲ ಮಾಡಿಕೊಟ್ಟಿದ್ದಾರೆಂದು ಕಾಣುತ್ತದೆ. ಬ್ಲಾಕ್‌ಮಾರ್ಕೆಟ್‌ನಲ್ಲಿ ಅಕ್ಕಿ ಮತ್ತು ದವಸಧಾನ್ಯಗಳನ್ನು ದಾಸ್ತಾನು ಮಾಡಲು ತಾವು ಎನ್‌ಕರೇಜ್‌ಮೆಂಟ್ ಮಾಡುತ್ತಿರುವ ಹಾಗೆ ಕಾಣುತ್ತದೆ. ಈ ಇರಾಖೆ ಬಹಳ ಕಠಿನವಾದ ಇರಾಖೆಯಾಗಿದೆ. ಹಿಂದೆ ಈ ಆಹಾರ ಇರಾಖೆಯ ಮಂತ್ರಿಗಳಾಗಿದ್ದ ಶ್ರೀ ಜತ್ತಿಯವರಿಗೇ ಇವನ್ನು ನೋಡಿಕೊಳ್ಳುವುದು ಕಷ್ಟವಾಗಿತ್ತು. ಅಂಥದರಲ್ಲಿ ಇಂದು ಈ ಇರಾಖೆಯನ್ನು ಹೆಂಗಸರ ಕೈಯಲ್ಲಿ ಕೊಟ್ಟಿರುವುದನ್ನು ನೋಡಿದರೆ, ಅವರಿಗೆ ಅಷ್ಟೊಂದು ಶಕ್ತಿ ಎಲ್ಲಿದೆ ! ಈ ಇರಾಖೆಯು ಸಚಿವರು ಬಹಳ ತಾತ್ಸಾರದಿಂದಿರುವವರಾಗಿದ್ದಾರೆ. ಅವರಿಗೆ ಈ ಇರಾಖೆಯನ್ನು ನಿಭಾಯಿಸುವುದು ಕಷ್ಟಸಾಧ್ಯ ಕೆಲಸವಾಗಿದೆ. ಎಲ್ಲ ಮಹಿಳೆಯರು ಶ್ರೀಮತಿ ಇಂದಿರಾಗಾಂಧಿಯವರ ಹಾಗೆ ಮತ್ತು ಶ್ರೀಮತಿ ನಾಗರತ್ನಮ್ಮನವರ ಹಾಗೆ ಇರುವುದಕ್ಕೆ ಸಾಧ್ಯವಿಲ್ಲ;

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರ ಹೆಸರನ್ನು ಹೇಳುತ್ತೀರೋ ಇಲ್ಲವೋ ಎಂದು ನಾನು ನೋಡುತ್ತಿದ್ದೆ ?

ಶ್ರೀ ಕೆ. ಎಂ. ನಾಗಣ್ಣ.—ಹೇಳಿದ್ದಿದ್ದರೆ ಅವರು ಬಿಡುತ್ತಿರಲಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಇಲಾಖೆಯನ್ನು ಇವರ ಕೈಯಿಂದ ತಪ್ಪಿಸಿ, ಶ್ರೀ ಸಿದ್ಧವೀರಪ್ಪನವರಿಗೆ ಅಥವಾ ಶ್ರೀ ಚೆನ್ನಬಸಪ್ಪನವರಿಗೆ ವಹಿಸಬೇಕು. ಮುಖ್ಯವಾಗಿ ಡೈನಾಮಿಜಮ್ ಇರುವವರಿಗೆ ವಹಿಸಬೇಕು. ಬೇರೆಯವರಿಗೆ ಶಕ್ತಿ ಇಲ್ಲ ಎಂದು ನಾನು ಹೇಳುತ್ತಿಲ್ಲ. ಈ ಮಂತ್ರಿಗಳಿಗೆ ಹಲವಾರು ಖಾತೆಗಳನ್ನು ನೋಡಿಕೊಂಡು ಅನುಭವವಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಡೈನಾಮಿಜಮ್ ಇರುವ ಮಂತ್ರಿಗಳಿಗೆ ಈ ಖಾತೆಯನ್ನು ವಹಿಸಿ, ಜನರಿಗೆ ಆಗುತ್ತಿರುವ ಅನಾಹುತವನ್ನು ತಪ್ಪಿಸಬೇಕೆಂದು ಹೇಳುತ್ತಿದ್ದೇನೆ. ಈಗಿನ ಮಂತ್ರಿಗಳ ಬಗ್ಗೆ ನನಗೆ ಗೌರವವಿದೆ. ಬಹಳ ಮೃದು ಸ್ವಭಾವದವರು. ಅವರು ಈ ಖಾತೆಯನ್ನು ವಹಿಸಿಕೊಂಡ ಕೂಡಲೆ ಕೆಲವು ಅಂಗಡಿಗಳಿಗೆ ಹೋಗಿ ತನಿಖೆ ಮಾಡಿದರು. ನಂತರ ಆ ರೀತಿ ತನಿಖೆ ಮಾಡುವುದರಿಂದ ಏನೂ ಸುಖವಿಲ್ಲ. ಎಲ್ಲ ಕಡೆಯೂ ಇದೇ ರೀತಿ ಇದೆ ಎಂದು ನುಮ್ಮಾನಾದರು)

ಶ್ರೀಮತಿ ಇ. ಇ. ವಾಜ್ ಅವರ ಖಾತೆಯನ್ನು ಬೇರೆಯವರಿಗೆ ಕೊಡಬೇಕು; ಅವರಿಂದ ಆಹಾರ ಖಾತೆಯನ್ನು ವಜಾ ಮಾಡಬೇಕು ಎಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಎರಡೂ ಹೆಂಗಸರೂ ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀಮತಿ ಇಂದಿರಾಗಾಂಧಿ ಅವರು ಆಗುವುದಕ್ಕೆ ಆಗುವುದಿಲ್ಲ.

ಇನ್ನು ಕೈಗಾರಿಕಾ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ 10 ವರ್ಷಗಳ ಅವಧಿಗೆ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ವರ್ಷ 8 ಕೋಟಿ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡುತ್ತಾರೆಯೋ ಗೊತ್ತಾಗಲಿಲ್ಲ. ರೇಷ್ಮೆ ಉತ್ಪತ್ತಿಯನ್ನು ಜಾಸ್ತಿ ಮಾಡುವುದಕ್ಕೆ ಮತ್ತು ರೇಷ್ಮೆ ರಕ್ಷಂತಯಾರು ಮಾಡುದಕ್ಕೆ ಆ ಹಣವನ್ನು ಖರ್ಚು ಮಾಡುತ್ತಾರೆಂದು ಕಾಣುತ್ತದೆ. ಈ ವರ್ಷ ಜನವರಿ ತಿಂಗಳು ಮೊದಲನೆಯ ವಾರದಲ್ಲಿ ಒಂದು ಘಂಟೆಗೆ ಕೈಗಾರಿಕೋದ್ಯಮಿಗಳು ಮತ್ತು ಕೈ ಮಗ್ಗದ ಜನಗಳು ರೇಷ್ಮೆ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ನಗರಾಳ್ ಅವರನ್ನು ಕರೆದಿದ್ದರು. ಆ ಸಭೆಗೆ ನಾನು ಅಧ್ಯಕ್ಷನಾಗಿದ್ದೆ. ಆಗ ಈ ಕೈಗಾರಿಕೋದ್ಯಮಿಗಳು ಮತ್ತು ಕೈ ಮಗ್ಗಗಳನ್ನು ನಡೆಸತಕ್ಕ ಜನಗಳು ಶ್ರೀಮಾನ್ ನಗರಾಳ್ ಅವರಲ್ಲಿ ತಮ್ಮ ಕಷ್ಟಗಳನ್ನು ನಿವೇದನೆ ಮಾಡಿಕೊಂಡಾಗ ಅವರು ಆ ಜನಗಳಿಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಆದು ಏನೆಂದರೆ ಜನವರಿ ತಿಂಗಳು ಕೊನೆಯೊಳಗೆ ಅಥವಾ ಫೆಬ್ರುವರಿ ತಿಂಗಳ ಕೊನೆಯೊಳಗೆ ರೇಷ್ಮೆ ಬೆರೆಯನ್ನು ಸರ್ಕಾರದವರು ಇಳಿಸುತ್ತಾರೆ ಎಂದು ಅವರು ಭರವಸೆಯನ್ನು ಕೊಟ್ಟಿದ್ದರು ಈಗ ಏನಾಗಿದೆಯೆಂದರೆ ಜನವರಿ ತಿಂಗಳ ಮೊದಲನೆ ವಾರದಿಂದ ಫೆಬ್ರುವರಿ 3ನೇ ವಾರದವರೆಗೆ ಒಂದು ಕೆ.ಜಿ. ರೇಷ್ಮೆಗೆ 30 ರೂಪಾಯಿ ಜಾಸ್ತಿಯಾಗಿದೆ. ಆದರೆ ಶ್ರೀಮಾನ್ ನಗರಾಳ್ ಅವರು ಈ ಬಗ್ಗೆ ಏನು ಪ್ರಯತ್ನ ಮಾಡಿದರೋ ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ರೇಷ್ಮೆ ಬೆರೆಯನ್ನು ಇಳಿಸಿದರೆ ರೈತರ ಗತಿ ಏನು ಆಗಬೇಕು ?

ಶ್ರೀ ಕೆ. ಎಂ. ನಾಗಣ್ಣ 1973 ನೇ ಇಸವಿ ಜನವರಿ ಮೊದಲನೇ ವಾರದಲ್ಲಿ ಒಂದು ಕೆ. ಜಿ. ರೇಷ್ಮೆಗೆ ಏನು ಬೆರೆ ಇತ್ತೋ ಅವನ್ನು ಇಳಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ವಾಗ್ದಾನ ಮಾಡಿದ್ದರು ಅವರು ಆ ರೀತಿ ಬೆರೆಯನ್ನು ಇಳಿಸದೇ ಹೋದರೆ ಅವರು ಮಾತಿಗೆ ತಪ್ಪಿದಹಾಗಾಗುತ್ತದೆ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸರ್ಕಾರದವರು ಫಿಲಂ ಇಂಡಸ್ಟ್ರಿ ಕಾರ್ಪೊರೇಷನ್ ಎಂದು ಮಾಡಿ ಅದಕ್ಕೆ ಕೋಟ್ಯಾಂತರ ರೂಪಾಯಿ ಬಂಡವಾಳವನ್ನು ಹಾಕಿದ್ದಾರೆ. ಆ ಫಿಲಂ ಇಂಡಸ್ಟ್ರಿ ಕಾರ್ಪೊರೇಷನ್ನಿಗೆ ಶ್ರೀಮಾನ್ ಕೆ. ಕೆ. ಮೂರ್ತಿಯವರನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಕ ಮಾಡಿದ್ದಾರೆ. ಮೊನ್ನೆ ಶ್ರೀಮಾನ್ ಕೆ. ಕೆ. ಮೂರ್ತಿಯವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದು ಯಾರು ಯಾರು ಚಲನ ಚಿತ್ರವನ್ನು ಪ್ರೊಡ್ಯೂಸ್ ಮಾಡುತ್ತಾರೆ ಅವರಿಗೆ ಧನ ಚಿತ್ರೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ನಿನಿಂದ ಸಾಲ ಕೊಡುತ್ತೇವೆ ಒಂದು ಹೇಳಿದ್ದಾರೆ. ಮತ್ತು ಮಿನಿ ಥಿಯೇಟರುಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಇದರಲ್ಲಿ ಯಾರೇ ದುಡ್ಡು ಕೊಡುತ್ತೇವೆ

(ಶ್ರೀ ಕೆ. ಎಂ. ನಾಗಣ್ಣ)

ಎಂದು ಹೇಳಿದರೂ ಕೂಡ ಅದು ಸರ್ಕಾರದ್ದುದ್ದು. ಮತ್ತು ಸಾರ್ವಜನಿಕರ ದುಡ್ಡು. ಚಲನ ಚಿತ್ರೋದ್ಯಮದಲ್ಲಿರುವಷ್ಟು ಭ್ರಷ್ಟಾಚಾರ ಬಾಕಿ ಯಾವುದರಲ್ಲಿಯೂ ಇಲ್ಲ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ನನಗೆ ಈ ಚಲನಚಿತ್ರ ಉದ್ಯಮದಲ್ಲಿ 30 ವರ್ಷಗಳ ಅನುಭವ ಇದೆ. ನಾನು 1940ನೇ ಇಸವಿಯಿಂದ 1973ನೇ ಇಸವಿಯವರೆಗೂ ಈ ಚಲನಚಿತ್ರ ಉದ್ಯಮದಲ್ಲಿಯೇ ಇದ್ದೇನೆ. ಶ್ರೀಷಾನ್ ಕೆ. ಕೆ. ಮೂರ್ತಿಯವರಿಗೆ ನನಗೆ ಇರುವ ಅನುಭವದಲ್ಲಿ ಹತ್ತನೇ ಒಂದು ಭಾಗ ಕೂಡ ಇಲ್ಲ. ಈ ಚಲನಚಿತ್ರ ಉದ್ಯಮ ಕಾರ್ಪೋರೇಷನ್ ಏನಿದೆ ಇದು ಮುಖ್ಯ ಮಂತ್ರಿಗಳಿಗೆ ಸೇರಿರತಕ್ಕ ಇಲಾಖೆ. ಈಗ ಕನ್ನಡ ಚಲನಚಿತ್ರವನ್ನು ಫ್ರೀಡ್ಜೂಜ್ ಮಾಡಿದರೆ ಸರ್ಕಾರದವರು 50 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಾರೆ. ಸ್ವಲ್ಪ ಪ್ರಭಾವಶಾಲಿಗಳಾದವರಿಗೆ ಅದು ಜಾಗ್ರತೆ ಸಿಕ್ಕುತ್ತದೆ. ಪ್ರಭಾವಶಾಲಿಗಳಲ್ಲದೆ ಯಾರೂ ಎಂ. ಎಲ್. ಎ. ಗಳ ಗುರುತು ಇಲ್ಲದವರಿಗೆ ಸ್ವಲ್ಪ ನಿಧಾನವಾಗಿ ಸಿಕ್ಕುತ್ತದೆ. ಈ ಚಲನಚಿತ್ರೋದ್ಯಮದಲ್ಲಿ ಬಹಳ ಮಟ್ಟಿಗೆ ಭ್ರಷ್ಟಾಚಾರಕ್ಕೆ ಅವಕಾಶ ವಿರುತ್ತದೆ. ಆದ್ದರಿಂದ ಶ್ರೀಮಾನ್ ದೇವರಾಜ ಅರಸ್ ಅವರಿಗೆ ತಮ್ಮ ಒಳ್ಳೆಯ ಹೆಸರನ್ನು ಉಳಿಸಿಕೊಳ್ಳಬೇಕು ಎನ್ನುವುದಾದರೆ, ಅವರು ಮುಖ್ಯ ಮಂತ್ರಿಗಳಾಗಿರಬೇಕು ಎಂಬ ಆಸೆ ಇದ್ದರೆ ಅವರು ಈ ಚಲನಚಿತ್ರೋದ್ಯಮ ಕಾರ್ಪೋರೇಷನ್ ವ್ಯವಹಾರದ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು ನಾನು ಅವರಿಗೆ ವಾರನ್ ಮಾಡುತ್ತೇನೆ. ಚಲನಚಿತ್ರೋದ್ಯಮದಲ್ಲಿ ಭ್ರಷ್ಟಾಚಾರ ಏನಿದೆ ಎಂಬುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿಲ್ಲ. ಆದ್ದರಿಂದ ಅವರು ಹೆಸರು ಕೆಡಿಸಿ ಇರಬೇಕಾದರೆ ಅವರು ಹುಷಾರಾಗಿರಬೇಕು, ಎಂದು ನಾನು ಹೇಳಬಯಸುತ್ತೇನೆ. ಶ್ರೀಮಾನ್ ಕೆ. ಕೆ. ಮೂರ್ತಿಯವರ ಚರಿತ್ರೆಯನ್ನು ನಾನು ಸ್ವಲ್ಪ ತಿಳಿದುಕೊಂಡಿದ್ದೇನೆ. ಪೂರ್ತಿ ತಿಳಿದಮೇಲೆ ಮುಖ್ಯ ಮಂತ್ರಿಗಳಿಗೆ ಬರೆಯುತ್ತೇನೆ.

ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ನಾನು ಒಂದೆರಡು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ಈಗ ಈ ಫ್ಯಾಮಿಲಿ ಪ್ಲಾನಿಂಗ್‌ನಿಂದ ಹಿಂದೂಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಈಗ ಮುಸಲ್ಮಾನರಲ್ಲಿ ಒಬ್ಬ ಸಾಹೇಬರಿಗೆ 4 ಜನ ಬೇಬಗಳು ಇರಬಹುದು. ಅವರಿಗೆ ಒಬ್ಬೊಬ್ಬ ಬೀಬಿಗೆ 3 ಜನ ಮಕ್ಕಳಂತೆ ನಿರ್ಧಿ ಮಾಡಿದರೆ 12 ಜನ ಆಗುತ್ತಾರೆ. ಹಿಂದೂಗಳಲ್ಲಿ ಒಬ್ಬ ಗಂಡಸಿಗೆ ಒಬ್ಬಳೇ ಹೆಂಡತಿ, 3 ಜನ ಮಕ್ಕಳು ಮಾತ್ರ ಇರುತ್ತಾರೆ. ಹಿಂದೂಗಳಲ್ಲಿ ಒಂದುವೇಳೆ ಹೆಂಡತಿಗೆ ಏನಾದರೂ ಖಾಯಿಲೆ ಬಂದರೂ ಕೂಡ ಅವನು ಇನ್ನೊಬ್ಬ ಹೆಂಗಸನ್ನು ಮದುವೆ ಮಾಡಿಕೊಳ್ಳುವ ಹಾಗಿಲ್ಲ. ಆದರೆ ಮುಸಲ್ಮಾನರಲ್ಲಿ ಗಂಡಸರು ಒಬ್ಬೊಬ್ಬರು ನಾಲ್ಕುಜನ ಹೆಂಗಸರನ್ನು ಮದುವೆ ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದರಿಂದ ಇನ್ನು 20 ವರ್ಷಗಳಲ್ಲಿ ಭಾರತದ ಜನಸಂಖ್ಯೆಯಲ್ಲಿ ಹಿಂದೂಗಳ ಜನಸಂಖ್ಯೆ ಕಡಿಮೆಯಾಗಿ ಮುಸಲ್ಮಾನರ ಜನಸಂಖ್ಯೆ ಹೆಚ್ಚಾಗುತ್ತದೆ.

ಶ್ರೀ ಎಸ್. ಪಂಪಾಪತಿಯಪ್ಪ.—ಮುಸಲ್ಮಾನರು ಭಾರತದ ಜನಸಂಖ್ಯೆಯಲ್ಲವೇ ?

ಶ್ರೀ ಕೆ. ಎಂ. ನಾಗಣ್ಣ.—ನನಗೆ ಮಾತನಾಡುವ ಸ್ವಾತಂತ್ರ್ಯ ಇದೆ, ನಾನು ಮಾತನಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಆದರೆ ಇನ್ನೊಂದು ಕೋಮಿನವರನ್ನು ಚುಚ್ಚುವ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಎಂ. ನಾಗಣ್ಣ.—ನಾನು ಯಾವ ಕೋಮಿಗೂ ಚುಚ್ಚುವ ಹಾಗೆ ಮಾತನಾಡುವುದಿಲ್ಲ, ವಾಸ್ತವಾಂಶವನ್ನು ಹೇಳುತ್ತಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮುಸಲ್ಮಾನರ ಹಾಗೆ ಹಿಂದೂಗಳಿಗೂ 4 ಜನ ಹೆಂಡತಿಯರನ್ನು ಮದುವೆ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿ ಕೊಡಿ.

ಶ್ರೀ ಕೆ. ಎಂ. ನಾಗಣ್ಣ.—ಹಾಗಲ್ಲ, ನಮಗೆ ಇರುವ ಕಾನೂನನ್ನು ಅವರಿಗೂ ಅನ್ವಯ ಮಾಡಿ ಎಂದು ನಾನು ಹೇಳುತ್ತೇನೆ. ಪಾರ್ಟಿ ತೆಗೆದು ಹಾಕುತ್ತೇವೆ, ಡಿಸ್ಕ್ವಾರಿಟಿ ಕಮ್ಮಿ ಮಾಡುತ್ತೇವೆ, ಮತ್ತು ಬಡತನ ನಿರ್ಮೂಲ ಮಾಡುತ್ತೇವೆಂದು ಹೇಳಿ ಅದರ ಬಗ್ಗೆ ಯಾವ ಕಾರ್ಯಕ್ರಮಗಳನ್ನು ಇವರು ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಾಗುವುದಿಲ್ಲ. ಇವತ್ತು ಬೆಲೆಗಳು ಹೆಚ್ಚಾಗಿರುವುದರಿಂದ ಹೆಚ್ಚು ಹೆಚ್ಚು ಬಡತನವನ್ನು ಉಂಟು ಮಾಡುತ್ತಿದ್ದಾರೆ. ಆದ್ದರಿಂದ ಬಡತನ

3-00 P. M.

ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ಎರಡನೆಯ ಇಲಾಖೆಗಳಲ್ಲಿ ಇವತ್ತು ಲಂಚ ರುಷುವತ್ತು ಹೆಚ್ಚಾಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಮತ್ತು ತಾವು ಸಹ ಒಪ್ಪುತ್ತೀರಿ ಆದರ ಬಗ್ಗೆ ಮತ್ತು ಅದನ್ನು ನಿರ್ಮೂಲ ಮಾಡುವ ಬಗ್ಗೆ ಒಂದು ಮಾತು ಸಹ ಇದರಲ್ಲಿ ಉಲ್ಲೇಖ ಮಾಡದಿದ್ದುದು ವಿಷಾದಕರ ಮತ್ತು ಶೋಚನೀಯವೆಂದು ಹೇಳುತ್ತೇನೆ. ಒಟ್ಟಿನಲ್ಲಿ ರಾಜ್ಯಪಾಲರ ಭಾಷಣ, ಹೇಗೆ ಎಂದರೆ ನಾವು ಪ್ರತಿದಿವಸ ಮಕ್ಕಳಿಗೆ ಹೇಗೆ ಒಂದು ಕ್ಯಾರೆಕ್ಟರ್ ಸರ್ಟಿಫಿಕೇಟು ಕೊಡುತ್ತೇವೆಯೋ ಆ ತರಹದಲ್ಲಿ ಇದೆ. ಏಕೆಂದರೆ, ಮಕ್ಕಳಲ್ಲಿ ಸ್ವಲ್ಪ ಹೆಸ್ಸು ಕಮ್ಮಿ ಇದ್ದರೂ ಸರ್ಟಿಫಿಕೇಟಿನಲ್ಲಿ ಒಳ್ಳೆಯವನು ಎಂದು ನಾವು ಸಾಮಾನ್ಯವಾಗಿ ಹೇಗೆ ಕೊಡುತ್ತೇವೆಯೋ, ಹಾಗೆ ಈ ರಾಜ್ಯಪಾಲರ ಭಾಷಣ ಇದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೆಯವರೆ, ರಾಜ್ಯಪಾಲರ ಭಾಷಣದ ಪ್ರಥಮ ಅಧ್ಯಾಯದಲ್ಲಿ ಅವರು ಜನತೆಯ ದುರ್ಬಲ ಪಂಗಡಗಳಿಗೆ ನೆರವಾಗಬಲ್ಲ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಅವಕಾಶ ಒದಗಿಸಬಲ್ಲ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮುಖ್ಯವಾಗಿ ನಮಗೆ ಕಂಡು ಬರುವಂತಹ ಮುಖ್ಯ ನಾಲ್ಕು ಅಂಶಗಳೆಂದರೆ, ಬಡಜನರಿಗೆ ನಿವೇಶನಗಳನ್ನು ಹಂಚುವ ಬೃಹತ್ ಕಾರ್ಯಕ್ರಮ; ಎರಡನೆಯದು ದುರ್ಬಲ ಜನಾಂಗಗಳನ್ನು ಅಭಿವೃದ್ಧಿ ಪಡಿಸಲು ನೇಮಿಸಿದಂತಹ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್; ಮೂರನೆಯದು ಹಳ್ಳಿಹಳ್ಳಿಗಳಿಗೆ ಸಂಪರ್ಕ ಸಾಧನಗಳಿಲ್ಲದೆ ತೊಂದರೆ ಪಡುತ್ತಿರುವ ಬದಲು ಹಳ್ಳಿ ಹಳ್ಳಿಗಳಿಗೆ ಸಂಪರ್ಕ ಸಾಧನೆಗಳನ್ನು ಒದಗಿಸಿ ಆರ್ಥಿಕ ಮತ್ತು ಸಾಮಾಜಿಕ ಆಸಮಾನತೆಯನ್ನು ಹೋಗಲಾಡಿಸಲು ಅನೇಕ ಹಳ್ಳಿಗಳನ್ನು ಒಂದು ಗೂಡಿಸಲು ಕೈಗೊಂಡಿರುವ ಬೃಹತ್ ಕಾರ್ಯಕ್ರಮ ಅಂದರೆ ರೂರಲ್ ಕಮ್ಯುನಿಕೇಶನ್. ನಾಲ್ಕನೆಯದು ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಥಮದಲ್ಲಿಯೇ ಬಂದಂತಹ ದರ್ಭರ ಬರಗಾಲ ಪರಿಸ್ಥಿತಿಯನ್ನು ಎದುರಿಸಿದಂತಹ ಒಂದು ಮಹಾ ಸಂದಿಗ್ಧ ಪರಿಸ್ಥಿತಿಯನ್ನು ಈ ಸರ್ಕಾರ ಎದುರಿಸಿದ್ದು. ಒಂದೇ ಮಾತಿನಲ್ಲಿ ಹೇಳುವುದಾದರೆ, ಈ ನಾಲ್ಕು ಕಾರ್ಯಕ್ರಮಗಳನ್ನು ಸಾಧಿಸಲು ತೊಡಗಿಸಿದಂತಹ ಕಾರ್ಯಕ್ರಮಗಳ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ಪ್ರಥಮ ಪ್ಯಾರಾದಲ್ಲಿಯೇ ನಮೂದು ಮಾಡಿದ್ದಾರೆ. ಈ ನಾಲ್ಕು ಕಾರ್ಯಕ್ರಮಗಳನ್ನು ನಾವು ನಿಷ್ಪಕ್ಷಪಾತವಾಗಿ ವಿಮರ್ಶೆ ಮಾಡುವುದಾದರೆ ಈ ಸರ್ಕಾರ ಇದನ್ನು ಒಂದು ವರ್ಷದಲ್ಲಿಯೇ ಸಾಧನೆ ಮಾಡಿ ತೋರಿಸಿದೆ, ಒಬ್ಬ ಮಾನ್ಯ ಶಾಸಕರು ಒಂದು ಕಡೆ ಎರಡು ಲಕ್ಷ ನಿವೇಶನ ಹಂಚಿದ್ದಾರೆ, ಇನ್ನೊಂದು ಕಡೆ ಮೂರು ಲಕ್ಷ ಎಂದು ತೋರಿಸಿದ್ದಾರೆ ಎಂದು ಹೇಳಿದರು. ಇದರೆ ನಮ್ಮ ಕಾರ್ಕಳ ಕ್ಷೇತ್ರವನ್ನು ತೆಗೆದು ಕೊಂಡರೆ, ಬರೇ ಎರಡು ತಿಂಗಳ ಅವಧಿಯಲ್ಲಿ ಸುಮಾರು ೨ ಸಾವಿರ ನಿವೇಶನಗಳನ್ನು ಬಡ ಜನರಿಗೆ ಹಂಚಿದ್ದಾರೆ. ಅದೇ ರೀತಿ ಪ್ರತಿ ತಾಲ್ಲೂಕಿನಲ್ಲಿಯೂ ಈ ಕಾರ್ಯಕ್ರಮವನ್ನು ಜಾರಿಗೆ ತಂದು ಬಡ ಜನರಿಗೆ ಸರ್ಕಾರದವರು ಅನುಕೂಲವನ್ನು ಮಾಡಿದ್ದಾರೆ. ಅದೇ ರೀತಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ವರ್ಷ ಯಾವ ರೀತಿಯಲ್ಲಿ ನಿವೇಶನಗಳನ್ನು ಹಂಚಿದ್ದಾರೆ, ಅದಕ್ಕೆ ಕಡಿಮೆಯಿಲ್ಲದ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಹೌಸಿಂಗ್ ಬೋರ್ಡ್ ಮುಖಾಂತರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ನಾನು ನಂಬಿದ್ದೇನೆ. ಈ ಸಂದರ್ಭದಲ್ಲಿ ಒಬ್ಬ ಅಮೇರಿಕದ ರಾಜಕೀಯ ಶಾಸ್ತ್ರಜ್ಞ ಹೇಳಿದ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಂದು ಪ್ರಜಾಪ್ರಭುತ್ವದಲ್ಲಿ ಒಬ್ಬ ಪ್ರಜೆಗೆ ಒಂದು ಇಂಚು ಭೂಮಿಯಾದರೂ ನನ್ನದು ಎಂದು ಹೇಳಿಕೊಳ್ಳುವ ಅವಕಾಶ ಇಲ್ಲದಿದ್ದರೆ, ಅಂಥ ಪ್ರಜಾಪ್ರಭುತ್ವವನ್ನು ನಾವು ಪ್ರಜಾಪ್ರಭುತ್ವ ಎಂದು ಹೇಳುವುದಕ್ಕಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಈ ಒಂದು ಸೂಕ್ಷ್ಮವಾದ ರಾಜಕೀಯ ಶಾಸ್ತ್ರವನ್ನು ನಮ್ಮ ಸರ್ಕಾರ ಮನಗಂಡಿದೆ ಎಂದು ಹೇಳುತ್ತೇನೆ. ಆದ್ದರಿಂದ ಪ್ರಥಮದಲ್ಲಿ ನಿವೇಶನ ಹಂಚುವುದು ಪ್ರಜಾಪ್ರಭುತ್ವದ ಮಹಾ ತತ್ವಗಳಲ್ಲಿ ಒಂದು. ಅದನ್ನು ಸಾಧಿಸುವುದೇ ಒಂದು ಪ್ರಾಮುಖ್ಯವಾದ ಕಾರ್ಯಕ್ರಮವೆಂದು ಹೇಳಬಹುದು. ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ಈ ನಾಲ್ಕು ಕಾರ್ಯಕ್ರಮಗಳು ಸಹ ನಮ್ಮ ದೇಶದಲ್ಲಿ ಉತ್ಪನ್ನ ಹೆಚ್ಚಿಸಲು ಸಹಕಾರಿಯಾಗುವುದಿಲ್ಲ. ಯಾವಾಗ ಉತ್ಪನ್ನ ಹೆಚ್ಚಾಗುವುದಿಲ್ಲವೋ ಆಗ ಜನಸಾಮಾನ್ಯರ ಜೀವನ ಮಟ್ಟವನ್ನು ಏರಿಸುವುದಕ್ಕೆ ಅಸಾಧ್ಯವಾಗುತ್ತದೆ. ಈ ನಾಲ್ಕು ಕಾರ್ಯಕ್ರಮಗಳಿಗೆ ಪ್ರಾಶಸ್ತ್ಯ ಕೊಟ್ಟ ಕಾರಣದಿಂದ ಕೃಷಿ ಮತ್ತು ಕೈಗಾರಿಕಾ ರಂಗಗಳಲ್ಲಿ ಎಷ್ಟೆಷ್ಟು ಪ್ರಗತಿಯಾಗಬೇಕಾಗಿತ್ತೋ ಅಷ್ಟು ಪ್ರಗತಿಯಾಗಲಿಲ್ಲ. ಆದರೆ ಸರ್ಕಾರವು ಅಧಿಕಾರಕ್ಕೆ

(ಶ್ರೀ ಎಂ. ವೀರಪ್ಪ ಮೊಯಿಲಿ)

ಬಂದ-ತರುಣದಲ್ಲಿಯೇ ಎಲ್ಲಾ-ಸಾಧನೆಗಳನ್ನು ಮಾಡುತ್ತೇವೆ ಮತ್ತು ಅದರ ಫಲವನ್ನು ಕೂಡ ಈ ವರ್ಷದಲ್ಲಿಯೇ ಕಾಣುತ್ತೇವೆ ಎಂದು ಹೇಳುವುದು ಒಂದು ಹುಚ್ಚು ಹಂಬಲವೆಂದು ನಾನು ಹೇಳುತ್ತೇನೆ.

ಕೃಷಿರಂಗದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಬಾರಿ ಮಿಲಿ ಬಗ್ ಮತ್ತಿತರ ಕ್ರಿಮಿಕೀಟಗಳ ಹಾವಳಿಯಿಂದ ಮತ್ತು ಮಳೆ ನಕಾಲದಲ್ಲಿ ಬಾರದೆ ಇದ್ದುದರಿಂದ ಫೈರಿನಲ್ಲಿ ಶೇಕಡಾ 25 ಭಾಗ ಹಾಳಾಗಿ ಹೋಗಿದೆ. ಅದರ ಬಗ್ಗೆ ಸಚಿವರಿಗೆ ತಿಳಿಸಿ ಅದಕ್ಕೆ ಹೆಸ್ಟಿಸ್ಯೆಡ್ಸ್ ಮುಂತಾದವುಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡದ್ದರಿಂದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಆದರೆ ಒಂದು ವಿಚಾರವನ್ನು ಬಹಳ ವಿಷಾದದಿಂದ ಹೇಳ ಬೇಕಾಗುತ್ತದೆ. ಆಲ್ಲಿ ಬೆಳೆಗಳಿಗೆ ಯಾವ ನಮಯದಲ್ಲಿ ಪರಿಹಾರ ಕೊಡಬೇಕಾಗಿತ್ತೋ ಹಾಗೆ ಕೊಡದೆ, ಅದು ಎಲ್ಲಾ ಫೈರುಗಳ ಕಟಾವು ಅದ ಮೇಲೆ ಅದರ ಬಗ್ಗೆ ಕಾರ್ಯಕ್ರಮವನ್ನು ತೆಗೆದು ಕೊಂಡರು ಇದಕ್ಕೆ ಕಾರಣ ನರ್ಕಾರವೆಂದು ನಾನು ಹೇಳುವುದಿಲ್ಲ. ಆದರೆ ಸರ್ಕಾರದ ಅಧಿಕಾರಿಗಳು ಇದರ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮವನ್ನು ನರಿಯಾದ ನಮಯದಲ್ಲಿ ತೆಗೆದು ಕೊಂಡು ಊರ್ಜಿತಗೊಳಿಸಲು ಅನಮರ್ಥರಾದುದರಿಂದ ಈ ರೀತಿಯಾಯಿತು ಎಂದು ಮಾತ್ರ ಹೇಳುತ್ತೇನೆ. ನಮ್ಮ ಪಕ್ಷ ಯಾವ ಧ್ಯೇಯ ಧೋರಣೆಗಳನ್ನು ತೆಗೆದುಕೊಳ್ಳುತ್ತದೋ, ಅವುಗಳನ್ನು ಕಾರ್ಯಗತಗೊಳಿಸಲು ಅಧಿಕಾರಿಗಳು ಕ್ಲುಪ್ತನಾದ ನಮಯದಲ್ಲಿ ಪ್ರಾಶಸ್ತ್ಯ ಕೊಟ್ಟು ಜಾರಿ ಗೊಳಿಸಬೇಕು. ಹಾಗೆ ಅವರು ಜಾರಿಗೊಳಿನುತ್ತಾರೋ ಇಲ್ಲವೋ ಎಂಬುದನ್ನು ನೋಡಿ ಫಾಲೋಅಪ್ ಮಾಡುವ ಕೆಲನ ನರಿಯಾಗಿ ಆಗುವುದಿಲ್ಲವೆಂದು ಕಾಣುತ್ತದೆ. ಆದನ್ನು ನಕಾಲದಲ್ಲಿ ಮಾಡಿ ಫಾಲೋ ಅಪ್ ಮಾಡದಿದ್ದರೆ, ರೈತರಿಗೆ ಅದರಿಂದ ದೊರೆಯುವ ಪರಿಹಾರ ದೊರಕಿ, ಈ ರೀತಿ ಕಷ್ಟ ನಷ್ಟಗಳು ಆಗುತ್ತಿರಲಿಲ್ಲ.

ಇನ್ನು ಕೃಷಿ ವಿಷಯದಲ್ಲಿ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ತಿಳಿನುವುದಾದರೆ, ನಮ್ಮಲ್ಲಿ ಅನೇಕ ಗದ್ದೆಗಳು ಇವೆ ಮತ್ತು ಅನೇಕ ಪಂಪ್‌ಸೆಟ್ಟುಗಳು ಸಹ ಇವೆ. ಕೃಷಿಗೆ ಪ್ರಾಧಾನ್ಯವಾಗಿ ರುವುದು ನಮ್ಮ ಜಿಲ್ಲೆ. ಅದರೆ ಉತ್ಪತ್ತಿ ಎಕರೆಗೆ 10 ಕ್ವಿಂಟಲ್ ನಹ ಆಗುತ್ತಿಲ್ಲ. ಇದು ಒಂದು ದುರದೃಷ್ಟಕರವಾದ ನಂಗತಿ ಎಂದು ಹೇಳಬೇಕಾಗುತ್ತದೆ. ಇದೇ ಪರಿಸ್ಥಿತಿ ಮುಂದುವರಿಯುತ್ತಾ ಹೋದರೆ ಇನ್ನು ಕೆಲವು ವರ್ಷಗಳಲ್ಲಿ ಈಗ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಯಾವ ಪರಿಸ್ಥಿತಿ ಇದೆ, ಅದೇ ಪರಿಸ್ಥಿತಿ ಇಲ್ಲಿಯೂ ಉದ್ಭವವಾಗುವ ನಂದರ್ಭ ಬರುತ್ತದೆ. ಆದ್ದರಿಂದ ನರ್ಕಾರ ದವರು ಏನಾದರೂ ಇದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದಾದರೆ, ಅವನ್ನು ನರಿಯಾದ ರೀತಿಯಲ್ಲಿ ಈ ನಮಸ್ಯೆಗಳು ಮುಂದೆಬಾರದ ರೀತಿಯಲ್ಲಿ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಮತ್ತು ಎಲ್ಲೆಲ್ಲಿ ಇಂತಹ ಪರಿಸ್ಥಿತಿ ಇವೆ, ಅಲ್ಲಿ ಯೋಗ್ಯ ಪರಿಹಾರವನ್ನು ಒದಗಿನಲೇ ಬೇಕು. ಆದ್ದರಿಂದ ನರಿಯಾದ ನಮಯಕ್ಕೆ ಇಂತಹ ಪರಿಹಾರ ಕಾರ್ಯಗಳನ್ನು ಒದಗಿನುವಂತ ನೋಡಿ ಕೊಳ್ಳುವುದು ನೂಕ್ಕವೆಂದು ಹೇಳುತ್ತೇನೆ. ಇಲ್ಲದಿದ್ದರೆ ಜಿಲ್ಲೆ ಜಿಲ್ಲೆಗಳಲ್ಲಿರುವ ಆರ್ಥಿಕ ಮತ್ತು ನಾಮಾಜಿಕ ನಂಯೋಜನೆಯಲ್ಲಿ ಹೆಚ್ಚು ಕಮ್ಮಿಯಾಗಿ ಅಲ್ಲರತಕ್ಕಂತಹ ಜನರಲ್ಲಿ ಒಂದು ರೀತಿಯ ಅತೃಪ್ತಿಯ ಭಾವನೆ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಮ್ಮ ಆರ್ಥಿಕ ರಂಗವನ್ನು ಪುನರ್‌ವ್ಯವಸ್ಥೆಗೊಳಿನುವುದು ಅತ್ಯಗತ್ಯವೆಂದು ಕಾಣುತ್ತದೆ. ಇನ್ನು ರಾ ಅಂಡ್ ಆರ್ಡರ್ ವಿಚಾರ ರಾಜ್ಯಪಾಲರು ಹೇಳಿದ್ದಾರೆ. ಮುಖ್ಯವಾಗಿ ಬೆಂಗಳೂರಿನ ಗಲಭೆ ಮತ್ತು ಘಟನೆ ವಿಚಾರ ಪ್ರನ್ತಾಪಿನಿದ್ದಾರೆ. ಆದರೆ ಕೆಲವು ನಮಯಗಳಲ್ಲಿ ಇನ್ನೂ ಸ್ವಲ್ಪ ನಾಧನೆ ಮಾಡಿ ಪ್ರಗತಿ ತೋರಿಸಿದ್ದರೆ ಅನುಕಂಪದಿಂದ ನೋಡಿ ಬೇಕಾದ ನಹಾಯ ಮಾಡಿದ್ದವರ ಚೆನ್ನಾಗಿತ್ತು ಅನಿಸುವುದು. ಇದಕ್ಕೆ ಕೆಲವು ನಲಹೆ ಕೊಡುತ್ತೇನೆ. ಕೆಲವು ನಂದರ್ಭಗಳಲ್ಲಿ ಹೊರಗೆ ಹೋದ ಮನುಷ್ಯ ಹೊತ್ತಿಗೆ ನರಿಯಾಗಿ ಮನೆಗೆ ನುಖವಾಗಿ ಬರುತ್ತಾನೆಯೋ ಇಲ್ಲವೊ ಎಂಬ ನಂಶಯ ಬರುವುದಕ್ಕೆ ಅವಕಾಶವಾಗಿದೆ. ಆದುದರಿಂದ ಪೋಲೀನು ಇಲಾಖೆಯ ದಕ್ಷತೆ ಹೆಚ್ಚಿನಬೇಕು, ಈಗಿರುವ ಇನ್‌ವೆಸ್ಟಿಗೇಷನ್ ನಿಸ್ಟಂ ನರಿಯಾಗಿಲ್ಲ, ಅದನ್ನು ನರಿಪಡಿನಬೇಕು. ಈಗ ಇದರಿಂದಾಗುವ ಅನ್ಯಾಯ ತಡೆಯಲು ನುಪೀರಿಯರ್ ಪೋಲೀನು ಅಧಿಕಾರಿಗಳಿಗೆ ನಾಧ್ಯವಿಲ್ಲವಾಗಿದೆ. ಇತರ ರಾಜ್ಯಗಳಲ್ಲಿರುವ ಉತ್ತಮ ವಿಧಾನಗಳನ್ನು ತಿಳಿದು ನರಿಯಾಗಿ ಡಿಜೆಕ್ಟ್‌ಮಾಡಲು ಅವಕಾಶಮಾಡಬೇಕು. ಮನುಷ್ಯನಿಗೆ ನಮಾಜದಲ್ಲಿ ನ್ಯಾಯ ದೊರೆಯಲು ತಕ್ಕ ಅವಕಾಶ ಕಲ್ಪನಬೇಕು.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ರಾಜ್ಯಪಾಲರು ತುಂಬಾ ವಿಷಯಗಳನ್ನು ಹೇಳಿದ್ದಾರೆ. ಈ ವಿಷಯದಲ್ಲಿ ಒಂದು ಸೂಚನೆ ಕೊಡುತ್ತೇನೆ. ಈಗ ಒಂದು ಹೊಸ ವಿಶ್ವವಿದ್ಯಾನಿಲಯವನ್ನು ರಾಜ್ಯದಲ್ಲಿ ಸ್ಥಾಪಿಸುವ ವಿಚಾರ ಸರಕಾರದ ಮುಂದಿರುವುದಾಗಿ ತಿಳಿದು ಬಂದಿದೆ. ಇದರ ಬಗ್ಗೆ ವಿಚಾರವಿನಿಮಯ ನಡೆಯುತ್ತಿದೆ. ದಕ್ಷಿಣಕನ್ನಡ ಜಿಲ್ಲೆಗೆ ಒಂದು ವಿಶ್ವವಿದ್ಯಾಲಯ ಬೇಕಾಗಿದೆ. ಅದಕ್ಕೆ ತಕ್ಕ ಪರಿಸರ ಮತ್ತು ಅನೇಕ ವಿದ್ಯಾಸಂಸ್ಥೆಗಳಿದ್ದು ಅವು ಒಳ್ಳೆಯ ಹೆಸರನ್ನು ಗಳಿಸಿವೆ. ಅವು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆ ಜಿಲ್ಲೆಗೆ ಮೊದಲು ಮದ್ರಾಸಿನ ಸಂಪರ್ಕ ಬೇರೆ ಇತ್ತು. ಆಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಿದರೆ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಅವಕಾಶವಾಗುವುದು. ಆದುದರಿಂದ ಅಲ್ಲಿ ಅದನ್ನು ಸ್ಥಾಪಿಸುತ್ತಿರೆಂದು ನಂಬಿ ಮುಂದಿನ ವರ್ಷ ರಾಜ್ಯಪಾಲರ ಭಾಷಣದಲ್ಲಿ ಅದನ್ನು ಸೂಚಿಸುವರೆಂಬ ವಿಶ್ವಾಸದೊಂದಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಈ ಸಭೆಯ ಮುಂದಿರುವ ಭಾಷಣ ಯಾವ ಪ್ರಗತಿಯನ್ನೂ ತೋರಿಸದಿರುವುದು ಶೋಚನೀಯವಾಗಿದೆ. ಕಳೆದ ಹನ್ನೊಂದು ತಿಂಗಳಿಂದ ರಾಜ್ಯದ ಜನರು ಕಷ್ಟಕಾರ್ಪಣ್ಯಗಳನ್ನನುಭವಿಸಿ ಕಣ್ಣೀರಿಟ್ಟಿದ್ದಾರೆ. ಬರುವ ವರ್ಷ ಬಹಳ ಕಳವಳಾಸ್ಪದವಾಗಿರುವ ವರ್ಷವೆಂದು ಭಾಸವಾಗುತ್ತಿದೆ. ಕಳೆದ ಚುನಾವಣೆಯಲ್ಲಿ ಅನೇಕ ಭರವಸೆಗಳನ್ನು ಕೊಟ್ಟು ಗೆದ್ದರು. ಈಗ ಹಿಂದಿನ ಸರಕಾರದಮೇಲೆ ಆರೋಪಗಳನ್ನು ಹೊರಿಸಿ ತಮ್ಮ ಪಕ್ಷವನ್ನು ಕಟ್ಟಿಕೊಳ್ಳಲು ಹವಣಿಸುತ್ತಿರುವುದು ನಿಜವಾಗಿಯೂ ಶೋಚನೀಯ. ಸರಕಾರದವರು ಆಹಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ವಿಫಲರಾಗಿದ್ದಾರೆ ಮತ್ತು ಕೈಗಾರಿಕೆ ಬೆಳವಣಿಗೆ ಕೂಡ ಪ್ರಗತಿಪೂರ್ವಕವಾಗಿ ಆಗಿಲ್ಲ. ಬಡವರನ್ನು ಉದ್ಧಾರ ಮಾಡುತ್ತೇವೆಂದು ಹೊರಟು ಸಾಹುಕಾರರನ್ನು ಬಡವರನ್ನಾಗಿ ಮಾಡುತ್ತಿದ್ದಾರೆ, ಬಡವರನ್ನು ಉದ್ಧಾರಮಾಡಲು ಸಾಧ್ಯವಾಗಿಲ್ಲ. ಶ್ರೀ ನಾಗಣ್ಣನವರು ಹೇಳಿದಂತೆ ಬಡವರು ಇನ್ನೂ ಕಡು ಬಡವರಾಗುತ್ತಿದ್ದಾರೆ. ಬಡತನ ನೀಗಲು ಸಾಧ್ಯವಾಗಿಲ್ಲ. ರಾಜ್ಯ ಸರಕಾರದವರು ಬೆಲೆಗಳ ಏರಿಕೆಯನ್ನು ತಡೆಗಟ್ಟಲು ವಿಫಲರಾಗಿದ್ದಾರೆ ಎಂದರೆ ತಪ್ಪಲ್ಲ. ಶ್ರೀರಾಮುಲುರವರು ಹೇಳಿದ ಹಾಗೆ ಅವರು ತಮ್ಮ ಪಕ್ಷಕ್ಕೆ ಬೆಂಬಲ ದೊರಕಿಸಿಕೊಳ್ಳಲು ಪ್ರಯತ್ನಮಾಡುತ್ತಿದ್ದಾರೆ, ನಂತೋಷ. ಕಳೆದ ವರ್ಷ ಇದೇ ಕಾಲದಲ್ಲಿ ಅಕ್ಕಿಯ ಬೆಲೆ 110 ರಿಂದ 150 ರೂಪಾಯಿ ಇದ್ದುದು ಇಂದು 2 ರೂಪಾಯಿವರೆಗೆ ಏರಿದೆ, ಬೇಳೆ 2 ರೂಪಾಯಿದ್ದುದು 3 ರೂಪಾಯಿ ಚಿಲ್ಲರೆವರೆಗೆ ಏರಿದೆ. ದನಗಳ ಮೇವು ನುಮಾರು ಶೇಕಡ ನೂರರಷ್ಟು ಹೆಚ್ಚಾಗಿದೆ. ಕಟ್ಟಡಗಳನ್ನು ಕಟ್ಟಲು ಬೇಕಾದ ಸಾಮಾನುಗಳ ಬೆಲೆ ಶೇಕಡ 25ರಷ್ಟು ಹೆಚ್ಚಾಗಿದೆ. ಸೀಮೆಯೆಣ್ಣೆ ಅಭಾವ ಆಗಾಗ ತಲೆದೋರುತ್ತಿದೆ ಮತ್ತು ಸಿಮೆಂಟಿದ್ದರೂ ಅಭಾವ ಕಲ್ಪಿಸಿ ಬೇಕಾಬಿಟ್ಟಿ ಸಿಮೆಂಟು ಬಜಾರಿನಲ್ಲಿದ್ದರೂ ನ್ಯಾಯವಾದ ಬೆಲೆಗೆ ಸಿಕ್ಕದೆ 12 ರೂಪಾಯಿಗೆ ದೊರೆಯಬೇಕಾದ್ದು 14 ರಿಂದ 18 ರೂಪಾಯಿಗಳವರೆಗೆ ಮಾರಾಟವಾಗುತ್ತಿದೆ. ಇದನ್ನು ಅನೇಕ ಮಂತ್ರಿಗಳಿಗೆ ಹೇಳಿದೆ, ಆಹಾರ ಸಚಿವರಿಗೆ ಮತ್ತು ಕೈಗಾರಿಕಾ ಮಂತ್ರಿಗಳಿಗೆ ಹೇಳಿದೆ. ಬರುವ ಸಿಮೆಂಟೆಲ್ಲಾ ರೈಲ್ವೆ ಸ್ಪೇಷನ್ನಿನಲ್ಲೇ ಮಾರಾಟವಾಗುತ್ತಿದೆ, ಜನರು ಅದು ದೊರೆಯದೆ ಕಷ್ಟಪಡುತ್ತಿದ್ದಾರೆ, ಅದರೆ ಸರಕಾರ ಕಣ್ಣು ಮುಚ್ಚಿಕೊಳಿತಿದೆ. ಹೀಗಿರುವಾಗ ದಕ್ಷತೆಯಿಂದ ಕ್ಷೇಲನವಾಡುತ್ತಿದೆ ಎಂದು ಹೇಗೆ ಹೇಳುವರು ? ನಾಗಣ್ಣನವರು ಇಂದು ರೈಲ್ವೆ ಸ್ಪೇಷನ್ನಿನಿಂದ ಹೆಚ್ಚು ಬೆಲೆ ಕೊಟ್ಟು ತರಿಸಿದರಂತೆ. ಈಗ ಸಿಮೆಂಟ್ ಡೀಲರ್ಸ್ ಜನರನ್ನು ಲೂಟಿ ಮಾಡುತ್ತಿರುವುದು ಶೋಚನೀಯವಾದ ವಿಚಾರ. ಸರಕಾರದವರೇಕೆ ಈ ವಿಚಾರದಲ್ಲಿ ಕಣ್ಣುಮುಚ್ಚಿ ಕುಳಿತಿದ್ದಾರೆಂದು ಬಹಳ ಕಟುವಾಗಿ ಟೀಕಿಸಬೇಕಾಗಿದೆ. ಸರಕಾರ ಮಾಡುವ ಲೋಪದೋಷಗಳೇ ಬೆಲೆ ಏರಲು ಕಾರಣ ಎಂದು ಧಾರಾಳವಾಗಿ ಹೇಳಬಹುದು. ಈ ವರ್ಷ ಗೋದಿ ಮತ್ತು ಅಕ್ಕಿಯ ಹೋಲ್‌ಸೇಲ್ ಟ್ರೇಡನ್ನು ವಹಿಸಿಕೊಳ್ಳುವುದಾಗಿ ಸರಕಾರ ಘೋಷಿಸಿದೆ. ಈ ಘೋಷಣೆ ಹೊರಟ ತರುಣದಲ್ಲೇ ಬೆಲೆಗಳು ಏರಿವೆ. ಕೈಬಿಟ್ಟಾಗಿರುವ ಕೆಲಸಕ್ಕೆ ಕೈಹಾಕಿ ಏಕೆ ಜನರಿಗೆ ತೊಂದರೆ ಮಾಡಬೇಕು ಎಂದು ಕೇಳಬೇಕಾಗಿದೆ. ಘೋಷಣೆಗಳಿಂದ ದೇಶ ಹಾಳಾಗುತ್ತಿರುವುದು ಕಣ್ಣಿದ್ದುರಿಗೇ ಕಾಣುತ್ತಿದೆ. ಮತ್ತು ಲೆವಿಯಿಂದ ಅಕ್ಕಿ ಬೆರೆ ಒಂದು ರೂಪಾಯಿ, ಒಂದೂವರೆ ರೂಪಾಯಿ ಇದ್ದುದು 40–50 ಪೈಸೆ ಜಾಸ್ತಿಯಾಗಿದೆ. ಲೆವಿ ವಸೂಲ ಕಷ್ಟವೆಂದು ಮಿಲ್ಲುಗಳಿಗೆ ಬರುವ ಧಾನ್ಯದಲ್ಲಿ ಶೇಕಡ 30ರಷ್ಟು ಹಿಡಿದುಕೊಳ್ಳುವುದರಿಂದ ಬೆಲೆ ಹೆಚ್ಚಲು ಅವಕಾಶವಾಗಿದೆ. ರೇಷನ್ನಿನಲ್ಲಿ ಒಂದು ಕೆ. ಜಿ. ಅಕ್ಕಿ ಒಬ್ಬರಿಗೆ ಕೊಟ್ಟರೆ ಉಳಿದ 5 ಕೆ.ಜಿ.ಯನ್ನು ಹೊರಗೆ 2 ರೂಪಾಯಿ ಪ್ರಕಾರ ಕೊಳ್ಳಬೇಕಾದ್ದು ತಪ್ಪಿಲ್ಲ. ಒಂದು ಕೆ.ಜಿ.ಗೆ 20 ಪೈಸೆ ಉಳಿದರೂ ಹೊರಗೆ ಕೊಳ್ಳುವ 5 ಕೆ.ಜಿ.ಗೆ ನುಮಾರು ಒಂದೂವರೆ ರೂಪಾಯಿ ಕೊಡಬೇಕು. ಇದರಿಂದ ಜನರಿಗೆ ಆಗತಕ್ಕ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿದೆ;

(ಶ್ರೀ ಟಿ. ಆರ್. ಶಾಮಣ್ಣ)

ಇದನ್ನು ನಾನು ನಿರರ್ಗಳವಾಗಿ ನಮ್ಮ ನಿತ್ಯಜೀವನದಲ್ಲಿ ನೋಡುತ್ತಿದ್ದೇನೆ. ಒಂದಾನೊಂದು ಕಾಲದಲ್ಲಿ ಸರ್ಕಾರವನ್ನು ಟೀಕೆ ಮಾಡುತ್ತಿದ್ದಂಥ ಜನರು ಇವರು, ತಾವು ಅಡಳಿತವನ್ನು ಕೈಗೆ ತೆಗೆದುಕೊಂಡ ಮೇಲೆ ಈ ಅಡಳಿತ ಇಷ್ಟು ಹದಗೆಟ್ಟಿದೆ ಎಂಬುದು ನದಾ ನೊಡುತ್ತಿರುವ ನಮ್ಮಂಥ ಜನರ ಕಣ್ಣಿಗೆ ಇದು ಎದ್ದು ಕಾಣುತ್ತಿದೆ. ಅದರಲ್ಲಿ ಇತ್ತೀಚೆಗೆ ಎಲ್ಲಿ ನೋಡಿದರೂ ರಾಜ್ಯಗಳಲ್ಲಿ ಅನ್‌ರೆಸ್ಟ್ ಆನ್ನುವುದು ಕಾಣುತ್ತಿದೆ. ಇದರಿಂದಲೇ ಈ ಧಾನ್ಯಗಳ ಬೆಲೆಗಳು ಏರುವುದಕ್ಕೆ ಕಾರಣವಾಗಿದೆ ಎಂಬುದು ನನ್ನ ಅಭಿಪ್ರಾಯ. ಇವಕ್ಕೆ ನಮ್ಮ ರಾಜ್ಯ ಸರ್ಕಾರವೂ ಕೂಡ ಬಹಳ ಮಟ್ಟಿಗೆ ಕಾರಣ ಎಂದರೆ ತಪ್ಪಾಗಲಾರದು.

ಇನ್ನು ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದರಲ್ಲಿ ಸರ್ಕಾರದವರು ಬೇನರ ತ್ಯಾಗಿ ತಮ್ಮ ಸೋಲನ್ನೊಪ್ಪಿದ್ದಾರೆ. ರಾಜ್ಯಾದ್ಯಂತವೂ ವಿದ್ಯಾವಂತ ಹಾಗೂ ಅವಿದ್ಯಾವಂತ ಜನತೆ ಉದ್ಯೋಗಕ್ಕಾಗಿ ಪರದಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಯಾವ ಪ್ರಯತ್ನವನ್ನೂ ಮಾಡದಿರುವುದು ಶೋಚನೀಯ. ಇದರಿಂದ ದೇಶಕ್ಕೂ ಕ್ಷೇಮವಿಲ್ಲ ಜನರಿಗೂ ಕ್ಷೇಮವಿಲ್ಲ.

ಇನ್ನು ನಮ್ಮೆಲ್ಲರ ಗಮನವನ್ನು ಸೆಳೆಯತಕ್ಕ ಒಂದು ವಿಷಯ ಎಂದರೆ ಅದು ರಾಜ್ಯದಲ್ಲಿ ತಾಂಡ ಮಾಡುತ್ತಿರುವ ಕ್ಷಾಮದ ವಿಚಾರ. ಇಲ್ಲಿಯವರೆಗಾಗಲೇ ಸರ್ಕಾರದವರು ಹದಿಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಹಣ ಖರ್ಚಾಗಿರಬಹುದು. ಆದರಿಂದ ಸಾರ್ಥಕವೇನೂ ಆಗಲಿಲ್ಲ. ಆದರೆ ಇದರ ಬಗ್ಗೆ ನನ್ನ ಮುಖ್ಯವಾದ ಆರೋಪ ಏನೆಂದರೆ ಹಣವನ್ನೇನೋ ಖರ್ಚುಮಾಡಿದ್ದಾರೆ, ಆದರೆ ಅದನ್ನು ವಿತರಣೆಯಿಂದ ಮಾಡಲಲ್ಲ ಅನ್ನುವುದು ಇನ್ನು ಇದರ ಬಗ್ಗೆ ನನ್ನ ಎರಡನೆಯ ಆರೋಪಣೆ ಎಂದರೆ ನೆರೆ ರಾಜ್ಯಗಳವರು ಆವರ ರಾಜ್ಯದಲ್ಲಿ ಉಂಟಾಗಿರತಕ್ಕ ಕ್ಷಾಮದ ನಿವಾರಣೆಯ ಬಗ್ಗೆ ಅವರು ಕೇಂದ್ರದಿಂದ ತಮ್ಮ ರಾಜ್ಯಕ್ಕೆ ಪ್ರಧಾನಿಯವರನ್ನು ಕೇಂದ್ರದ ಹಣಕಾಸಿನ ಸಚಿವರನ್ನು ಬರಮಾಡಿಕೊಂಡು ಹೆಚ್ಚಿನ ಗ್ರಾಂಟನ್ನೂ ಸಹಾಯವನ್ನೂ ಪಡೆದಿದ್ದಾಗ ನಮ್ಮವರೂ ಹಾಗೇ ಇಲ್ಲಿ ಮಾಡಲಿಲ್ಲಾ ಎಂಬುದು ನನ್ನ ಎರಡನೇ ಆರೋಪಣೆ. ಇಲ್ಲಿ ಇವರು ಕೇಂದ್ರ ಸರ್ಕಾರಕ್ಕೆ 150 ಕೋಟಿ ರೂಪಾಯಿಗಳ ಧನ ಸಹಾಯವನ್ನು ಕೇಳಿದ್ದೇವೆಂದು ಇಷ್ಟು ಮಾತ್ರ ಹೇಳುತ್ತಿದ್ದಾರೆ. ಅಂದರೆ ಇವರಿಗೆ ಕೇಂದ್ರದಲ್ಲಿ ಸಾಕಷ್ಟು ಪ್ರಭಾವ ವೀರತಕ್ಕ ಶಕ್ತಿ ಇವರಲ್ಲಿ ಇಲ್ಲವೆಂಬುದು ಇದರಿಂದಲೇ ವ್ಯಕ್ತವಾಗುತ್ತಿದೆ.

ಇನ್ನು ನಮ್ಮ ನಾಲ್ಕನೇ ಪಂಚವಾರ್ಷಿಕ ಯೋಜನೆಯ ವಿಚಾರಕ್ಕೆ ಬಂದರೆ ಸರ್ಕಾರದವರು ಇದರಲ್ಲಿಯೂ ಕೂಡ ಯಶಸ್ವಿಯಾಗಲಿಲ್ಲ ಎಂದರೆ ತಪ್ಪಾಗಲಾರದು, ಇದಕ್ಕೆ ಕಾರಣ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳೆರಡೂ ಹೆಚ್ಚಿನ ಹಣವನ್ನು ನಾನ್‌ಡೆವಲಪ್ಪಿಂಗ್ ಬಾಬಿಗೆ ಸುರಿದು ಡೆವಲಪ್ಪಿಂಗ್ ಬಾಬಿಗೆ ಸಾಕಷ್ಟು ಹಣವನ್ನು ವಿನಿಯೋಗ ಮಾಡಿರುವುದಿಲ್ಲ. ಇದರಿಂದ ರಾಷ್ಟ್ರಾದ್ಯಂತ ಜನರ ಬಗ್ಗೆ ಅಲ್ಲಸ್ಸಾದ ತರಗೆಗಳು ಏರಿ ತನ್ಮೂಲಕ ಧಾರಣೆವಾಸಿಗಳು ಏರಿದವು. ಜನಸಾಮಾನ್ಯರಿಗೆ ಕೊಳ್ಳತಕ್ಕ ಚೈತನ್ಯವಿಲ್ಲದೆ ಅವರು ತೊಂದರೆಗೀಡಾಗಿದ್ದಾರೆ. ಆದ್ದರಿಂದ ಬೆಲೆಗಳನ್ನು ಕೂಡಲೆ ಇಳಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ದಿನಗಳ ಪೇವಿನ ಬಗ್ಗೆ ಹೇಳುವುದಾದರೆ.—ಈ ವಿಷಯ ಬೂಸ ಮತ್ತು ಹಿಂಡಿ ಇವು ಜನರಿಗೆ ಸರಾಗವಾಗಿ ಸಿಕ್ಕುತ್ತಿಲ್ಲ. ನಾವು ಸರ್ಕಾರದವರ ಗಮನವನ್ನು ಇತ್ಯಕಡೆಗೆ ಎಷ್ಟು ಸೆಳೆದರೂ ಏನೂ ಪ್ರಯೋಜನವಾಗಿಲ್ಲ. ಸರ್ಕಾರದವರ ನಿರ್ಲಕ್ಷ್ಯವನ್ನೋವೃತ್ತಿ ನೋಡಿದರೆ ಕೋಚನೀಯವಾಗುತ್ತಿದೆ. ರಾಜ್ಯದಲ್ಲಿ ಆಹಾರಕ್ಕೆ ಬರಬಂದ ಹಾಗೆ ಸಧ್ಯವಲೆ : ಹಾಲಿಗೂ ಬರ ಬರಲಿದೆ, ನೀರಿಗೂ ಸಹ ಬರ ಬರಲಿದೆ ಅನೇಕರು ಜಾನುವಾರುಗಳಿಗೆ ಮೇವನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೆ ವಾರಾಟ ಮಾಡುವುದಕ್ಕೆ ನೋಡುತ್ತಿದ್ದಾರೆ. ಆದರೆ ಕೊಳ್ಳತಕ್ಕವರಿಲ್ಲ. ಆಹಾರ ನಡಿವರು ಆಗಲ ಮಾಡೋಣ ಮಾಡೋಣ ಅನ್ನುತ್ತಲೇ ಇದ್ದಾರೆ ದಿನಗಳು ಕಳೆದುಹೋಗುತ್ತಿವೆ. ಕೆಲಸವಂತೂ ಆಗಲಿಲ್ಲ. ಇದು ಬಹಳ ಶೋಚನೀಯವಾದ ವಿಷಯ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮೈಜರ್ ಇರಿಗೇಷನ್‌ಗಳ ವಿಚಾರದಲ್ಲಿ ಸ್ವಲ್ಪ ನಿಧಾನವಾಗುತ್ತದೆಂಬ ಧಾಟಿಯಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಇದು ಸರಿಯಲ್ಲ. ಇದರಿಂದ ನಾಳೆ ಅವುಗಳ ಕನ್‌ಸ್ಟ್ರಕ್ಷನ್ ಬಗ್ಗೆ ಬಂದಕ್ಕೆ ನಾಲ್ಕಂರಷ್ಟನ್ನು ನಾವು ಖರ್ಚುಮಾಡಬೇಕಾಗುತ್ತದೆ. ಆದುದರಿಂದ ಹೇಗಾದರೂ ಮಾಡಿ ಇವುಗಳನ್ನೂ ಕೂಡ ತಕ್ಷಣ ಪ್ರಾರಂಭಮಾಡಲೇಬೇಕೆಂದು

ಒತ್ತಾಯ ಮಾಡುತ್ತೇನೆ. ಇನ್ನು ಪವರ್ ಪಾರ್ಚೇಜಿನ ಬಗ್ಗೆ ಹೇಳುವುದಾದರೆ ಅಗತ್ಯವಾಗಿ ಅದು ಯಾರಿಗೆ ಬೇಕು ಅವರಿಗೆ ಹೆಚ್ಚಿಗೆ ಕೊಡಿ ಎಂದು ಹೇಳುತ್ತೇನೆ. ಇದನ್ನು ಆಹಾರೋತ್ಪಾದನೆಗೂ ಮತ್ತು ಕೈಗಾರಿಕೋತ್ಪಾದನೆಗೂ ಹೆಚ್ಚಾಗಿ ಬಳಸುವುದು ಅಗತ್ಯವೆಂದು ಹೇಳುತ್ತೇನೆ. ಇದನ್ನು ಯಾವ್ದೇ ಜನರು ಬಳಸುತ್ತಿದ್ದಾರೆಂಬುದನ್ನೆ ನಾವು ನಮ್ಮ ಅಕ್ಕ ಪಕ್ಕದ ರಾಜ್ಯಗಳೊಂದಿಗೆ ನಮ್ಮ ರಾಜ್ಯವನ್ನು ಹೋಲಿಕೆ ಮಾಡಿದರೆ ಇದು ನಮಗೆ ಗೊತ್ತಾಗುತ್ತದೆ.

ಇನ್ನು ಶ್ರೀಮಾನ್ ಚೆನ್ನಿಒಸ್ಕ್ಕನವರು ಮಂತ್ರಿಗಳಾದ ಮೇಲೆ ರೂರಲ್ ಕಮ್ಯುನಿಕೇಷನ್ ಬಗ್ಗೆ ಒಳ್ಳೆಯ ಕೆಲಸಗಳನ್ನು ಮಾಡಿಸಿದ್ದಾರೆ. ಇನ್ನೂ ಆಗಬೇಕಾದ್ದು ಬಹಳ ಇದೆ. ಅದೇರೀತಿ ನಮ್ಮಲ್ಲಿ ಮೆಡಿಕಲ್ ಕಾಲೇಜುಗಳ ಬಗ್ಗೆ ಒಂದು ಯೂನಿವರ್ಸಿಟಿ ಆಗತಕ್ಕದ್ದು ಅಗತ್ಯ. ಆದರೆ ಶ್ರೀಮಾನ್ ನಾಗಣ್ಣನವರು ಹೇಳಿದಂತೆ ಕುಟುಂಬ ಯೋಜನೆಯಿಂದೇನೂ ಪ್ರಯೋಜನವಾಗುತ್ತಿಲ್ಲ. ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ಕೈಗೊಳ್ಳಬೇಕು.

ಇನ್ನು ಹೌಸಿಂಗ್ ಬೋರ್ಡಿನ ಬಗ್ಗೆ ಹೇಳುವುದಾದರೆ ಇದಾದರೂ ಏತಕ್ಕೆ ರಬೇಕು? ಕೊಡತಕ್ಕ ಸಾಲವನ್ನು ಶ್ರೀ ಬಸವಲಿಂಗಪ್ಪನವರು ಮಂತ್ರಿಗಳಾಗಿ ಬಂದಮೇಲೆ ಇದನ್ನು ನಿಲ್ಲಿಸಿವ್ಯಾರೆ. ಕಾರಣ ಗೊತ್ತಿಲ್ಲ. ಆದರೆ ಹರಿಜನ ಗಿರಿಜನಕ್ಕೆ ಅನುಕೂಲಗಳು ದೊರೆಯಬೇಕೆಂದು ಹೇಳತಕ್ಕವರಲ್ಲಿ ಅದಕ್ಕಾಗಿ ಹೋರಾಟ ಮಾಡತಕ್ಕವರಲ್ಲಿ ನಾನೂ ಒಬ್ಬ ಆದರೆ ಅವರಿಗೆ ಹೇಗೆ ಅನುಕೂಲ ಮಾಡಬೇಕೆಂಬುದನ್ನು ಯೋಚನೆ ಮಾಡದ ಇತ್ತ ಇತರರಿಗೂ ಅನುಕೂಲ ಆಗುವುದು ಬೇಡ ಎನ್ನತಕ್ಕ ಅವರ ನೀತಿ ಸರಿಯಾದುದಲ್ಲ. ಅವರ ಅಡಳಿತ ಧೋರಣೆಯೇ ಬಹಳ ವಿಚಿತ್ರವಾಗಿದೆ, ಯಾರು ಅವರ ಪಕ್ಷಕ್ಕೆ ಸೇರಿದವರೋ ಅವರಿಗೆಮಾತ್ರ ಅನುಕೂಲ ಆದರೆ ಸಾಕೆಂಬ ನೀತಿ ಸರಿಯಾದುದಲ್ಲ. ಅವರು ಇಲ್ಲಿ ಮಂತ್ರಿಗಳಾಗಿರುವುದು ಒಂದು ಪಕ್ಷಕ್ಕಾಗಿ ಅಲ್ಲ ಮೂರುಕೋಟಿ ಜನರಿಗೆಲ್ಲಾ ಅವರು ಮಂತ್ರಿಗಳಾಗಿದ್ದಾರೆ ಇವರು ಬಂದ ಮೇಲೆ ಇಲ್ಲಿ ಹಿಂದುಳಿದ ವರ್ಗಗಳು ಬಳಿಗೆಗೆ ತುಂಬಾ ತೊಂದರೆಯಾಗಿದೆ ಇವರು ಅಡಳಿತದ ಬಗ್ಗೆ ತಾಳಿರ ವ ನೀತಿ ಬೇಗ ಬದಲಾಗಬೇಕು, ಇಲ್ಲದಿದ್ದರೆ ರಾಜ್ಯಸರ್ಕಾರಕ್ಕೆ ಗೌರವ ಬರುವುದಿಲ್ಲ. ಅವರು ತಮ್ಮ ವರ್ತನೆಯನ್ನು ದಯಪಟ್ಟು ತಿದ್ದಿಕೊಳ್ಳಬೇಕೆಂದು ನಾನವರಿಗೆ ಮಾನ್ಯ ಮುಖ್ಯ ಸಚಿವರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಬಡವರಿಗೆ ಉಚಿತವಾಗಿ ನಿವೇಶನಗಳನ್ನು ಕೊಟ್ಟಿದ್ದರೆ ಅದರಿಂದೇನು ಸಾರ್ಥಕವಾಯಿತು? ಅಥವಾ ಅವರಿಗೆ ನಾಲ್ಕು ಕಲ್ಲುಗಳನ್ನು ಕೊಟ್ಟರೆ ಮನೆಕಟ್ಟಿಕೊಳ್ಳಲು ಸಾಧ್ಯವಾಗುತ್ತದೆಯೇ? ಅದಕ್ಕಾಗಿ ಸರ್ಕಾರದವರು ಮುಂದೆ ಬಂದು ತಾವಾಗಿಯೇ ಅವರಿಗೆ ಆ ಮನೆಗಳನ್ನು ಕಟ್ಟಿಸಿಕೊಟ್ಟು ಮುಂದೆ ಅವರಿಂದ ಸುಲಭ ಕಂತುಗಳಲ್ಲಿ ಆ ಹಣವನ್ನು ವಸೂಲ್ಮಾಡಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಾರಣ ಅವರಿಗೇನೂ ಅಂಥಾ ವರಮಾನ ಇರುವುದಿಲ್ಲ. ಅವರಿಗೆ ಬೇರಾವ ಮಾರ್ಗದಲ್ಲೂ ಉತ್ಪತ್ತಿ ಬರುವುದಿಲ್ಲ.

ಇನ್ನು ಇತ್ತೀಚೆಗೆ ದೇವರಲ್ಲಿ ಇರಲಾರದ ಅತ್ಯತಕ್ಕ ಜನರು ಎಲ್ಲೆಲ್ಲೂ ಹೆಚ್ಚುತ್ತಿರುವುದರಿಂದ ಅದಕ್ಕೆ ತಕ್ಕಂತೆ ಪ್ರಕೃತಿ ಸಹಾ ನಮಗೆ ವಿರೋಧವಾಗುತ್ತಿದೆ. ಇದರಿಂದಾಗಿ ನಾವು ದಿನದಿನಕ್ಕೂ ಹೆಚ್ಚಿನ ಕಷ್ಟದ ದಿನಗಳನ್ನು ಕಾಣಬೇಕಾಗುತ್ತದೆ.

ಪ್ರಕೃತಿ ನಮಗೆ ವಿರೋಧವಾಗುತ್ತಿರುವ ಲಕ್ಷಣ ಕಂಡುಬರುತ್ತಿರುವಾಗ ಈ ಬಗ್ಗೆ ನಮ್ಮ ನೈತಿಕಮಟ್ಟ ಹೆಚ್ಚಿಸಿ ಈ ರಾಜ್ಯದ ಆಡಳಿತ ಸುಭದ್ರವಾಗಿರುವುದಕ್ಕೆ ಸರ್ಕಾರದವರ ಪ್ರಯತ್ನ ಮಾಡುತ್ತಾರೆಂದು ನಂಬಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

3-30 P. M.

ಶ್ರೀಮತಿ ರಾಧಾಬಾಟ್: (ಆಂಕೋಲ)—ಮಾನ್ಯ ಅಧ್ಯಕ್ಷರೇ, ಇಂದು ರಾಜ್ಯಪಾಲರು ಮಾಡಿದ ಭಾಷಣಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಇಂದು ನಾವು ನೈಸರ್ಗಿಕ ವಿಪತ್ತನ್ನು ಎದುರಿಸುತ್ತಿದ್ದೇವೆ. ಪೂರ್ವಜರು ಸಂಕಟ ಬಂದಾಗ ವೆಂಕಟರಮಣ ಎಂಬ ಒಂದು ಮಾತು ಹೇಳಿದ್ದಾರೆ. ಆದರೆ ಅರ್ಥ ಏನೆಂಬುದನ್ನು ತಿಳಿದು ಎಲ್ಲರೂ ಒಳ್ಳೆಯದನ್ನು ಸಾಧಿಸೋಣ, ಹಾಗೆ ಮಾಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಇಂಥ ಸಮಯದಲ್ಲಾದರೂ ನಾವು ದೇವರನ್ನು ಮರೆಯಲು ಸಾಧ್ಯವಿಲ್ಲ. ದೇವರು ಎಂದರೆ ಒಂದು ಸಮತೋಲ ಭಾವನೆ ಇರಬೇಕು, ಇತರರ ಕಷ್ಟದಲ್ಲಿ ಸಂಕಟದಲ್ಲಿ ಭಾಗಿಯಾಗುವವರು ದೇವರ ಪ್ರತೀಕ ಎಂಬುದು ನನ್ನ ಭಾವನೆ. ನಾವು ನಮ್ಮನ್ನು ತಿದ್ದಿಯಬೇಕು, ಬೇರೆಯವರಲ್ಲಿ ತಪ್ಪು ಕಂಡುಹಿಡಿಯುವುದಕ್ಕೆ ಮುಂಚೆ ನಮ್ಮ ತಪ್ಪನ್ನು ನಾವು ಕಂಡುಕೊಂಡರೆ

(ಶ್ರೀಮತಿ ರಾಧಾ [illegible])

ಬಹಳ ಉತ್ತಮ ಎಂಬುದು ನನ್ನ ನಲಹೆ. ನಾವು ನಮ್ಮ ನಡೆ ನಡಿಯಲ್ಲಿ ಆಚಾರ ವಿಚಾರಗಳಲ್ಲಿ ನರಿಯಾದ ರೀತಿಯಲ್ಲಿ ನಡೆದುಕೊಂಡು ಮುಂದೆ ಸಾಗೋಣ ಎಂದು ಹೇಳುತ್ತೇನೆ. ಇಂದು ಜನತೆ ಬಯಸುವುದು ಭಾಷಣವನ್ನಲ್ಲ. ನಮ್ಮ ಕೃತಿ ಹೇಗಿದೆ ಕೆಲಸ ಹೇಗಿದೆ ಎಂದು ಅವರು ನೋಡುತ್ತಾರೆ. ಆದುದರಿಂದ ನಾವೆಲ್ಲರೂ ನ್ಯೆಸರ್ಗಿಕವಾದ ವಿಪತ್ತನ್ನು ದೂರ ಮಾಡಲು ದೇವರಲ್ಲಿ ಮನಸ್ಸಿಟ್ಟು ಶರಣಾಗತರಾಗೋಣ, ಹಾಗೆ ಮಾಡಿದರೆ ಸಾಧ್ಯವಾಗುವುದು. ಪರಿಹಾರ ಕಾರ್ಯಗಳನ್ನು ತ್ವರಿತ ಗೊಳಿಸಬೇಕು, ಕಾರ್ಯಕ್ರಮಗಳನ್ನು ಪೂರ್ತಿಸಲು ಸ್ಥಳೀಯ ಸಂಸ್ಥೆಗಳು ಯೋಗ್ಯ ಪಾತ್ರ ವಹಿಸ ಬೇಕು, ಅವರಿಗೆ ಇಂಥ ಅವಕಾಶವನ್ನು ಮಾಡಿಕೊಡಬೇಕು. ಹಾಗೆಯೇ ಜನತೆಯಲ್ಲಿ ವಿಶ್ವಾಸ ಪಡಬೇಕು. ನಾವು ಕೇಂದ್ರದ ನೆರವನ್ನು ಬಯಸಿದ್ದೇವೆ, ಆ ನೆರವು ಸಿಕ್ಕುತ್ತದೆ ಎಂದು ನನಗೆ ಧೃಢ ವಿಶ್ವಾಸವಿದೆ. ಅದರ ಜೊತೆಯಲ್ಲಿ ನಮ್ಮಲ್ಲಿ ಲಭ್ಯವಾಗುವ ಸಂಪತ್ತನ್ನುಪಯೋಗಿಸಿ ನಿರ್ಗತಿಕರ ಗೋಳನ್ನು ದೂರುಮಾಡಲು ಆದಷ್ಟು ಪ್ರಯತ್ನ ಮಾಡಬೇಕು. ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ನಮ್ಮ ಜನತೆ ಅವಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಗಮನಕೊಡ ಬೇಕು, ಅದಕ್ಕೆ ಅವರ ಮನ ಒಲಿಸಬೇಕು. ಆಯಾ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡಾಗ ಯುವಕರ ಸಹಾಯವನ್ನು ಪಡೆದುಕೊಂಡು ನರಕಾರದ ತಾಂತ್ರಿಕ ಸೌಲತ್ತು ಅವರಿಗೆ ಆ ಕೆಲಸಗಳಲ್ಲಿ ಸಿಕ್ಕುವಂತೆ ಮಾಡಬೇಕು.

ಇನ್ನು ನಮ್ಮ ರಾಜ್ಯದಲ್ಲಿ ಚಿಕ್ಕ ಮತ್ತು ದೊಡ್ಡ ಹೊಳೆಗಳು ನದಿಗಳು ಇರುತ್ತವೆ. ಅವುಗಳಿಂದ ಸಾವಿರಾರು ಎಕರೆಗಳು ಸಾಗುವಳಿಗೆ ಬರುವುವು. ಅಜಮಾನು ಅಡಿ ಜಮಾನಾಗಲು ಪದ ಜಮಾನಿರಲಿ ಎಲ್ಲಿ ಸಾಗುವಳಿಗೆ ಸಾಧ್ಯವಿದೆಯೋ ಅಲ್ಲಿ ಲಘ್ಷ ಇರಿಗೇಷನ್ ಸೌಲಭ್ಯ ಹೆಚ್ಚು ಹೆಚ್ಚು ಒದಗಿಸಿ ಅವರಿಂದ ನಿರುದ್ಯೋಗಿ ರೈತ ಕುಟುಂಬ, ಮತ್ತು ಯುವಕರಿಗೆ ಭೇದಭಾವವಿಲ್ಲದೆ ಒಂದು ಯೋಜನೆಯನ್ನು ಮಾಡಿ ಕಡಿಮೆ ಸಮಯದಲ್ಲಿ ಅವರು ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶಮಾಡಿಕೊಡಬೇಕು

ಈ ಕೆಲಸಗಳನ್ನು ಆದಷ್ಟು ಬೇಗ ತೀವ್ರಗತಿಯಲ್ಲಿ ಮಾಡಿದರೆ ನಿರುದ್ಯೋಗ ನಿವಾರಣೆಯಾಗುತ್ತದೆ ಎಂದು ನರ್ಕಾರಕ್ಕೆ ಭಿನ್ನಹ ಮಾಡಿಕೊಳ್ಳುತ್ತೇನೆ ಸಮಾಜ ಕಲ್ಯಾಣದ ಕೆಲಸದಲ್ಲಿ ನಮಾಜ ಕಲ್ಯಾಣ ಇಲಾಖೆ ಹಣವನ್ನು ಒದಗಿಸುತ್ತದೆ, ಇವರ ಜೊತೆಯಲ್ಲಿ ಬೇಕಾಗುವ ವಾತಾವರಣವನ್ನು ನಾವು ಕಲ್ಪಿಸಬೇಕು, ಗರ್ವ ಭಾವನೆಯಿಂದ ಹೋಗಬಾರದು. ರಾಮಕೃಷ್ಣ ಪರಮಹಂಸರು ಹೀಗೆ ಹೇಳಿದ್ದಾರೆ;—"ನಮಾಜದಲ್ಲಿ ದೀನದಲಿತರಿಗೆ ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ" ಎಂದು ಪ್ರತಿಯೊಬ್ಬರಲ್ಲೂ ಕೂಡ ಒಂದು ದೈವತ್ವ ಇದೆ. ಆದರಿಂದ ನಮಾಜದ ಕಾರ್ಯ ಕರ್ತರಾಗಲಿ, ರಾಜಕಾರಣಿಗಳು ಯಾರೇ ಇದ್ದರೂ ನಾನು ಎನ್ನುವ ಅಹಂಕಾರವನ್ನು ಬಿಟ್ಟು ನಮಾಜಸೇವೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

3-30 P. M.

ಇನ್ನು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳನ್ನು ಅನೇಕ ವರ್ಷಗಳಿಂದ ಕಡೆಗಾಣಿಸಿದ್ದಾರೆ. ಆ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದಕ್ಕೆ ನಾನು ಈಗಾಗಲೇ ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಂಡಿದ್ದೇನು. ಒಂದು ವರ್ಷ ಆಗುತ್ತಾ ಬಂತು, ಅಲ್ಲಿ ಏನೂ ಅಭಿವೃದ್ಧಿ ಯಾಗಿದ್ದು ಕಂಡುಬರಲಿಲ್ಲ. ಆದ್ದರಿಂದ ಮಾನ್ಯ ಮಂತ್ರಿವರ್ಯರು ಪ್ರವಾಸ ಕೈಗೊಂಡಾಗ ಜನತೆಗೆ ಏನು ಆಶ್ವಾಸನೆ ಕೊಟ್ಟಿದ್ದರೋ ಅದನ್ನು ತೀವ್ರಗತಿಯಿಂದ ಸ್ವಲ್ಪಮಟ್ಟಿಗಾದರೂ ಕಾರ್ಯ ರೂಪಕ್ಕೆ ತರಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶಿಕ್ಷಣದ ವಿಷಯದ ಬಗ್ಗೆ ಹೇಳಬೇಕಾದರೆ, ಕೆಲವೊಂದು ಮಟ್ಟದಲ್ಲಿ ಶಿಕ್ಷಕರು ಕಣ್ಣೀರನ್ನು ಹಾಕುವಂಥ ಪರಿಸ್ಥಿತಿಯನ್ನುಂಟುಮಾಡಿದೆ. ಅದಕ್ಕೆ ಮಂತ್ರಿಗಳು ಹೊಣೆಯಲ್ಲ, ಶಾಸಕರು ಹೊಣೆಯಲ್ಲ, ಸರ್ಕಾರದ ಆದೇಶಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರದೆ ಇರುವುದೇ ಇದಕ್ಕೆ ಕಾರಣವಾಗಿದೆ. ಕೆಲವು ಹೊತ್ತಿನಲ್ಲಿ ಅಧಿಕಾರಿಗಳು ನಿರ್ದಯೆಯ ಧೋರಣೆ ತಾಳಿದೆ ಬಡ ಶಿಕ್ಷಕರ ಗೋಳನ್ನು ಕಡಿಮೆ ಮಾಡಲು ಪ್ರಯತ್ನ ಪಡಬೇಕು. ನಮ್ಮ ಸರ್ಕಾರವು ಡಾಕ್ಟರ್ ಕೊಠಾರಿಯವರು ಕೊಟ್ಟ ರಿಪೋರ್ಟನಲ್ಲಿರುವ ಅಂಶಗಳನ್ನು ಕಾರ್ಯರೂಪಾಕ್ಕೆ ತರಲು ಪ್ರಯತ್ನಿ

ನುತ್ತಿದೆ ಎಂದು ನಾನು ಭಾವಿಸುತ್ತೇನೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವು ಜೀವನದ ಅಡಿಗಲ್ಲು, ಶಿಕ್ಷಣವನ್ನು ಕೊಡಲಿಕ್ಕೆ ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯಕ್ರಮ ಕೈಗೊಳ್ಳಬೇಕು.

ಕೊನೆಯಲ್ಲಿ ಅಡಿಕೆ ಬೇಸಾಯಗಾರರ ಬಗ್ಗೆ ಒಂದು ಮಾತನ್ನು ಹೇಳಿ ಬಯಸುತ್ತೇನೆ. ಅಡಿಕೆ ಬೆಲೆ ಕುಸಿದ ಕಾರಣದಿಂದ ಅಡಿಕೆ ಬೇಸಾಯಗಾರರಿಗೆ ತೊಂದರೆ ಉಂಟಾಗಿದೆ. ನಾನು ಇದರ ಬಗ್ಗೆ ಹಿಂದೆ ಹೇಳಿದ್ದೆ, ಆದರೂ ಕೂಡ ಸರ್ಕಾರವು ಅಷ್ಟು ಗಮನ ಕೊಟ್ಟಂತೆ ಕಾಣುವುದಿಲ್ಲ. ಈಗಲೂ ಕೂಡ ನಾನು ಕೇಳಿಕೊಳ್ಳುವುದು, ಅಡಿಕೆ ಬೆಳೆಯನ್ನು ಬೇಸಾಯಗಾರರು ಎಷ್ಟು ಶ್ರಮದಿಂದ ಬೆಳೆಸುತ್ತಾರೆ ಎನ್ನುವುದನ್ನು ಕೇಂದ್ರ ಸಮಿತಿಯವರು 1960ನೇ ಇಸವಿಯ ತಮ್ಮ ವರದಿಯಲ್ಲಿ ಹೇಳಿದ್ದಾರೆ. ಕಾಲೂಸ್ ಕಮಿಟಿಯವರು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅವರೂ ಕೂಡ ಇದರ ಪರಿಸ್ಥಿತಿಯನ್ನು ಅರಿತಿದ್ದಾರೆ ಎಂದು ನನ್ನ ಭಾವನೆ. ಒಂದು ಕ್ವಿಂಟಾಲ್ ಅಡಿಕೆಗೆ 625 ರೂಪಾಯಿ ಬಂದರೆ ಪಾತ್ರ ಅದು ಯೋಗ್ಯ ಬೆಲೆಯಾಗುತ್ತದೆ. ಇಲ್ಲವಾದರೆ ಅಡಿಕೆಯ ಬೇಸಾಯಗಾರರು ಜೀವನ ಮಾಡಲು ಸಾಧ್ಯವಾಗುವುದಿಲ್ಲ. ಕರಾವಳಿಯಲ್ಲಿ ಸುಮಾರು 50ಸಾವಿರ ಜನರಿಗೆ ಕೆಲಸ ಸಿಕ್ಕುತ್ತಿಲ್ಲ. ಆದ್ದರಿಂದ ಸಹಕಾರಿ ಸಂಘಗಳ ಮುಖಾಂತರ ಯೋಗ್ಯ ಬೆಲೆಯಲ್ಲಿ ಅಡಿಕೆಯನ್ನು ಖರೀದಿ ಮಾಡಲು ಸರ್ಕಾರ ಪ್ರಯತ್ನಿಸಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಎಲ್ಲಾ ನನ್ನ ಸಣ್ಣ ಸೂಚನೆಗಳನ್ನು ಸರ್ಕಾರದ ಗಮನದಲ್ಲಿಟ್ಟುಕೊಂಡು ಕಾರ್ಯರೂಪಕ್ಕೆ ಆದಷ್ಟು ಬೇಗ ತರುತ್ತದೆ ಎಂದು ಕೇಳಿಕೊಂಡು ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶವಾಡಿಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದ ರಾಜಪಾಲರು ಮಾಡಿರತಕ್ಕ ಭಾಷಣಕ್ಕೆ ವಂದನಾ ನಿರ್ಣಯವನ್ನು ವಿರೋಧ ಮಾಡಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಬಂಧುಗಳೇ, ಈಗ ಅಧಿಕಾರದಲ್ಲಿರತಕ್ಕ ಸರ್ಕಾರ ಅಧಿಕಾರಕ್ಕೆ ಬಂದು 11 ತಿಂಗಳಾಯಿತು. ಅಧಿಕಾರಕ್ಕೆ ಬರುವುದಕ್ಕೆ ಮೊದಲು ನಮ್ಮ ದೇಶದಲ್ಲಿರತಕ್ಕ ಮತ್ತು ಪ್ರಮುಖವಾಗಿ ನಮ್ಮ ರಾಜ್ಯದಲ್ಲಿರತಕ್ಕ ಜನತೆಗೆ ಬಹಳಷ್ಟು ಆಶ್ವಾಸನೆಗಳನ್ನು ಕೊಟ್ಟಿತ್ತು. ಮುಖ್ಯವಾಗಿ ಬಡತನ ನಿರ್ಮೂಲನ ಮಾಡಿ, ಸಮಾಜದಲ್ಲಿರತಕ್ಕ ವರ್ಗಗಳನ್ನು ಕಡಿಮೆ ಮಾಡಿ, ಎಲ್ಲರಿಗೂ ಸರಿಸಮಾನವಾದ ಹಕ್ಕುಗಳನ್ನು, ಸರಿಸಮಾನವಾದ ಜೀವನವನ್ನು ಕಟ್ಟುಮಾಡುವ ರೀತಿಯಲ್ಲಿ ಮಾಡುತ್ತೇವೆ ಎಂದು ಹೇಳಿದರು. ಪಕ್ಷದ ರಾಜ್ಯದ, ದೇಶದ ಗುತ್ತಿಗೆದಾರರು ಬಂಡವಾಳಗಾರರ ಮೇಲೆ ಹತೋಟಿಯನ್ನು ಇಡುತ್ತೇವೆ ಎಂದು ಹೇಳಿತ್ತು. ಇನ್ನೊಂದು ತಿಂಗಳಾದಮೇಲೆ ಸಿಂಹಾವಲೋಕನ ಮಾಡಿ ನೋಡಿದರೆ, ಈ ಆಶ್ವಾಸನೆಗಳು ಎಷ್ಟರಮಟ್ಟಿಗೆ ಕಾರ್ಯಗತವಾಗತಕ್ಕಂಥ ಪರಿಸ್ಥಿತಿ ಇದೆಯೆಂದು ಗೊತ್ತಾಗುತ್ತದೆ. ಮೊಟ್ಟಮೊದಲನೆಯದಾಗಿ, ಬಡತನ ನಿರ್ಮೂಲನ ಮಾಡುವುದಕ್ಕೆ ಬದಲು ಬಡತನದ ಬವಣೆ ಎಲ್ಲೆಲ್ಲೂ ಕಾಣುತ್ತಿದೆ. ಅದಕ್ಕೆ ಪ್ರಮುಖವಾಗಿ ಏರತಕ್ಕ ಬೆಲೆಗಳು. ಹಿಂದೆ ಮಾತನಾಡಿದಂಥ ಕೆಲವು ಮಿತ್ರರು ಇದರ ಬಗ್ಗೆ ಕೆಲವು ಅಂಶಗಳನ್ನು ಕೊಟ್ಟಿದ್ದಾರೆ. ನಾನು ಅಂಕಿ ಅಂಶಗಳನ್ನು ಹೆಚ್ಚಾಗಿ ಹೇಳುವುದಕ್ಕೆ ಹೋಗದೆ, ಬೆಲೆಯ ಏರಿಕೆಯ ಬಗ್ಗೆ ಕೆಲವೇ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಬೆಲೆಯ ಏರಿಕೆಯಿಂದ ಸಾಮಾನ್ಯ ಜನಕ್ಕೆ ತೊಂದರೆಯಾಗುತ್ತದೆ, ಉತ್ಪಾದನೆ ಮಾಡತಕ್ಕ ರೈತರಿಗೆ ತೊಂದರೆಯಾಗುತ್ತದೆ, ಎಂದು ನಾನು ಹೇಳಬೇಕಾಗಿದೆ. ಈಗತಾನೆ ಮಾತನಾಡಿದ ಮಿತ್ರರು ಅಡಿಕೆ ಬೆಲೆಯ ವಿಷಯ ಹೇಳಿದರು. ಒಂದು ಕ್ವಿಂಟಾಲ್ ಅಡಿಕೆಗೆ 625 ರೂಪಾಯಿ ಬೆಲೆ ಬಂದರೆ ಅದು ರೈತನಿಗೆ ಯೋಗ್ಯ ಬೆಲೆ ಎಂದು, ಇದಕ್ಕಿಂತ ಕಡಿಮೆ ಮಾರಾಟವಾದರೆ ರೈತನಿಗೆ ನಷ್ಟ ಎನ್ನುವುದನ್ನು ನಿದರ್ಶನದ ಮೂಲಕ ಕೊಟ್ಟರು. ಅಡಿಕೆ ಬೆಲೆ 250-300 ರೂಪಾಯಿ ಒಂದು ಕ್ವಿಂಟಾಲ್ ಆಗಿರುವುದರಿಂದ ಬೆಳೆಗಾರರಿಗೆ ತೊಂದರೆಯಾಗಿದೆ, ಈ ಕೃಷಿಯಲ್ಲಿ ತೊಡಗಿರತಕ್ಕ ಕಾರ್ಮಿಕರಿಗೆ ತೊಂದರೆಯಾಗಿದೆ. ಅದೇ ರೀತಿಯಲ್ಲಿ ರಾಗಿ, ಕಳೆದ 80-85 ರೂಪಾಯಿ ಇದ್ದದ್ದು 100ರಿಂದ 105 ರೂಪಾಯಿಗೆ ಏರಿದೆ. ಈಗ ರೈತರಲ್ಲಿ ರಾಗಿ ಇಲ್ಲ. ವ್ಯಾಪಾರಸ್ಥರ ಕೈಯಲ್ಲಿ ಸೇರಿದ ಮೇಲೆ ರಾಗಿ ಬೆಲೆ ಜಾಸ್ತಿಯಾಗಿದೆ. ಅದೇ ರೀತಿಯಲ್ಲಿ ಕಡಲೆಕಾಳು ಬೆಲೆ ಒಂದು ಕ್ವಿಂಟಾಲ್‌ಗೆ 250 ರೂಪಾಯಿ ಆಗಿದೆ. ಈಗ ರೈತರಲ್ಲಿ ಕಡಲೆಕಾಳು ಇಲ್ಲ, ವ್ಯಾಪಾರಸ್ಥರ ಕೈಯಲ್ಲಿ ಕಡಲೆಕಾಳು ಇದೆ. ಈ ವಿಷಯವನ್ನು ಸರ್ಕಾರದವರು ಗಮನಿಸದೇ ಹೋದರೆ ಬೆಲೆ ಜಾಸ್ತಿಯಾಗುತ್ತಾ ಸಾಮಾನ್ಯ ಜನರ ಜೀವನ ಕಷ್ಟವಾಗಿ, ತೊಂದರೆಗೆ ಒಳಗಾಗುತ್ತಾರೆ. ಬಡತನ ನಿರ್ಮೂಲ ಮಾಡುತ್ತೇವೆ ಎಂದು ಹೇಳಿದ ಸರ್ಕಾರದ ನೀತಿಯೇ ಇದು ! ಅದಾದ ಮೇಲೆ ಊಳುವವನಿಗೆ ಯೋಗ್ಯ ಜಮೀನು ಕೊಡುತ್ತೇವೆ, ಭೂಸುಧಾರಣೆ ಜಾರಿಗೆ ತರುತ್ತೇವೆ ಎಂದು ಹೇಳಿದರು. ಭೂಸುಧಾರಣೆ ಜಾರಿಗೆ ತರುವುದು ಒಂದು ಕಡೆ ಇರಲಿ, ಸರ್ಕಾರದ ಪಕ್ಷದಲ್ಲಿ

(ಶ್ರೀ. ಸಿ. ಬೈರೇಗೌಡ)

ಲಕ್ಷಾಂತರ ಎಕರ ಜಮೀನು ಇದೆ. ಅದನ್ನು ಕೊಡಿ ಎಂದು ಹೇಳಿದರೆ, ನಾವು ಅಲ್ಲಿ ಕಾಡು ಬೆಳೆಸುತ್ತೇವೆ, ಕಾಡು ಬೆಳೆಸುವುದರ ಮೂಲಕ ದೇಶದಲ್ಲಿ ಸಂಪತ್ತನ್ನು ಉತ್ಪತ್ತಿ ಮಾಡುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಕೋಲಾರ ಜಿಲ್ಲೆಯ ಒಂದು ಉದಾಹರಣೆ ಹೇಳುವುದಾದರೆ ಇವರ ಹೇಳಿದ ಭೂರಹಿತರಿಗೆ ಭೂಮಿ ಕೊಡುತ್ತೇವೆ ಎಂಬ ಮಾತನ್ನು ನಂಬಿ, ಭೂಮಿ ಇಲ್ಲದೆ ಇರತಕ್ಕ ರೈತರು ಅಲ್ಲಿರತಕ್ಕ ಸರ್ಕಾರಿ ಜಮೀನನ್ನು ಕೊಡಿ ಎಂದು ಹತ್ತಾರು ವರ್ಷಗಳಿಂದ ಒತ್ತಾಯ ಮಾಡಿದರೂ ಕೂಡ ಸರ್ಕಾರ ಆ ಜಮೀನನ್ನು ಅವರಿಗೆ ಕೊಡಲಿಲ್ಲ. ಜಮೀನು ಇದೆ ನಾವೇ ಉತ್ಪತ್ತಿ ಮಾಡಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುತ್ತೇವೆ, ಮತ್ತು ರಾಷ್ಟ್ರದ ಜನತೆಗೆ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನಮಾಡುತ್ತೇವೆ, ನಾವೇ ಹೋಗಿ ಸ್ವತಃ ಜಮೀನನ್ನು ಉಳುಮೆ ಮಾಡುತ್ತೇವೆಂದು ಸಾವಿರಾರು ಜನ ರೈತರು ಉಳುವುದಕ್ಕೆ ಹೋದರು. ಜಮೀನು ಕೊಡುತ್ತೇನೆಂದು ಹೇಳಿದ ಸರ್ಕಾರ ಏನು ಮಾಡಿದೆ ಎಂದರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೂಲಕ ರೈತರ ಸಂಘಟನೆ ಮಾಡಿಕೊಂಡು ಜಮೀನನ್ನು ಉಳುವುದಕ್ಕೆ ಹೋದರೆ, ಅವರನ್ನು ಜಿಲ್ಲೆಯ ಹೊರಗಡೆ ಹಾಕುವ ಹೀನ ಕೆಲಸವನ್ನು ಸರ್ಕಾರ ಮಾಡುವುದಕ್ಕೆ. ಹೊರಟಿದೆ. ನಾನು ಹೆಚ್ಚಾಗಿ ಏನೂ ಕೇಳುತ್ತಾ ಇಲ್ಲ, ಜಮೀನು ಇಲ್ಲದವರಿಗೆ, ಜೀವನದ ಅವಕಾಶ ಕಲ್ಪಿಸುವುದಕ್ಕೆ ಬೇರೆ ಮಾರ್ಗ ಇಲ್ಲದವರಿಗೆ ಜಮೀನು ಕೊಡಿ ಎಂದರೆ, ಅವರು ದೇಶದ್ರೋಹಿಗಳು ಆಗಿದ್ದಾರೆ ಜಿಲ್ಲೆಯಿಂದ ಹೊರಗಡೆ ಹಾಕಬೇಕು ಎನ್ನುವ ಸರ್ಕಾರದ ನೀತಿ ಯಾವ ಮಟ್ಟಕ್ಕೆ ಯಾವ ವಿಕೋಪಕ್ಕೆ ಹೋಗಿದೆ ಎನ್ನುವುದನ್ನು ಈ ಸಭೆ ಆಲೋಚನೆ ಮಾಡಬೇಕು. ಜಮೀನನ್ನು ಆಕ್ರಮಣ ಮಾಡಿದ ಸಂದರ್ಭದಲ್ಲಿ ಜಮೀನು ಬೇಕು ಎಂದು ಕೇಳಿದ ಸಂದರ್ಭದಲ್ಲಿ ಕೋಲಾರ ಜಿಲ್ಲಾ ರೈತ ಸಂಘದ ಕಾರ್ಯಕರ್ತರ ಮೇಲೆ ಯಾರು ರಿಪೋರ್ಟ್ ಕಳುಹಿಸಿದ್ದಾರೋ ಅವರ ಕತೆ ಈ ರೀತಿ ಇದೆ. ಬಾಗೇಪಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಲಂಚದ ಆಪಾದನೆಯ ಮೇಲೆ ಸಸ್ಪೆಂಡ್ ಆಗಿದ್ದಾನೆ. ಅವನು ಆರಾಮವಾಗಿ ಕೋಲಾರದಲ್ಲಿ ಓಡಾಡುತ್ತಿದ್ದಾನೆ, ಫಾರೆಸ್ಟ್ ಇಲಾಖೆಯಲ್ಲಿ ರೇಂಜರ್ ಡಿವಿಜನಲ್ ಫಾರೆಸ್ಟ್ ಆಫೀಸರ್ ಸಸ್ಪೆಂಡ್ ಆಗಿದ್ದಾನೆ.

ಶ್ರೀ ಡಿ. ದೇವರಾಜ ಅರಸ್.—ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಅವರನ್ನು ಜಿಲ್ಲೆಯಿಂದ ಹೊರಗಡೆ ಹೋಗಿ ಎಂದು ನೋಟೀಸ್ ಕೊಡಲಿಲ್ಲ. ನಮ್ಮನ್ನು ಗಡಿಪಾರು ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಸಸ್ಪೆಂಡ್ ಮಾಡದೆ ಏನು ಮಾಡಬೇಕು ? ಎನ್‌ಕ್ವೈರಿ ನಡೆಸಬೇಕೋ, ಇಲ್ಲವೋ ? ಅವರನ್ನು ಅಲ್ಲಿ ಹೇಗೆ ಇರಕೂಡದು ಎಂದು ಹೇಳುತ್ತೀರಾ ?

ಶ್ರೀ ಸಿ. ಬೈರೇಗೌಡ.—ಅವರನ್ನು ಅಲ್ಲಿ ಇಟ್ಟುಕೊಂಡಿದ್ದೀರಿ, ನಾವು ಮಾಡಿದ ಅಪರಾಧ ಏನು ? ಅಲ್ಲಿರತಕ್ಕ ಡಿವಿಷನಲ್ ಫಾರೆಸ್ಟ್ ಆಫೀಸರ್ ತಪ್ಪು ಲೆಕ್ಕ ಬರೆದು 5-6 ಲಕ್ಷ ರೂಪಾಯಿಗಳ ನಷ್ಟ ಉಂಟುಮಾಡಿದ್ದಾನೆ, 10 ಜನ ರೇಂಜ್ ಆಫೀಸರ್‌ಗಳು ಸಸ್ಪೆಂಡ್ ಆಗಿದ್ದಾರೆ. ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಡಿವಿಷನರ್ ಫಾರೆಸ್ಟ್ ಆಫೀಸರ್ ಅವರು ನಮ್ಮ ಮೇಲೆ ರಿಪೋರ್ಟ್ ಕಳುಹಿಸಿರತಕ್ಕವರು, ನಾವು ಆಯೋಗ್ಯರು. ಎಲ್ಲಯೇ ಆಗಲಿ, ರಾಜಕೀಯ ಜೀವನದಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಪಾಪಣ್ಣನವರು, ಮಾರ್ಕ್ಸ್‌ವಾದಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್. ಎಸ್. ರಾಮರಾಯರು ಆಗಲೀ ದೇಶ ದ್ರೋಹ ಕೆಲಸವನ್ನು ಮಾಡಿದ್ದಾರೆ ಎಂದರೆ, ಜಿಲ್ಲೆಯಿಂದಲ್ಲ ದೇಶದಿಂದ ಬೇಕಾದರೆ ಹೊರಗಡೆ ಹೋಗಿ ಎಂದು ಹೇಳಿ. ನಾವು ನ್ಯಾಯವಾಗಿ ಪ್ರಜಾಪ್ರಭುತ್ವದ ನೀತಿಗೆ ಅನುಗುಣವಾಗಿ ಪ್ರಜಾಪ್ರಭುತ್ವದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಾಗ, ರಾಜಕೀಯ ಚೈತನ್ಯವನ್ನು ಜನಗಳಿಗೆ ಉಂಟುಮಾಡಿದಾಗ ಜಿಲ್ಲೆಯಿಂದ ಹೊರಗೆ ಹೋಗಿ ಎಂದು ನೋಟೀಸ್ ಸಾದರು ಮಾಡಿದ್ದೀರಿ ಇದು ಖಂಡನೀಯ ಎಂದು ಈ ಸಭೆಯಲ್ಲಿ ತಿಳಿಸಬೇಕಾಗುತ್ತದೆ. ಭಾರತ ಮತ್ತು ಪಾಕಿಸ್ತಾನದ ಯುದ್ಧ ಕಾಲದಲ್ಲಿ ಭದ್ರತಾ ಕಾನೂನಿಗೆ ಒಳಗಾಗಿದ್ದವರು ಇಂದು ಮಂತ್ರಿಮಂಡಲದಲ್ಲಿದ್ದಾರೆ. ನೀವು ಇಂಥ ಅವಕಾಶ ಮಾಡಿದಿರಿ, ದೇಶಕ್ಕೆ ಇವತ್ತು ಯಾರು ಹಾನಿ ಮಾಡುತ್ತಾರೊ ಅವರಿಗೆ ಉನ್ನತ ಸ್ಥಾನ ಕೊಟ್ಟಿದ್ದೀರಿ. ಸಾಮಾನ್ಯ ಜನತೆಯ ಕಷ್ಟವನ್ನು ಪ್ರಜಾಪ್ರಭುತ್ವದ ತತ್ವಗಳ ಮೂಲಕ ಸಂಘಟನೆ ಮಾಡುವುದಕ್ಕೆ ಯಾರ್ ಹೋರಟಿದ್ದಾರೋ ಅವರನ್ನು ಜಿಲ್ಲೆಯಿಂದ ಹೊರಗಡೆ ಹೋಗಿ ಎಂದು ತಾವು ಕೊಟ್ಟಿರತಕ್ಕ ಆದೇಶ ಖಂಡನೀಯವಾಗಿದೆ. ಏರೇಂದ್ರಪಾಟೀಲರ ಸರ್ಕಾರ ಇದನ್ನು ಮಾಡಿದ್ದರೆ ನಾವು ಒಪ್ಪಿ

ಕೊಳ್ಳಬಹುದಿತ್ತು. ಅವರು ಕೆಟ್ಟವರು ಎಂದು ನೀವೇ ಹೇಳಿದ್ದೀರಿ. ಕೆಟ್ಟ ಸರ್ಕಾರಿ ಅನ್ಯಾಯ ಮಾಡಿದ್ದರೆ ಒಪ್ಪಿಕೊಳ್ಳಬಹುದಿತ್ತು. ಬಡ ಜನರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿಕೊಂಡ ಬಂದ ಸರ್ಕಾರ, ಇವತ್ತು ಬಡವರ ಪರವಾಗಿರುವವರಿಗೆ ನೋಟೀಸನ್ನು ಕೊಟ್ಟು ಗಡಿಪಾರು ಮಾಡಿರುವುದು ಖಂಡಿತ ಖಂಡನೀಯ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಗಡಿಪಾರು ಮಾಡಿದ್ದು ಯಾವ ಕಾರಣಕ್ಕಾಗಿ, ಪೋಲೀಸ್ ಆಕ್ಟ್ ಪ್ರಕಾರವೋ ಅಥವಾ ಡಿಫೆನ್ಸ್ ಆಫ್ ಇಂಡಿಯಾ ಸೆಕ್ಯುರಿಟಿ ಪ್ರಾವಿಷನ್ಸ್ ಪ್ರಕಾರವೋ ?

ಶ್ರೀ ಸಿ. ಬೈರೇಗೌಡ.—ಪೋಲೀಸ್ ಆಕ್ಟ್ ಪ್ರಕಾರ ಗಡಿಪಾರು ಮಾಡಬೇಕೆಂದು ಇರುವುದು.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರಿ ಫಾರೆಸ್ಟ್ ಅನ್ನು ಕಡಿಯಲಕ್ಕೆ ಪ್ರಚೋದನೆ ಮಾಡಿದರೆ ಗಡಿಪಾರು ಮಾಡಿರಬಹುದು. ನೀವು ಏತಕ್ಕೆ ಕಾಡನ್ನು ಕಡಿಯುವುದಕ್ಕೆ ಹೋಗುತ್ತೀರಿ ?

ಶ್ರೀ ಸಿ. ಬೈರೇಗೌಡ.—ಅಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸುತ್ತೀರಿ, ಬಡವನಾಗಿರತಕ್ಕವನು ನಿಮ್ಮ ಕಣ್ಣಿನಲ್ಲಿ ಬರ್ತಾ ಇದ್ದಾನಲ್ಲ ಅವನಿಗೆ 25 ರೂಪಾಯಿಗೆ ಒಂದು ಟನ್ ಮರವನ್ನು ಮಾರುತ್ತಿದ್ದೀರಿ.

ನಮ್ಮನ್ನು ಜಮೀನು ಕೊಡಿ ಎಂದು ಕೇಳಿದರೆ ಅಪರಾಧವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಫಾರೆಸ್ಟ್ ಇರುವುದು ಹೋದರೆ ಸಂಕಟವಾಗುವುದಿಲ್ಲವೇ ? ನಿಮ್ಮ ಮನೆಗೆ ಸೌದೆ ಉರಿಸುವುದಕ್ಕೆ ಫಾರೆಸ್ಟ್ ಇರತಕ್ಕದ್ದೇ ? ದೇಶದ ಹಿತದೃಷ್ಟಿಯಿಂದ ಇವೊತ್ತು ದೇಶದಲ್ಲಿ ಜಮೀನು ಇಲ್ಲದವರಿಗೆ ಹಂಚಿದರೆ ಫಾರೆಸ್ಟ್ ಕೊಟ್ಟುಬಿಡೋಣ ಎಂದರೆ ನಿಮ್ಮ ಕೈಗೆ ಅಧಿಕಾರ ಬಂದರೆ ಅದೇ ಮಾಡುತ್ತಿರೋ ಏನೋ ಗೊತ್ತಿಲ್ಲ. ಫಾರೆಸ್ಟ್‌ನಲ್ಲಿರತಕ್ಕ ಗಿಡಗಳನ್ನು ಕಡಿಯುವುದು, ಸರ್ಕಾರಿ ಜಮೀನನ್ನು ಆಕ್ರಮಿಸಿ ಮಾಡುವುದು ಇದರ ಕಡೆಗೆ ಜನಗಳನ್ನು ಪ್ರಚೋದನೆ ಮಾಡಿದರೆ ಹಿಡಿದು ಹಾಕದೆ ಏನು ಮಾಡಬೇಕಾಗುತ್ತದೆ ? ಇವೊತ್ತಿನ ದಿವಸದ ಮಾದರಿಯನ್ನು ಯೋಚನೆ ಮಾಡಿ ಅರ್ಥ ಮಾಡಿಕೊಳ್ಳಿ. ಯಾವುದೇ ದೇಶದ ಸಂಪತ್ತು ಎಂದರೆ ಅರಣ್ಯ. ನಮ್ಮ ಮೈಸೂರು ರಾಜ್ಯಕ್ಕೆ ಇರುವುದೇ ಫಾರೆಸ್ಟ್ ಕಡಿಮೆ ಇದೆ. ಅದನ್ನು ಹಾಳು ಮಾಡಿಕೊಳ್ಳುವುದಾದರೆ ದೇಶದ ಸಂಪತ್ತನ್ನು ಹಾಳುಮಾಡಿಕೊಂಡಂತಾಗುತ್ತದೆ. ಮರ ಇಲ್ಲ ಎಂದು ಹೇಳುತ್ತೀರಿ. ಮರ ಇರಲಲ್ಲ ; ಮಳೆ ಬರಲಲ್ಲ ; ಗಿಡ ಹಾಕುವುದನ್ನು ಬಿಟ್ಟಿದ್ದೀರಿ ; ಮರಗಳನ್ನು ಕಡಿದು ಸೌದೆ ಮಾಡಿಕೊಂಡು ಹೋಗುತ್ತೀರಿ ; ಹಿಂದಿನ ಜನಾಂಗದವರು ಮರ ಗಿಡ ಹಾಕುತ್ತಾ ಹೋಗುತ್ತಿದ್ದರು, ಆ ಸಂಪ್ರದಾಯವನ್ನು ಈಗ ಕಳೆದುಕೊಂಡಿದ್ದೇವೆ. ಕಡಿಯುವ ಸಂಪ್ರದಾಯಕ್ಕೆ ಹೊರಟುಹೋಗಿದ್ದೇವೆ. ತಾವು ಅದನ್ನು ಎನ್‌ಕರೇಜ್ ಮಾಡಬೇಕು ಎಂದು ಹೊರಟಿದ್ದೀರಾ ?

ಶ್ರೀ ಸಿ. ಬೈರೇಗೌಡ.—1932 ರಿಂದ ಕೋರಾರ ಜಿಲ್ಲೆಯಲ್ಲಿ ಕೆಲವು ಕಡೆ ಫಾರೆಸ್ಟ್ ಇರಾಖೆಯ ವಶದಲ್ಲಿ ಭೂಮಿ ಇದ್ದು, 1932 ರಿಂದ ಮರಗಳನ್ನು ಬೆಳೆದದ್ದು 1973 ರಲ್ಲಿ ಬೆಳೆಸಬೇಕು ಎಂದು ತಮಗೆ ಈಗ ವಿವೇಚನೆ ಹೇಗೆ ಬಂತು ? 1932 ರಿಂದ ಯಾತಕ್ಕೆ ಬೆಳೆಸಲಲ್ಲ ? ಒಂದು ವಾರದ ಹಿಂದೆ ಶಿವಮೊಗ್ಗಾ ಮತ್ತು ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ಗಳಲ್ಲಿ ಪ್ರವಾಸ ಹೋಗಿದ್ದಾಗ ನಮ್ಮ ದೇಶವಲ್ಲಿರುವ ಅರಣ್ಯಕ್ಕೆ ಏನು ಗತಿ ಬಂದಿದೆ ಎಂಬುದು ನೋಡಿದೆ. ಕಾಡಿಗೆ ಬೆಂಕಿಬಿದ್ದು ಕಾಳ್ಗಿಚ್ಚು ಬೆರೆ ಬಾಳುವ ಸಂಪತ್ತನ್ನು ಹಾಳು ಮಾಡುತ್ತಿದೆ ಅದರ ರಕ್ಷಣೆ ಮಾಡುವುದಕ್ಕೆ ಆಗಲಲ್ಲ. ಉಳುವುದಕ್ಕೆ ಜಮೀನು ಇದೆ ಒಂದೆರಡು ಎಕರೆ ಕೊಡಿ ಆಹಾರ ಉತ್ಪತ್ತಿ ಮಾಡುತ್ತೇವೆ ಅದನ್ನು ಕೊಡಿ ಎಂದರೆ ಕೊಡುವುದಕ್ಕೆ ಆಗುವುದಿಲ್ಲ. ಮಲೆನಾಡು ಜಿಲ್ಲೆಯಿಂದ ಬಂದಿರತಕ್ಕ ಸದಸ್ಯರು ಇದ್ದಾರೆ ಆ ಕಾಡಿನಲ್ಲ ಕೋಟ್ಯಾಂತರ ರೂಪಾಯಿ ವರ್ಷಕ್ಕೆ ನಷ್ಟವಾಗುತ್ತಿದೆ. ಒಂದು ವಾರದಿಂದ ಖುದ್ದಾಗಿ ನೋಡಿಕೊಂಡು ಬಂದಿದ್ದೇನೆ. ಜಮೀನು ಬೇಡುವುದ ಒಂದು ಪ್ರಶ್ನೆ. ಗಿಡ ಕಡಿಯುವುದು ಮತೊಂದು ಪ್ರಶ್ನೆ.

ಶ್ರೀ ಡಿ. ದೇವರಾಜ್ ಅರಸ್.—ನಾವು ಕೂಡ ಮಲೆನಾಡಿನಿಂದ ಬಂದಿರುವವರು. ರಾತ್ರಿ ಹೊತ್ತು ಎಷ್ಟೋ ಕಡೆ ಬೆಂಕಿ ಬಿದ್ದು ಉರಿಯುತ್ತದೆ. ಬಯಲು ಸೀಮೆಯಿಂದ ಹೋದವರು ಕಾಡು ಉರಿದುಹೋಗುತ್ತದೆ ಎಂದು ಬಹಳ ಸಂಕಟದಿಂದ ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.—ಯೋಗ್ಯವಾದ ಜಮೀನನ್ನು ಕೊಡಿ. ಕೊಡುವುದಕ್ಕೋಸ್ಕರ ಜಮೀನು ಇದೆ. ನಿಮಗೆ ತೋರಿಸುತ್ತೇನೆ. ಏನು ಬೆಳೆಯುವೆ ಇರತಕ್ಕ ಜಮೀನು ಏನು ಇದೆ ಅದನ್ನು ಕೊಡಿ ಅಷ್ಟೇ.

ಶ್ರೀ ಡಿ. ದೇವರಾಜ್ ಅರಸ್.—ಬಂತು ನೋಡಿ, ಕೊಡಿ, ಎಂದರೆ, ಕಾನೂನನ್ನು ಮುರಿಯುವುದಕ್ಕೆ ಹೋದರೆ ನಾವು ಸಹಿಸುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಕೇಳಿ ಸರ್ಕಾರದ ವತಿಯಿಂದ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡೋಣ. ಎಲ್ಲಿ ಜನರು ಇರುತ್ತಾರೆ ಅವರ ಮನೆ ಮುಂದೆ, ದೇಶದ ಎಲ್ಲಾ ಜನರಿಗೂ ಅವರವರ ಮನೆ ಮುಂದೆ ಜಾಗ ಕೊಡಿ ಎಂದರೆ ಹೇಗೆ ಸಾಧ್ಯ? ಅಂಧ್ರ ದೇಶದಿಂದ 200 ಮೈಲಿ ದೂರ ವಾಸ ಮಾಡುವುದಕ್ಕೆ ತಯಾರು ಇದ್ದಾರೆ. ಆದರೆ ಕೋಲಾರ ಬಿಟ್ಟು ಬೆಂಗಳೂರು, ತುಮಕೂರಿಗೆ ಹೋಗುವುದಕ್ಕೆ ಅಥವಾ ತುಮಕೂರು ಬಿಟ್ಟು ಚಿಕ್ಕಮಗಳೂರಿಗೆ ಸಹ ಹೋಗುವುದಕ್ಕೆ ತಯಾರಿಲ್ಲ ಎಂದರೆ ಹೇಗೆ?

ಶ್ರೀ ಸಿ. ಬೈರೇಗೌಡ.—ಜಮೀನು ಇಲ್ಲವಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಬೇರೆ ಕಡೆ ಕೊಡುತ್ತೇವೆ. ನಮ್ಮ ಜನ ಕೂತ ಕಡೆ ಕಾಡು ಇದ್ದರೆ ಕಡಿದು ಹಾಕಬಾರದು. ಸರ್ಕಾರದ ಜಮೀನು ಇದ್ದರೆ ಉತ್ತುಕೊಂಡು ಬಿಡುವುದು. ಸರ್ಕಾರವೂ ಬೇಕಿಲ್ಲ; ಕಾಡು ಬೇಕಿಲ್ಲ; ಅವರಿಗೆ ಹೇಗೆ ಇಷ್ಟ ಇದ್ದರೆ ಹಾಗೆ ನಡೆದುಕೊಂಡು ಬಿಡುವುದು ನಮ್ಮ ಜನರ ಸ್ವಭಾವ ಆಗಿದೆ.

ಶ್ರೀ ಸಿ. ಬೈರೇಗೌಡ.—ಕಾಡು ಕಡಿಯಿರಿ ಎಂದು ಹೇಳಲಿಲ್ಲ. ಕಾಡು ಕಡಿದು ಇಲ್ಲ. ದಯವಿಟ್ಟು ಅದನ್ನು ಹೇಳಬೇಡಿ. ಹೆಚ್ಚು ಭಾಗದಲ್ಲಿ ಜಮೀನು ಉತ್ತುಕೊಂಡಿದ್ದಾರೆ ಅಷ್ಟೆ, ಮರ ಕಡಿದಿಲ್ಲ. ಆ ರೀತಿ ತಮ್ಮ ಅಧಿಕಾರಿಗಳು ತಮಗೆ ವರದಿ ಮಾಡಿದ್ದರೆ ಅದು ತಪ್ಪು ಅದನ್ನು ತಿದ್ದಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಜಮೀನು ಕೊಡಿ ಕಾಡು ಕಡಿದುಕೊಳ್ಳುತ್ತೇವೆ ಎಂದರೆ ನಮ್ಮ ದೇಶದಲ್ಲಿ ಜಮೀನು ಇಲ್ಲದೆ ಇರತಕ್ಕ ಜನ ಲಕ್ಷೋಪಲಕ್ಷ ಜನ ಇದ್ದಾರೆ, ಹೆಚ್ಚಿಗೆ ಇರುವುದು ಬಿಟ್ಟುಕೊಡುವ ಕಾನೂನು ಮಾಡುವುದಕ್ಕೆ ಆಡ್ವೈಸ್ ಮಾಡುತ್ತಿದ್ದಾರೆ. ಗುತ್ತಿಗೆ ಮಾಡುವವರಿಗೆ ಜಮೀನು ಬರುವ ಹಾಗೆ ನೋಡಿಕೊಳ್ಳೋಣ ಎಂಬ ಸಂಪ್ರದಾಯ ಸಹ ಇದೆ. ಕಾನೂನು ನಾವು ನೀವು ಸೇರಿ ಮಾಡಿದ್ದೇವೆ. ಯಾರಾದರೂ ಗುತ್ತಿಗೆ ಮಾಡುತ್ತಿದ್ದರೆ ಅವನು ಗುತ್ತಿಗೆ ಮಾಡಿದ ಜಮೀನು ಅವನಿಗೆ ಕೊಡಬೇಕಾದುದು ಎಂದು ನಾವು ನೀವು ಕಾನೂನು ಮಾಡಿದ್ದೇವೆ. ಅದನ್ನು ಎನ್‌ಫೋರ್ಸ್ ಮಾಡುವುದರಲ್ಲಿ ನಮ್ಮದು ತಪ್ಪು ಇದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ನಿಮ್ಮ ಸಹಾಯ ಕೇಳುತ್ತೇನೆ ನಿಮ್ಮ ಕ್ಷೇತ್ರದಲ್ಲಿ ಎಷ್ಟೆಷ್ಟು ಜನ ಗುತ್ತಿಗೆದಾರರು ಇದ್ದಾರೆ ಅವರಿಗೆ ರಕ್ಷಣೆ ಕೊಡುವ ಜವಾಬ್ದಾರಿ ಇದೆ. ಕೆಲವರಿಂದ ರಿಹ್ಯಾಬಿಲಿಟೇಟ್ ಮಾಡೋಣ. ಕಮಿಟೀಸ್ ಇವೆ. ಎಲ್ಲೆಲ್ಲ ಜಮೀನು ಕೊಡುವುದಕ್ಕೆ ಸಾಧ್ಯ ಇದೆ ಎಂದು ಸರ್ಕಾರಕ್ಕೆ ಗೊತ್ತಿದೆ. ಜಮೀನನ್ನು ಐಡೆಂಟಿಫೈ ಮಾಡಿದ್ದಾರೆ, ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ. ಇನ್ನು ಭೂ ಸುಧಾರಣೆ ಕಾನೂನು ಬಂದಿರುವುದರಿಂದ ಎಷ್ಟು ಜಮೀನು ಬರುತ್ತದೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ. ಇದು ಬಿಟ್ಟು ಬಯಲು ಸೀಮೆಯಲ್ಲಿ ಕಾಡಿಗೆ ಸೇರಿದ ಜಮೀನು ಇರುತ್ತದೆ. ಅದು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸೇರಿದ್ದು. ಆದರೆ ಒಂದು ವೇಳೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡಿರುವುದನ್ನು ಬಿಡಬೇಕೇ ಇಷ್ಟವೇ ಎನ್ನುವುದನ್ನು ಪರಿಶೀಲನೆ ಮಾಡಿ, ಲೋಕರ್ ಸಿಚ್ಯುಯೇಷನ್ ನೋಡಿ, ಕೊಡಬೇಕೇ ಬಿಡಬೇಕೇ ಎನ್ನುವುದರಲ್ಲಿ ಯಾವುದರಲ್ಲಿ ಅರ್ಥ ಇದೆ, ಅದು ಏನಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಕಾಡು ಕಡಿಯಿರಿ, ಉಳಿರಿ ಎಂದು ನೀವು ಹೇಳದೆ ಇರಬಹುದು, ನಮ್ಮ ಪಕ್ಷದವರು ಹೇಳಿರಬಹುದು ಆದುದರಿಂದ ಆ ರೀತಿ ಮಾಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ಒಂದು ವಿಷಯ ತರುವುದಕ್ಕೆ ಇಚ್ಛೆಪಡುತ್ತೇನೆ. ವಿರೋಧಪಕ್ಷದವರಿಗಿಂತ ತಮ್ಮ ಪಕ್ಷದವರು ಕಾಡು ಜಮೀನು ಎಲ್ಲದೆ ಉಳಿರಿ ಎಂದು ಪ್ರಚಾರ ಮಾಡಿರುವುದರಿಂದ ಬಹು ಜನ ಬಡ ಜನರು ಇತ್ತೀಚೆಗೆ ಉಳುತ್ತಿದ್ದಾರೆ. ಈ ವಿಷಯ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ಪಕ್ಷ, ನಿಮ್ಮ ಪಕ್ಷ ಇಲ್ಲ. ನಮ್ಮ ಪಕ್ಷದವರು ಹೇಳಿದ್ದರು ಖಂಡಿಸುವುದಕ್ಕೆ ತಯಾರಿದ್ದೇನೆ, ನಿಮ್ಮ ಪಕ್ಷದವರು ಹೇಳಿದ್ದರೆ, ಸರಿಹೋಗುವುದಿಲ್ಲ, ಅವರು

ಹೇಳಿದರೂ ಶುದ್ಧ ತಪ್ಪು ದೇಶಕ್ಕೆ ಎರಡು ಬಗೆದ ಹಾಗಾಗುತ್ತದೆ. ಕಾನೂನು ವಿರುದ್ಧ ಹೋದ ಹಾಗಾಗುತ್ತದೆ. ಫಾರೆಸ್ಟ್ ಇದುವರೆಗೆ ಬೇಡ ಎಂದು ಕಾನೂನು ಮಾಡಿ, ಕಾಯಿದೆ ಮಾಡಿ ಅದರಂತೆ ಮಾಡೋಣ. ಗೋಮಾಳ ಬೇಡ, ಗೋಮಾಳ ಇರುವುದಕ್ಕೆ ಸಾಧ್ಯವಿಲ್ಲ ಅದು ಹೋಯಿತು, ಫಾರೆಸ್ಟ್ ಹಾಳುಮಾಡಿಬಿಡಿ ಎಂದು ಹೇಳಿದ್ದರೆ ಅದು ಶುದ್ಧ ತಪ್ಪು.

Mr. **DEPUTY SPEAKER**—A top expert has said that if all the trees are cut down the entire forest will be scraped and there will be very little rain.

ಶ್ರೀ ಸಿ. ಬೈರೇಗೌಡ.—ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಂಡಿದ್ದಾರೆ. ಮರ ಹೊಡೆದಿದ್ದಾರೆ ಎಂದು ಅವರ ಅಧಿಕಾರಿಗಳು ತಪ್ಪು ಲೆಕ್ಕ ಬರೆದಿರುವುದರಿಂದ ನಸ್ಪೆಂಡ್ ಆಗಿರುವುದು. ಇದನ್ನು ಮುಖ್ಯಮಂತ್ರಿಗಳು ಗಮನಿಸಬೇಕು. 6 ಲಕ್ಷ ರೂಪಾಯಿನ ಕೆಲಸವಾಗಿದೆ ಎಂದು ಕೆಲಸವಾಗದೆ ಇದ್ದರೂ ಆಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಜಮೀನು ಉತ್ತದ್ದು ಬೇರೆಕಡೆ ಮರ ಹೋಗಿದ್ದು ಬೇರೆಕಡೆ. ಇವೊತ್ತು ಸರ್ಕಾರದ ವಶದಲ್ಲಿರುವ ಭೂಮಿ ವಿಷಯ ಹೀಗಾದರೆ ಪತ್ರಿಕೆಗಳಲ್ಲಿ ಇವೊತ್ತು ನೋಡುತ್ತಿದ್ದೇವೆ ಬಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಇರುವ ಭೂ ಸುಧಾರಣೆ ಮಸೂದೆಗೆ ಆಡಳಿತ ಪಕ್ಷ ಪಾರ್ಟಿ ಡೌನ್ ಮಾಡಿ ಯಾವ ಯಾವ ಊರಿನಲ್ಲಿ ಯಾರ ಯಾರ ವಶದಲ್ಲಿ ಭೂಮಿ ಇದೆಯೋ ಅವರ ವಶದಲ್ಲಿ ಭೂಮಿ ಇರುವ ತರಹ ಪಕ್ಷದವತಿಯಿಂದ ಒತ್ತಾಯ ತರುತ್ತಿದ್ದಾರೆ. ನಾವು ಭೂಸುಧಾರಣೆ ವಿಷಯದಲ್ಲಿ ಆನೆಸ್ಟ್ ಆಗಿದ್ದರೂ ಸಹ ಅವರ ಪಕ್ಷದಲ್ಲಿ ಕೆಲವರು ಭೂಸುಧಾರಣಾ ಕಾನೂನನ್ನು ವಾಟರ್ ಡೌನ್ ಮಾಡಿ ಭೂಮಿ ಇಲ್ಲದೆ ಇರುವವರಿಗೆ ಭೂಮಿ ಸಿಕ್ಕದ ರೀತಿಯಲ್ಲಿ ಪಾಡುತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಇದಕ್ಕೆ ಏನಾದರೂ ಕೂಡ ತಾವು ಮಣಿಯುವುದಾದರೆ ಖಂಡಿತವಾಗಿ ತಾವು ಮುಖ್ಯಮಂತ್ರಿ ಪದವಿಯಲ್ಲಿ ಇರುವುದಕ್ಕಿಂತ ಇಲ್ಲದೆ ಇರುವುದು ವಾಸಿ ಎಂದು ಹೇಳುತ್ತೇನೆ.

ಅಧ್ಯಕ್ಷರೇ, ನಾನು ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸ ಹೋಗಿದ್ದಾಗ ಕೆಲವು ಪ್ಲಾಂಟೇಷನ್‌ಗಳಲ್ಲಿರುವ ಕಾರ್ಮಿಕರ ವಸತಿ ಗೃಹಗಳನ್ನು ನೋಡಿಬಂದೆ. ನಮ್ಮ ಕಡೆ ಹಂದಿಗೂಡು ಎಂದು ಕರೆಯುತ್ತಾರೆ, ಆ ರೀತಿ ಇವೆ. ಅವರ ಮನೆಗಳು, ಜಲನಾಡು ಪ್ರದೇಶದಲ್ಲಿ ಮಳೆಗಾಲದಲ್ಲಿ ಬಹಳ ಜಾಗ ಇರುತ್ತದೆ. ಕಾರ್ಮಿಕರಿಗೆ ಒದಗಿಸಿರತಕ್ಕ ಮನೆಗಳಿಗೆ ಫ್ಲೋರಿಂಗ್ ಇಲ್ಲ, ಕುಡಿಯುವ ನೀರಿಗೆ ಬೇಸಿಗೆ ಕಾಲದಲ್ಲಿ ಬಹಳ ದೂರ ಹೋಗಬೇಕಾಗಿದೆ, ದೀಪದ ವ್ಯವಸ್ಥೆ ಇಲ್ಲ ಮತ್ತು ಮನುಷ್ಯನಿಗೆ ಯಾವ ಅವಶ್ಯಕತೆಗಳು ಬೇಕೋ ಅದೊಂದನ್ನೂ ಒದಗಿಸಿಲ್ಲ.

4-00 P.M.

ರೋಡ್ ಟ್ರಾನ್ಸ್‌ಪೋರ್ಟ್ ವಿಷಯ ಹೇಳಬೇಕೆಂದರೆ, ನಾನು ಇಂದು ಒಂದು ಬಸ್ಸಿನಲ್ಲಿ ಬಂದೆ. ಆ ಬಸ್ಸಿನಲ್ಲಿ ನಾನು ಕುಳಿತಾಗ 20 ಮಂದಿ ಇದ್ದರು. ಆದರ ಮುಂದುಗಡೆ ಒಂದ ಕಂಟ್ರಾಕ್ಟ್ ಬಸ್, ಹಿಂದುಗಡೆ ಒಂದು ಕಂಟ್ರಾಕ್ಟ್ ಬಸ್ ಓಡುತ್ತಿದ್ದುವು. ನಾನು ಕುಳಿತಿದ್ದ ಬಸ್ಸಿನಲ್ಲಿ ಕೇವಲ 20 ಜನರಿದ್ದರೆ, ಅನ್ ಕಾಂಟ್ರಾಕ್ಟ್ ಎಂದು ಬೋರ್ಡ್ ಹಾಕಿಕೊಂಡು ಅದರ ಮುಂದೆ ಮತ್ತು ಹಿಂದೆ ಇದ್ದ ಬಸ್ಸುಗಳಲ್ಲಿ ಭರ್ತಿಯಾಗಿ ಜನರಿದ್ದು, ನಿಂತುಕೊಂಡು ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರೂ ಅನೇಕರಿದ್ದರು. ಎಂ.ಎಸ್.ಆರ್.ಟಿ.ಸಿ. ಮೇಲೆ ಹಾಕಿರುವುದು ಜನಗಳ ದುಡ್ಡು. ಇದರಲ್ಲಿ ಕೋಟ್ಯಂತರ ರೂಪಾಯಿ ನಷ್ಟವಾಗುತ್ತಿದೆ ಅನ್ ಕಾಂಟ್ರಾಕ್ಟ್ ಎಂದು ಬೋರ್ಡ್ ಹಾಕಿಕೊಂಡು ಪ್ರಯಾಣಿಕರನ್ನು ಕರೆದುಕೊಂಡು ಹೋಗಿ ಬಸ್ಸುಗಳಿಂದ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಬಹಳ ನಷ್ಟವಾಗುತ್ತಿದೆ; ಜನಗಳ ದುಡ್ಡು, ದೇಶದ ದುಡ್ಡು ಹಾಳಾಗುತ್ತಿದೆ. ಸರ್ಕಾರಿ ಉದ್ಯಮವಾಗಿರುವುದರಿಂದ ಸರ್ವತೋಮುಖವಾಗಿ ಪ್ರಗತಿಯನ್ನು ಸಾಧಿಸುವ ರೀತಿಯಲ್ಲಿ, ಲಾಭದಾಯಕವಾದ ರೀತಿಯಲ್ಲಿ ನಡೆಸಬೇಕಾದ್ದು ಎಲ್ಲರ ಕರ್ತವ್ಯ. ಇದನ್ನು ಸರಿಯಾಗಿ ನಡೆಸದೆ ಇದ್ದ ಮೇಲೆ ಸರ್ಕಾರ ಏಕೆ ಇರಬೇಕು ಎನ್ನುವುದು ಅರ್ಥವಾಗುವುದಿಲ್ಲ.

Sri C. M. **ARUMUGAM**.—Why not we create a full fledged Minister for the 'On Contract' buses ? The Minister in charge of Transport would find it difficult to look after both ordinary transport and 'on contract' buses.

Mr. DEPUTY SPEAKER.—The hon. member can bring it in the form of a non-official Resolution.

Sri D.DEVARAJ URS.— We can create a Minister for these vehicles provided he is capable of stopping these things. Unless there is an Amendment to the existing Act, nobody can prevent them. I would request the hon. Member to kindly study the Law in the matter. Under the Motor Vehicles Act, there are certain powers given to the R.T.As, who are quasi-judicial bodies and till such time the Motor Vehicles Act as it stands or the relevant sections relating to Contract Carriages are modified or amended, I am afraid you, or I, or anybody else will not be in a position to stop the R.T.As. issuing contrac carriage permits. This has gone to courts not once, but several times. I can quote any number of instances where these things have been challenged by the Courts. We are unable to do anything for the present. The remedy lies certainly in not simply allowing the existing Act to continue. We have to take effective steps to amend the present Act. At one stage, I wanted to amend it. My remembrance is that the State Government is not in itself authorised to amend this; it must be done with the concurrence of the Centre. That is my remembrance. Once when I was handling this, I did make a very very serious effort to amend the Act. We wrote to the Government of India The then Minister wrote back stating ;' We ourselves are going to amend. By the time they took up the amendment, I was not in the Chair and the Amendment did not come.

ಶ್ರೀ ಸಿ. ಬೈರೇಗೌಡ.—ಮೋಟಾರು ವಾಹನಗಳ ಬಗ್ಗೆ ಕಾನೂನನ್ನು ಕೇಂದ್ರ ಸರ್ಕಾರ ತಿದ್ದುಪಡಿ ಮಾಡಬೇಕೆಂದು ಕಣ್ಣು ಮುಚ್ಚಿ ಕುಳಿತುಕೊಂಡರೆ, ಅದರಿಂದ ನಷ್ಟವಾಗುತ್ತಿರುವುದು ನಮಗೆ. ರಾಜ್ಯದಲ್ಲಿರುವ ಪೋಲೀಸಿನವರು ಏನು ಮಾಡುತ್ತಿದ್ದಾರೆ ಎಂದರೆ ಅವರೇ ಪರ್ಮಿಟ್ ಕೊಡುತ್ತಿದ್ದಾರೆ. ಇಲ್ಲಿಗೆ 8-10 ಮೈಲಿ ದೂರದಲ್ಲಿ ಒಂದು ಪೋಲೀಸ್ ಸ್ಟೇಷನ್ ಇದೆ. ಅಲ್ಲಿಗೆ ಬನ್ನು ಹೋದ ಕೂಡಲೇ, ಅಲ್ಲಿರುವವರು ನಿನ್ನ ಪರ್ಮಿಟ್ ಬೇಕಾಗಿಲ್ಲ, ನನಗೆ ಕೊಡುವುದನ್ನು ಕೊಡು ಎಂದು ಕೇಳುತ್ತಾರೆ. ಪೋಲೀಸ್ ಪರ್ಮಿಟ್‌ಗಳನ್ನು ನಿಲ್ಲಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಂಡರೆ ರಾಜ್ಯ ಸರಿಗೆ ನಂಷ್ಟಕ್ಕೆ ಸ್ವಲ್ಪ ರಾಘವಾದರೂ ಬರುತ್ತದೆ. ಕಾಂಟ್ರಾಕ್ಟ್ ಬನ್ನುಗಳಿಗೆ ಪರ್ಮಿಟ್ ಕೊಡುತ್ತಿರುವ ವಿಚಾರದಲ್ಲಿ ಅನೇಕ ಸಣ್ಣ ಮಾತುಗಳನ್ನು ಜನ ಆಡುವುದನ್ನು ನಾವು ಕೇಳುತ್ತಿದ್ದೇವೆ, ಇಂಥದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಗೊಬ್ಬರದ ವಿಷಯ ಹೇಳುವುದಾದರೆ ಸಹಕಾರ ಸಂಘಗಳಲ್ಲಿ ಒಂದು ತಾಲ್ಲೂಕಿಗೆ ಒಂದು ಟನ್, ಅರ್ಧ ಟನ್ ಗೊಬ್ಬರ ಕೊಡುತ್ತಾರೆ. ಬೇರೆಯವರಲ್ಲಿ ಯಥೇಷ್ಟವಾಗಿ ಸಿಕ್ಕುತ್ತದೆ. ಸೊಸೈಟಿಗಳಲ್ಲಿ 50-52 ರೂಪಾಯಿಗಳಿಗೆ ಸಿಕ್ಕುವ ಗೊಬ್ಬರಕ್ಕೆ ಬೇರೆ ಕಡೆ 80-85 ರೂಪಾಯಿ ಕೊಟ್ಟರೆ ಸಿಕ್ಕುತ್ತದೆ. ಏಕೆ ಈ ಅನ್ಯಾಯ ಎಂದು ಕೇಳಬೇಕಾಗುತ್ತದೆ. ರೈತರಿಗೆ ಬೇಕಾಗಿರುವ ಪದಾರ್ಥಗಳ ಜೊತೆ ಇರಿರುವುದರ ಜೊತೆಗೆ ಗೊಬ್ಬರದ ಬೆಲೆಯೂ ಏರಿ, ಗೊಬ್ಬರ ಸಿಕ್ಕದೆ ಬಹಳ ತೊಂದರೆಯಾಗುತ್ತದೆ. ಇದು ಅಕ್ಷಮ್ಯ ಅಪರಾಧ ಎಂದು ಹೇಳುತ್ತೇನೆ.

ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ತೀವ್ರ ಅಭಾವವಿದೆ. ನಮ್ಮೆಲ್ಲರ ಅನುಕಂಪ ಆ ಜಿಲ್ಲೆಗಳ ಜನರ ಬಗ್ಗೆ ಇದೆ. ಇದೇ ರೀತಿಯ ಅಭಾವ ಪರಿಸ್ಥಿತಿ, ಅಷ್ಟೇ ದುರ್ಬಲವಾಗಿರತಕ್ಕ ಪರಿಸ್ಥಿತಿ ಕೋಲಾರ, ಬೆಂಗಳೂರು ಮತ್ತು ಇತರೇ ಜಿಲ್ಲೆಗಳಲ್ಲಿ ಇದೆ. ಕೋಲಾರ ಜಿಲ್ಲೆಯಲ್ಲಂತೂ ಕುಡಿಯುವ ನೀರಿಗೆ ತಾಪತ್ರಯವಿದೆ. ಬೇಸಿಗೆಯಲ್ಲಿ 80ಕ್ಕಿಂತ ಹೆಚ್ಚು ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಇದೆ. ಸರ್ಕಾರಕ್ಕೆ ಅನೇಕ ಸಂದರ್ಭಗಳಲ್ಲಿ ವಿನಂತಿ ಮಾಡಿದ್ದರೂ ಸಹ ಈ ಹೊತ್ತಿನವರೆಗೆ ಬಾವಿಗಳನ್ನು ಒದಗಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಕೂಡ ಸರ್ಕಾರ ಪ್ರಯತ್ನ ಮಾಡುತ್ತಿಲ್ಲ.

ಒಂದು ಮುಖ್ಯವಾದ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ ಕಳೆದ ಮಾರ್ಚ್ ತಿಂಗಳಿನಿಂದ ಇದುವರೆಗೂ ಒಂದು ಪಿ.ಡಬ್ಲ್ಯೂ.ಡಿ. ಎಸ್ಟಿಮೇಟ್ ಕೂಡ ಸ್ಯಾಂಕ್ಷನ್ ಆಗಿಲ್ಲ. ಇಷ್ಟು ಹೇಳಿ ಅಧ್ಯಕ್ಷರ ಅಪ್ಪಣೆ ಮೇರೆಗೆ ನಾನು ಬಲವಂತವಾಗಿ ಕುಳಿತುಕೊಳ್ಳುತ್ತೇನೆ.

† ಶ್ರೀ ಜಿ. ಪಿ. ನಂಜುಯ್ಯನಮಠ್ (ಗುಳೇದಗುಡ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಾನು ವೈಯಕ್ತಿಕವಾಗಿ ರಾಜ್ಯಪಾಲರ ಭಾಷಣದ ಬಗ್ಗೆ ಅವರನ್ನು ಅಭಿನಂದಿಸಿ ಮುಂದೆ ಅವರು ಮಾಡಿದಂತಹ ಭಾಷಣದ ಬಗ್ಗೆ ಕೆಲವೊಂದು ಮಾತುಗಳನ್ನು ಈ ಸಂದರ್ಭದಲ್ಲಿ ಆಡಲು ಇಚ್ಛಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ರಾಯಚೂರು, ಗುಲ್ಬರ್ಗ, ಜಿಲ್ಲೆಗಳಲ್ಲಿ ಭೀಕರವಾದ ಬರಗಾಲವನ್ನು ನಾವು ಅನುಭವಿಸುತ್ತಿದ್ದೇವೆ. ಸಾಕಷ್ಟು ಜನ, ದನಗಳು ಕಷ್ಟ ಪಡುತ್ತಿರುವ ಈ ಸಂದರ್ಭದಲ್ಲಿ ಎಷ್ಟೋ ಕೆಲಸಗಳನ್ನು ತೆಗೆದುಕೊಂಡಿದ್ದರೂ ಕೂಡ ಇನ್ನೂ ಕೆಲಸಗಳು ಸಾಕಷ್ಟು ಬೇಕು, ಅದು ತೀವ್ರಗತಿಯಲ್ಲಿ ಆಗಬೇಕು ಎನ್ನುವ ಅಭಿಪ್ರಾಯವನ್ನು ನಿಮ್ಮ ಮುಂದೆ ಇಡಬಯಸುತ್ತೇನೆ. ಎರಡನೆಯದಾಗಿ ನಮ್ಮ ಸರಕಾರ ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಾಗ ನನ್ನ ದೃಷ್ಟಿಯಲ್ಲಿ ಹೇಳಬೇಕು ಎಂದರೆ ಬರಗಾಲದ ಪರಿಸ್ಥಿತಿಯ ಅರಿವು ಸಂಪೂರ್ಣವಾಗಿ ನಮ್ಮ ಸರಕಾರಕ್ಕೆ ಆಗಿದೆ ಎಂದು ಹೇಳುತ್ತೇನೆ ಬರಗಾಲದ ಪರಿಸ್ಥಿತಿ ಮೇಲೆ ಸಂಪೂರ್ಣವಾದ ಹತೋಟಿ ನಮ್ಮ ಸರಕಾರಕ್ಕೆ ಬಂದಿದೆ 6 ತಿಂಗಳವರೆಗೆ ಎಷ್ಟೇ ಲಕ್ಷ ಗಟ್ಟಲೆ ಜನರು ಬಂದರೆ ಅವರಿಗೆಲ್ಲಾ ಕೆಲಸವನ್ನು ಒದಗಿಸಲು ಅಲ್ಲಲ್ಲಿ ಹಳ್ಳಿಗಳಲ್ಲಿ ನೀರಿನ ಅಭಾವ ಇದ್ದ ಕಡೆ ಬಾವಿಗಳನ್ನು ತೋಡಿಸುವುದು, ಪಂಪುಸೆಟ್ಟುಗಳನ್ನು ಹಾಕಿಸುವುದು, ಅಪ್ಪರ್ ಕೃಷ್ಣ, ಘಟಪ್ರಭಾ, ಕಾಲುವೆಗಳು ಮತ್ತು ಉಪಕಾಲುವೆಗಳನ್ನು ಮಾಡಿಸುತ್ತಿರುವ ಕೆಲಸಗಳನ್ನು ನೋಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಸರಕಾರಕ್ಕೆ ಬರಗಾಲದ ಸಂಪೂರ್ಣ ಅರಿವು ಆಗಿದೆ. ಈ ಸರಕಾರ ಜನತೆಯ ವಿಶ್ವಾಸವನ್ನು ತೆಗೆದುಕೊಂಡದ್ದರಿಂದ ಸರಕಾರ ಕೂಲಿ ಕೊಡುತ್ತಾರೆ, ಕೆಲಸ ಕೊಡುತ್ತಾರೆ, ಊಟ ಕೊಡುತ್ತಾರೆ, ನೀರು ಕೊಡುತ್ತಾರೆ ಎಂಬ ಭರವಸೆ ಜನತೆಗೆ ಈಗಾಗಲೇ ಅರಿವು ಆಗಲಕ್ಕೆ ಹತ್ತಿದೆ. ಇನ್ನು ಮೇಲೆ ಬರಗಾಲದ ಪರಿಸ್ಥಿತಿ ಇನ್ನೂ ಉಲ್ಬಣವಾಗುವ ಪರಿಸ್ಥಿತಿ ಇದೆ. ಪ್ರಸ್ತುತಮಾನಕ್ಕೆ ಸರಿಯಾಗಿ ಮಳೆ ಆದರೂ ಕೂಡ ಇನ್ನೂ ಆರು ತಿಂಗಳು ಈ ಬರಗಾಲದ ಜನತೆಗೆ ಸರಕಾರ ಸಹಾಯ ಮಾಡುತ್ತದೆಂದು ಆಶ್ವಾಸನೆಯನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದೆ. ಸರಕಾರಕ್ಕೆ ಬರಗಾಲದ ಅರಿವು ಇದೆ, ಸರಕಾರದಲ್ಲಿ ಶಕ್ತಿ ಇದೆ, ಹಣ ಇದೆ ಎಂಬ ಬದ್ಧತೆಯನ್ನು ಕೊಟ್ಟಿದ್ದಾರೆ. ಆದರಂತೆ ವಿಶೇಷ ಅಧಿಕಾರಿಗಳನ್ನು ನೇಮಿಸಿ ಅವರಿಗೆ ಅಧಿಕಾರ ಕೊಟ್ಟು ತಕ್ಷಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಆದೇಶಗಳನ್ನೂ ಕೂಡ ಸರಕಾರದವರು ಕೊಟ್ಟಿದ್ದಾರೆ. ಅಸೆಂಬ್ಲಿಯಲ್ಲಿ ನಿನ್ನೆ ಚರ್ಚೆ ನಡೆದಾಗ ಉಪನಾಯಕರು ಇನ್ನೂ 10 ಸಾವಿರ ಜನ ಬಂದರೂ ಅವರಿಗೆ ಕೆಲಸವನ್ನು ಒದಗಿಸುತ್ತೇವೆ, ನಿಮ್ಮ ಸಹಕಾರ ಸರಕಾರಕ್ಕೆ ಮಾನವೀಯತೆ ದೃಷ್ಟಿಯಿಂದ ಅತ್ಯಂತ ಅವಶ್ಯಕ ಇದೆ ಎಂದು ಹೇಳಿದ್ದಾರೆ. ಮಾನವೀಯತೆ ದೃಷ್ಟಿಯಿಂದ, ಬರಗಾಲದ ಪರಿಸ್ಥಿತಿಯ ಅರಿವು ಸರಕಾರಕ್ಕೆ ಇದೆ, ಅದರ ವಾಸ್ತವಿಕ ಚಿತ್ರಣ ಏನು ಎಂಬುದು ಸರಕಾರಕ್ಕೆ ಗೊತ್ತಾಗಿದೆ. ಕೇಂದ್ರ ಸರಕಾರದವರು ಬೇರೆ ಬೇರೆ ತಂಡಗಳನ್ನು ಕಳುಹಿಸಿ ಅಲ್ಲಿನ ಪರಿಸ್ಥಿತಿಯನ್ನು ಅರಿವು ಮಾಡಿಕೊಂಡು ಸಹಾಯ ಮಾಡುತ್ತೇವೆ ಎಂಬ ಸಂಪೂರ್ಣ ಭರವಸೆಯನ್ನು ಕೊಟ್ಟಿದ್ದಾರೆ. 150 ಕೋಟಿ ರೂಪಾಯಿಗಳ ಸಹಾಯವನ್ನು ನಮ್ಮ ಸರಕಾರ ಏನು ಕೇಳಿದೆ ಅದು ಸಿಕ್ಕುತ್ತದೆ ಎನ್ನುವ ಭರವಸೆಯನ್ನು ರಾಜ್ಯಪಾಲರ ಭಾಷಣದಲ್ಲಿ ನೀಡಿದ್ದಾರೆ. ಬರಗಾಲದ ಪ್ರದೇಶದಲ್ಲಿ ಅಡ್ಡಾಡಲು ಪ್ರತಿಯೊಂದು ಜಿಲ್ಲೆಯಲ್ಲೂ ಉತ್ತಮವಾದ ರಸ್ತೆಗಳಾಗಿವೆ. ಎಲ್ಲೆಲ್ಲಿ ಕೆರೆಗಳನ್ನು ಆಳಮಾಡಿಸಲಕ್ಕೆ ಸಾಧ್ಯ ಇದೆ ಅಲ್ಲಿ ಕೆರೆಗಳು ಆಗಲಕ್ಕೆ ಹತ್ತಿವೆ. ಪಂಪು ಸೆಟ್ಟುಗಳನ್ನು ಕೊಡುವ ಯೋಜನೆ ಆಗಿದೆ. ತಾಲ್ಲೂಕುಗಳಲ್ಲಿ ಹೊಸ ಭಾಷೆಗಳಾಗಿವೆ. ಎಲ್ಲ ಬಾವಿಗಳು ಆಳ ಇಲ್ಲದೆ ನೀರು ಇಲ್ಲವೋ ಅಂತಹ ಕಡೆಗಳಲ್ಲಿ ತಕ್ಷಣ ಹಣವನ್ನು ಮಂಜೂರು ಮಾಡಿರುವುದನ್ನು ನೋಡಿದರೆ ಬರಗಾಲದ ಪರಿಸ್ಥಿತಿ ಸರಕಾರಕ್ಕೆ ಅರಿವು ಆಗಿದೆ ಎಂಬುದು ಗೊತ್ತಾಗುತ್ತದೆ. ಬರಗಾಲ ನಿವಾರಣೆ ಆದ ನಂತರ ಬರಗಾಲಕ್ಕೆ ಒಳಗಾಗಿರುವ ನಮ್ಮ ಜಿಲ್ಲೆ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವುದರಿಂದ ನಮ್ಮ ಜಿಲ್ಲೆಯ ಒಂದು ಸಂಪೂರ್ಣ ಚಿತ್ರ ಬದಲಾವಣೆ ಆಗಬೇಕು ಎನ್ನುವ ಭರವಸೆ ಕಂಡುಬರಲಕ್ಕೆ ಹತ್ತಿದೆ. ರಸ್ತೆಗಳ ಕೆಲಸ, ಪಂಪುಗಳನ್ನು ಹಾಕುವುದು, ಕೃಷ್ಣ ಮೇಲ್ದಂಡೆ ಯೋಜನೆ. ಘಟಪ್ರಭಾ ಯೋಜನೆ ಇಂತಹ ಶಾಶ್ವತವಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಲ್ಲಿ ಬರಗಾಲದ ಬೇನೆಯನ್ನು ಮುಂದಿನ ತಲೆಮಾರಿನವರಿಗೆ ಆದಷ್ಟು ಕಡಿಮೆ ಆಗುತ್ತಾ ಹೋಗುತ್ತದೆ ಎನ್ನುವ ಭರವಸೆಯನ್ನು ಸರಕಾರ ಕೊಟ್ಟಿದೆ. ಈ 38 ತಾಲ್ಲೂಕುಗಳಲ್ಲಿರುವ ಬರಗಾಲವನ್ನು ನಿವಾರಿಸಲು ನಮ್ಮ ಸರಕಾರದವರು ಶಕ್ತಿಮೀರಿ ಕೆಲಸ ಮಾಡುತ್ತಿದ್ದಾರೆ. ಈ ವಿಶಿಷ್ಟ ವಿಚಾರವನ್ನು ಜನ ನಂಬಲಕ್ಕೆ

(ಶ್ರೀ ಜಿ. ಪಿ. ನಂಜಯ್ಯನವರು)

ಹತ್ತಿದ್ದಾರೆ. ಇದಕ್ಕಾಗಿ ರಾಜ್ಯಪಾಲರ ಭಾಷಣಕ್ಕೆ ಮತ್ತು ಸರಕಾರಕ್ಕೆ ನಾನು ಮತ್ತು ನಮ್ಮ ಬರಗಾಲದ ಪರಿಸ್ಥಿತಿಯನ್ನು ಅನುಭವಿಸುವವರು ಅಭಿನಂದನೆಗಳನ್ನು ಸಲ್ಲಿಸುವೆ ಗತ್ಯಂತರವಿಲ್ಲ ಎಂದು ಹೇಳುತ್ತೇನೆ. ಕಳೆದ 25 ವರ್ಷಗಳಿಂದ ಅಸೆಂಬ್ಲಿಯಲ್ಲಿ ನಾನು ಇರಲಿಲ್ಲ. ಕಳೆದ ಎಂಟು ತಿಂಗಳ ಹಿಂದೆ ಆರಿಸಿ ಬಂದಿದ್ದೇನೆ ಹಿಂದಿನ ಭಾಷಣವನ್ನು ನೋಡಿದಾಗ ನೇಕಾರರ ಬಗ್ಗೆ ಸಹಾನುಭೂತಿ ಇದೆ, ಸಹಾಯ ಮಾಡುತ್ತೇವೆ ಎಂಬ ಹಿಂದು ಶಬ್ದವೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಕಂಡುಬರಲಿಲ್ಲ. ಈ ಸರಕಾರ ಕೊಟ್ಟ ಹಾಗೆ ಹಿಂದೆ 2 ವರ್ಷಗಳಿಂದ ಇದ್ದ ಸರಕಾರ, ಯಾವ ಸರಕಾರವೇ ಆಗಲಿ ನೇಕಾರರ ಬಗ್ಗೆ ಇಷ್ಟೊಂದು ಮಹತ್ವವನ್ನು ಕೊಟ್ಟಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—I raise a point of order ಮಾನ್ಯ ಸದಸ್ಯರು ಮಾತನಾಡುತ್ತಾ ಇದ್ದಾಗ ಅವರು ಹೇಳಿರತಕ್ಕ ವಿಷಯಗಳನ್ನು ಬರೆದುಕೊಳ್ಳತಕ್ಕ ಯಾವ ಮಂತ್ರಿಗಳೂ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾ ಇಲ್ಲ.

Sri C. M. ARUMUGAM.—It is not a matter that should be so lightly terated. You have been saying there is no need for us to raise it on a Point of Order. You can see whether some of the Ministers of State, who are here, are attentive or not. Our objection is they are not taking any notes.

Mr. DUPUTY SPEAKER.—I very much appreciate the sentiments even prior to the hon. member Sri Kagodu Thimmappa had raised that point.

Sri C. M. ARUMUGAM.—We have got already 23 Ministers. If it is necessary, they can be increased by another 10 more so that they might be present in the House.

Sri H. N. NANJEGOWDA.—Does it constitute a Point of Order ?

Sri C. M. ARUMUGAM.—It is left to the Speaker to decide whether it is a point of Order or not. The Hon'ble Minister should know that much of parliamentary procedure not to interfere when a Point of Order is raised by a member.

ಶ್ರೀ ಹಬ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದಾಗ ಮಂತ್ರಿಗಳು ಇರತಕ್ಕದ್ದು ಅತ್ಯಾವಶ್ಯಕ. ಇದರಲ್ಲಿ ಕೆಲ ಮಂತ್ರಿಗಳು ಮೇಲಿನ ಮನೆಗೆ ಹೋಗಬೇಕಾಗುತ್ತದೆ. ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಶಾಸನ ಸಭೆಯಿಡೆಯುವಾಗ ಮಂತ್ರಿಗಳು ಪ್ರವಾಸ ಹೋಗುವುದನ್ನು ನಿಲ್ಲಿಸಬೇಕು. ನೊನ್ನೆ ದಿವಸ ಮಾನ್ಯ ಸಾರಿಗೆ ಮಂತ್ರಿಗಳಾದ ಶ್ರೀ ಅಜೀಜ್ ಸೇಟ್‌ರವರು ಮಂಗಳೂರಿಗೆ ಹೋಗಿದ್ದರು ಅಲ್ಲಿ ಅವರು ಸರಕಾರದ ಪಾಲಿಸಿ ಬಗ್ಗೆ ಕೂಡ ಅಲ್ಲಿ ಹೇಳಿದ್ದಾರೆ. ಅದೂ ಈ ಸಭೆಯ ಅಧಿವೇಶನ ನಡೆಯತಕ್ಕ ಕಾಲದಲ್ಲಿ ಇಂತಹ ವಿಚಾರಗಳನ್ನು ಅಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಹೀಗೆ ಶಾಸನ ಸಭೆಯ ಅಧಿವೇಶನದ ಕಾಲದಲ್ಲಿ ಮಂತ್ರಿಗಳು ಪ್ರವಾಸ ಹೋಗುವುದನ್ನು ನಾವು ಖಂಡಿಸಬೇಕಾಗುತ್ತದೆ. ಬಹಿಶಃ ನಮ್ಮನ್ನೆ ಟಿ. ಎ. ಹಾಗೂ ಡಿ. ಎ. ಗಾಗಿ ಪ್ರವಾಸ ಮಾಡಬೇಕೆಂದು ಮಾಡುವುದು ಸರಿಯಲ್ಲ. ಇವರ ಬಗ್ಗೆ ಒಂದು ವರ್ಷದಲ್ಲಿ ಎಷ್ಟು ಟಿ.ಎ. ಹಾಗೂ ಡಿ.ಎ. ಪಡೆದಿದ್ದಾರೆ ಎನ್ನುವ ಉತ್ತರವನ್ನು ಇಲ್ಲಿ ಕೊಟ್ಟಿದ್ದಾರೆ. ಮಂತ್ರಿಗಳು ಶಾಸನ ಸಭೆ ನಡೆಯುವ ಕಾಲದಲ್ಲಿ ಇಲ್ಲಿರಬೇಕಾದ್ದು ಅತ್ಯಾವಶ್ಯಕ ಇದರ ಬಗ್ಗೆ ತಾವು ಸರಿಯಾದ ನಿರ್ದೇಶನ ಕೊಡುವುದು ಅಗತ್ಯ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—The emphatic view is that during the discussion on the Governor's Address and the discussion on the

general Budget, where policy matters are discussed, Ministers must be present. That is because those are occasions when policy matters are discussed and merely relying upon notes will not be sufficient. The pathos, fervour and feelings expressed personally are points that deserve to be reckoned with. Ministers should be present in the House on such occasions unles it is made impossible for them to be away on account of Government of India business or to receive foreign dignitories, or are prevented from being present in the House. No work is more imporrant than this work because this House is sovereign. At the same time, I have said repeatedly that I respect the feelings and sentiments of Hon'ble Members. For the purpose of the proceedings and as laid down by the precedents, I am also helpless because for the purpose of somebody representing the Government, even one Minister of State is sufficient in the House. But that does not fully satisfy in the work of the democracy. That is my view. Even prior to raising the point, I sent a note to my Hon. friend Sri Mallappa. Now let us leave it at that. I, as a member of the Assembly in two States, know what the attendance was elsewhere on such occasions.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಂತ್ರಿಗಳ ಗೈರು ಹಾಜರಿ ಬಗ್ಗೆ ಈಗ ಒಂದು ಮುಖ್ಯವಾದ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಅದು ಇಲ್ಲಿರುವ ಕ್ಯಾಬಿನೆಟ್ ಮಂತ್ರಿಗಳಲ್ಲಿ ಕೆಲವರನ್ನು ಕಿತ್ತುಹಾಕುವ ಬಗ್ಗೆ ಒಂದು ರೀತಿಯಾದ ಗುಜುಗುಂಪಲು ಮಾಡಲು ಇಲ್ಲಿನ ಎಲ್ಲ ಮಂತ್ರಿಗಳೂ ಹೋಗಿದ್ದಾರೆಂದು ನನಗೆ ಗೊತ್ತಾಗಿದೆ. ಇದಕ್ಕಾಗಿ ಇಲ್ಲಿ ತಮ್ಮ ಗಮನ ಸೆಳೆಯುತ್ತಿದ್ದೇನೆ.

Mr. DEPUTY SPEAKER.—That is extraneous. I do not allow that.

ಶ್ರೀ ಜಿ. ಪಿ. ನಂಜಯ್ಯನವರ್.—ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಸುಮಾರು 36-37 ಕ್ಕೆಮಗ್ಗಗಳಿದ್ದವು. ಇವುಗಳಿಗೆ ಸಾಕಾದಷ್ಟು ನೂಲು ಸಿಗದಂತಹ ಸ್ಥಿತಿ ಬಂದಿತ್ತು. ಸರಕಾರ ಇಂತಹ ನೇಕಾರರಿಗೆ ಸಹಾಯ ಕೊಟ್ಟು ಅವರು ಉಳಿಯುವಂತೆ ಮಾಡಿರುವುದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿರುವುದು ತುಂಬಾ ಅಭಿಮಾನದ ಸಂಗತಿ. ಸರಕಾರ ನೇಕಾರರಿಗೆ ಬೇಕಾಗುವ ನೂಲನ್ನು ಅವರೇ ಒದಗಿಸಿ ಕೊಟ್ಟು ಅವರು ತಯಾರಿಸಿದ ಬಟ್ಟೆಗಳಿಗೆ ಸರಿಯಾದ ಬೆಲೆ ದೊರಕುವಂತೆ ಪ್ರಯತ್ನ ಮಾಡಿದ್ದಾರೆ. ನೂಲನ್ನು ಸಾಕಷ್ಟು ಸುಲಭ ಬೆಲೆಯಲ್ಲಿ ಸಿಗುವ ವ್ಯವಸ್ಥೆ ಮಾಡಿ ಇದಕ್ಕಾಗಿ ಸಹಾಯ ಮಾಡಿದ್ದಾರೆ. ಇವರಿಗೆಲ್ಲಾ ಸಾಕಷ್ಟು ಬಂಡವಾಳ ಸಿಗುವಂತೆ ಸಹಾಯ ಮಾಡಿರುವುದು ಬಹುಸ್ತುತ್ಯವಾದ ಕಾರ್ಯ. ಇಲ್ಲದಿದ್ದರೆ ನೇಕಾರರುಗಳು ಸಾಹುಕಾರರ ಕೈಗೆ ಸಿಕ್ಕಿ ನರಳುವ ಪ್ರಸಂಗ ಬರುತ್ತಿತ್ತು. ಇಂತಹ ನೇಕಾರರ ಬಗ್ಗೆ ರಾಜ್ಯಪಾಲರು ಅವರ ಭಾಷಣದಲ್ಲಿ ಸರಕಾರ ಸಾಕಷ್ಟು ನೆರವು ಕೊಡುತ್ತದೆ ಎಂದು ಹೇಳಿರುವುದು ಬಹಳ ಅಭಿಮಾನಪಡತಕ್ಕ ಸಂಗತಿಯಾಗಿದೆ. ನಿನ್ನೆ ನಮ್ಮ ಉದ್ಯಮ ಮಂತ್ರಿಗಳು ಇಲ್ಲಿ ಹೇಳುವಾಗ ನಮ್ಮಾರು 15 ರಿಲೀಫ್ ಸೆಂಟರುಗಳನ್ನು ತೆಗೆಯುತ್ತೇವೆ ಮತ್ತು ಇದಕ್ಕಾಗಿ ಸಾಲದ ರೂಪದಲ್ಲಿ ಸಹಾಯ ಮಾಡುವ ಬಗ್ಗೆ ಕೂಡ ಹೇಳಿದರು. ನಮ್ಮ ಬಿಜಾಪುರ ಜಿಲ್ಲೆಗೆ ಎರಡು ಸೆಂಟರುಗಳು ಎಂದರೆ ಬಿಜಾಪುರ ಹಾಗೂ ಗುಳೇದಗುಡ್ಡ ಇವುಗಳಿಗೆ ಕೊಟ್ಟಿರುವುದು ಸಾಲದು ಇನ್ನೂ ಎರಡು ಸೆಂಟರುಗಳನ್ನು ತೆಗೆಯುವುದು ಅವಶ್ಯವಾಗಿದೆ ಸರಕಾರ ಇದರ ಬಗ್ಗೆ ತೀವ್ರವಾಗಿ ವಿಚಾರ ಮಾಡಿ ನೂಕ್ಕ ಆರ್ಡರನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಸಾಕಷ್ಟು ಸಾಲವನ್ನು ಕೊಟ್ಟು ಸಹಾಯ ಮಾಡಬೇಕು. ಇದರಿಂದ ಬಡ ನೇಕಾರರ ಸ್ಥಿತಿ ಅನುಕೂಲವಾಗಿ ಅವರ ಬಡತನವನ್ನು ಹೋಗರಾಡಿಸಲು ಸಹಾಯವಾಗುತ್ತದೆ. ತಾತ್ಪರ್ಯಿಕವಾಗಿ ಈ ನಿರುದ್ಯೋಗಿ ಜನರಿಗೆ ಗಂಜೀ ಕೇಂದ್ರಗಳನ್ನು ತೆರೆಯಬೇಕು. ಏಕೆಂದರೆ ಅವರು ಬದುಕಬೇಕಾಗಿದೆ. ನೇಕಾರರ ಕಲೆ ಉಳಿಯಬೇಕಾಗಿದೆ. 3-4 ಲಕ್ಷ ಜನ ನೇಕಾರರು ಇಂದು

(ಶ್ರೀ ಜಿ. ಪಿ. ನಂಜಯ್ಯನ ಮಠ)

ಉದ್ಯೋಗ ಇಲ್ಲದೆ ಇದ್ದಾರೆ. ಇವರು ಉದ್ಯೋಗವನ್ನು ಶಾಶ್ವತವಾಗಿ ಮಾಡಿಕೊಂಡು ಹೋಗುವಂತಾಗಲು ಸರ್ಕಾರವು ಮುಂದಿನ ತನ್ನ ಬಜೆಟ್‌ನಲ್ಲಿ ಇದಕ್ಕಾಗಿ ಸೆಪರೇಟ್ ಡೈರೆಕ್ಟರೇಟನ್ನು ನಿರ್ಮಾಣ ಮಾಡಬೇಕು. ಮತ್ತು ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕು. ಈ ರೀತಿಯಿಂದ ಇವರ ಧಂದೆಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಇವರೂ ಸಹ ನಿರುದ್ಯೋಗಿಗಳಾಗುತ್ತಾರೆ. ಒಂದು ಹಳ್ಳಿಯಲ್ಲಿಯೇ 20 ಸಾವಿರ ನೇಕಾರರು ನಿರುದ್ಯೋಗಿಗಳಾಗಿದ್ದಾರೆ. ಈ ಕಾರಣದಿಂದ ಇವರ ಬಗ್ಗೆ ಸರ್ಕಾರದವರು ವಿಚಾರ ಮಾಡಿ, ಶಾಶ್ವತವಾಗಿ ಇವರು ನುಧಾರಿಸುವಂತಾಗಲು ಸಾಕಷ್ಟು ಪರಿಶ್ರಮ ತೆಗೆದುಕೊಳ್ಳಬೇಕೆಂದು ಈ ಒಂದು ರಾಜ್ಯಪಾಲರ ಭಾಷಣದ ನೆವದಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

4-30 P.M.

ಶ್ರೀ ಎಚ್. ಎಸ್. ಸಿದ್ದಪ್ಪ.—ಆ ನೇಕಾರದಿಂದ ಇಂದಿರಾಗಾಂಧಿ ಸೀರೆಯನ್ನು ನೇಯಿಸುತ್ತೀರಾ ?

Sri KAGODU THIMMAPPA.—Indira Sarees are being sold near Subhashnagar.

Mr. DEPUTY SPEAKER.—I have seen that shop. The name of that shop itself is Indra. There are so many shops and concerns by that name and a day may come when Sri Lingappa's name may also be incorporated in the name of some concern.

ಶ್ರೀ ಜಿ. ಪಿ. ನಂಜಯ್ಯನ ಮಠ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ನೀತಿಯನ್ನು ಈ ರಾಜ್ಯಪಾಲರ ಭಾಷಣದ ಮೂಲಕ ನಮ್ಮ ಮುಂದೆ ಇಟ್ಟಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಆಗುಹೋಗುಗಳು, ಮುಂದೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳ ವಿವರಗಳನ್ನು ತಿಳಿಸಿದ್ದಾರೆ. ಬರಗಾಲವನ್ನು ನಿವಾರಣೆ ಮಾಡುವ ಕಾರ್ಯಕ್ರಮಗಳನ್ನು ನಾವು ಈ ರಾಜ್ಯಪಾಲರ ಭಾಷಣದಿಂದ ಕಂಡುಕೊಳ್ಳುವ ಸಾಧ್ಯತೆ ಇದೆ. ರಾಜ್ಯಪಾಲರ ಭಾಷಣ ಅತ್ಯಂತ ವಸ್ತುಸ್ಥಿತಿಯಿಂದ ಕೂಡಿದೆ. ನೇಕಾರರು, ಬರಗಾಲದ ಜನರು, ಹಿಂದುಳಿದ ಜನರು, ಇವರೆಲ್ಲರ ಸಂಕಷ್ಟಗಳನ್ನು ನಿವಾರಣೆ ಮಾಡುವ ಬಗ್ಗೆಯೂ ಸಹ ಇವರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದಕ್ಕಾಗಿ ಸರ್ಕಾರದವರನ್ನು ವಂದಿಸುತ್ತೇನೆ.

ಕೊನೆಯದಾಗಿ ನಾನು ರಾಜ್ಯಪಾಲರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನಾನು ಮಾತನಾಡುವ ಕಾಲಕ್ಕೆ ಎಷ್ಟೋ ಜನರು ಅಡ್ಡ ಮಾತನಾಡಿದರೂ ಸಹ ನನಗೆ ಸಾಕಷ್ಟು ವೇಳೆಯನ್ನು ಕೊಟ್ಟಿದ್ದಕ್ಕೆ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† B. B. SAYANAK (Belgaum).—Mr. Deputy Speaker, Sir, the Governor's address is a stereotyped one ; it is a brief history of the work done by each department ; it is not a policy statement and I totaly oppose it and give my suggestions.

Every year we are reading in the Governor's address about drought conditions in Mysore State. Last year and in the year 1969 also there were paragraphs about it. India is a vast country with heavy rainfall in some places and no rainfall in other places. In Mysore State, the Bijapur and Gulbarga Districts and the Athani Taluka are always drought-affected areas. I am of the opinion that the Mysore State is far better off as compared to other States in India in the matter of food grains. We have travelled throughout India as members of the Public Undertakings Committee and we have seen drought-affected areas.

People may say that Sayanak is a Maharastrian. But what is there in Maharashtra ? Maharashtra is worst affected and every now and then my friends are saying that Maharashtra is getting more and more money from the Centre because Y. B. Chavan is there. I may tell my friends, "If you have some areas affected by drought and if you ask for more money from the Centre and if they give, I will be happy". But let them not be mean-minded and go on saying that Maharashtra is getting more money, and therefore we should also get more. That is not proper. I went to see the President along with the Public Undertakings Committee members and there also my friends were saying that when Maharashtra is getting too much money, why should we not get more ? I cannot understand this mentality. This mentality should be condemned. Maharashtra is also in India just as Mysore is and we must sympathise with whichever State is in difficulty.

Then, there is no mention about the Maharashtra-Mysore border dispute in the Governor's address. We are fighting for the last seventeen years.

Sri KOGADU THIMMAPPA.—We are opposing.

Sri B. B. SAYANAK.—We know it ; still we are fighting.

Sri KOGADU THIMMAPPA.—Still we are opposing.

Sri B. B. SAYANAK —My friend Sri Vatal Nagaraj had been to Belgaum and he has given a speech before 200 young boys.

Sri KONANDUR LINGAPPA.—He has addressed an audience of 15,000 people there and Sri Sayanak was not present then.

MR. DEPUTY SPEAKER.—Is this the way of democracy or parliamentary democracy ? The hon. Member Sri Sayanak has the right to express his views just as Sri Lingappa has. There is no use of creating confusion.

Sri B. B. SAYANAK.—As a member of this House I have every right to speak. The hon. Member Sri Vatal Nagaraj went to Belgaum in the month of October and gave a speech in the Lingaraj College ground before 200 boys and there was a big battalion of police. 1st November is your Rajyotsava day. But we are observing 1st November as black-day. On the Rajyotsava Day he gave call to the merchants and shop-keepers not to close the shops and he told them, "in case of necessity, call me and I will bring my battalion". Dont give us such threats. We know how to fight and how to protect our rights. On the 1st of November all the shops owned by both Kannadigas and Maharashtrians were closed. Cinema House were closed where was Vatal Nagaraj then ? The Mahajan Commission Report has been placed before the Parliament on 18th December 1970. We are requesting the Parliament that they must take a decision. We are in Mysore for the last 17 years. We have won election of Village Panchayats, Taluk Boards, Municipalities and even the general elections. In

(SRI B. B. SAYANAK)

the last election 5 candidates contested against me were these and I defeated the Congress Syndicate Candidate by more than 11000 votes, and the other three persons—one Jan Sangh, one Muslim League and one Swatantra, lost their deposits. Communist supported by Congress was also defeated. Belgaum Municipality is in the hands of Marathi people. When this is the position why are you not allowing us to join Maharashtra ? Is this a democracy ? If you have courage, if you are true democrat you must say that Belgaum should merge with Maharashtra. That must be your attitude. But it is not so. Whenever we are fighting, our friends criticise that we know Kannada. I do not know A-B-C of Kannada. When we are fighting the hon. Members from Socialist Party are talking. I know the Socialiat Party. Don't be rowdy here.

Sri KONANDUR LINGAPPA.—You don't talk like a rowdy here.

Mr. DEPUTY SPEAKER.—Nobody can be permitted to be rowdy here. The word rowdy is without context and it should not be repeated. Nobody can be rowdy here.

Sri H. N. NANJE GOWDA.—Let it be expunged. Can he address the member like that ?

Mr. DEPUTY SPEAKER.—It has the same impact.

Sri H. N. NANJE GOWDA.—It should not find a place in the records.

Mr. DEPUTY SPEAKER.—I have said that nobody can be a rowdy here.

Sri B. B. SAYANAK.—Is the word 'rowdy' unparliamantary ?

Mr. DEPUTY SPEAKER.—No, The hon. Member may continue his speech.

Sri B. B. SAYANAK.—I am of the opinion that we are first Indians and then Maharashtrians. It is not a dispute between Pakistan and Bharat, This is a dispute between two States in India. Let us have co-operation ; let us have goodwill and say good-bye to each other. When the Maharastrian people of the border area are fighting for the last 17 years and they have won every election I am of the opinion that this question must be solved on the basis of village as the unit, geographical contiguity, relative majority and wishes of the people of the border area.

Secondly about the policy of the Government regarding municipalities. I cannot understand the policy of the Government in this regard. The Government is conducting elections in Mangalore. In respect of several municipalities their term of office is extended while some are

superseded. It is not a correct policy. If the policy is to conduct elections, they must conduct elections throughout the State. The term of the Belgaum Municipality is due to expire on 28th February 1973. I am afraid the Government may give extension to that municipality on the basis that the municipality has passed a resolution that Belgaum City is affected by drought. I am sorry to say that it is not so. There is no dearth in Belgaum city or places around Belgaum. Only part of Belgaum Taluk is affected. I request the Government to have elections in Nipani and Belgaum. Why is it that the Government is not conducting elections ? It is because if they conduct elections, Marathi people will be in majority in Belgaum and Nipani.

Another point I wish to make is about law and order. I am sorry to state that there is panic in Belgaum. Young boys of 10 to 15 years are being abducted. Three boys were abducted from Belgaum and nobody has taken cognisance. The police are helpless. Another thing is, four agriculturists were carrying 43 bags from Khanapur to Belgaum. The police caught hold of them. They took them to custody and they were handcuffed and they were asking money. One Sri Ramachandra Amrut Patil has given Rs. 100 to the police. That person came and told me and I brought it to the notice of the Superintendent of Police. He told me that I should not bring it to the notice of the House. This is the fate of the agriculturists. We are talking too much about agriculturists but this is the fate of the agriculturists. The police are even blackmarketing the cinema tickets. At peerawadi in Belgaum Taluka one person by name Payappa Mallappa Patil died of heart attack. The Police said the wife of Payappa had poisoned him. They were asking from the wife of the deceased Rs. 1000. The person died of heart attack and from his wife they were asking Rs. 1,000. This is democracy ? Is this policeraj or democracy, I cannot understand.

Another thing is about the Employment Exchange. There is the District Employment Exchange Officer in Belgaum. Whenever Marathi people go there, he says that they have no job. If that is so, what is the use of Marathi people remaining in the State ? Are we not entitled to get job ? This is the fate of Marathi people in this State ? There is the Aluminium Factory in Belgaum. There are graduates in Arts, Science and Polytechnic diploma holders. But they do not get jobs. The jobs are given to those coming from Dharwar, Bijapur, and Gulbarga. One Marathi boy by name Vilasa Kadam was there. He was barber by caste. The Manager told him that after six months his services would be terminated. If this is the fate of Maharashtrians in this State, why should you say that we must stay in Mysore ?

Next I come to compulsory education. We are saying that there is compulsory education for children in the age group of 6—11 years. There are poor Harijan boys ; they do not get educational facilities. We are not giving facilities to the poor and downtrodden. About primary education I am sorry to state that in Belgaum there were

(SRI B. B. SAYANAK)

municipal school boards. Those Boards were constructing buildings and giving them to the schools. Now the schools are taken over by the Government and a number of Marathi schools have no buildings. We requested the Government to construct buildings but they are helpless. So, I wish to tell the Government that if they are not going to construct buildings for Marathi schools and if its policy is to curb the rights of the marathi children, better it is to close the Marathi schools and start Kannada schools.

Then with regard to High Schools, I am sorry, that in Yellur village the Government has given last year permission to run two High Schools for Girls and the population of that village is only about 10,000. I want to know where was the necessity to give permission to Yellur village for two schools ? This is highly objectionable.

Then Sir, the Governor has stated in his address that our Nation stands committed to socialism and secularism. I am sorry to say that the Governor himself has inaugurated recently one co-operative colony for the Sindhi community which is meant only for the Sindhi community people and none else. If this is secularism I can't understand what secularism is ? You must first follow secularism and then only preach secularism, to others.

With regard to the Garibi Hatao I would like to say that this is a slogan only to catch the votes of the people. What is going on in the market to-day ? There is Garibi Hatao or Garibi ko Hatao ? The prices of all essential commodities are increasing day by day. Can the poor people really survive; whether the poverty could be eradicated in in this way, I can't understand. I am of the opinion that this sort of a policy will not help the Government.

Then there are two Co-operative Banks in Belgaum, i.e., one Maratha Co-operative bank and the other Urban Co-operative Bank. The bye laws ofthose banks are that a person holding shares of thousand Ruppees is eligible to contest election for Directorship. They have passed the bye-law also. But according to me it is not correct as per the constitution. So I request the Hon. Minister to amend the bye law and give right to the poor people who have shares of Rs. 5 or 10 to contest election for Directorship. Then there is a co-operative society at Angol where a man who purchases 20 shares of Rs. 5 will be the shareholder. What is the purpose of the co-operative society? I can't understand. If these societies are meant for rich people only then it is alright. But if it is meant for one and all I request the Government and the Hon. Minister concerned to amend all the bye-laws and do justice to poor people.

With these words I thank the Chair and conclude my speech.

† ಶ್ರೀ ಡಿ. ಹಲಗೇ ಗೌಡ (ಪಾಂಡವಪುರ).—ನನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಈ ಸಭೆಯಲ್ಲಿ ಮಾಡಿದಂತಹ ಭಾಷಣಕ್ಕೆ ವಂದನೆಯನ್ನು ಅರ್ಪಿಸುತ್ತಾ ಕೆಲವು ಸಲಹೆಗಳನ್ನು ತಮ್ಮ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ರಾಜ್ಯಪಾಲರು ನಮ್ಮ ರಾಜ್ಯದಲ್ಲಿ ಈ ವರ್ಷ ಮಾಡಬಹುದಾದಂತಹ ಮತ್ತು ಮಾಡಿರತಕ್ಕ ಕಾರ್ಯಕ್ರಮಗಳ ಒಂದು ಪಕ್ಷಿನೋಟವನ್ನು ಇಲ್ಲಿ ಹೇಳಿದ್ದಾರೆ. ಇದನ್ನು ನೋಡಿದರೆ ನಮ್ಮ ನಾಡಿಗೆ ಅನಿರೀಕ್ಷಿತವಾದ ಕಷ್ಟ ಒದಗಿ ಬಂದು ನಮ್ಮ ಹಣಕಾಸಿನ ಪರಿಸ್ಥಿತಿ ಬುಡಮೇಲಾಗುವ ಪರಿಸ್ಥಿತಿ ಬಂದರೂ ಕೂಡ ನಾಡಿನ ಎಲ್ಲಾ ಜನರ ಮತ್ತು ಪಕ್ಷಗಳ ಸಹಕಾರದಿಂದ ಈಗ ಒದಗಿರುವ ಬರಗಾಲವನ್ನು ಧೈರ್ಯದಿಂದ ಎದುರಿಸಬೇಕೆಂದು ಹೇಳಿದ್ದಾರೆ. ಸರ್ಕಾರ ತನ್ನ ಕೈಲಾದಷ್ಟು ಮಾಡುತ್ತದೆ ಎಂಬ ವಿಷಯವನ್ನು ಕೂಡ ಹೇಳಿದ್ದಾರೆ. ಅವರು ಭಾಷಣದಲ್ಲಿ ಮೊದಲಿಂದ ಕೊನೆಯವರೆಗೂ ದೀನ ದಲಿತರ ಮತ್ತು ಬಡ ಬಗ್ಗರ ಕಷ್ಟ ಕಾರ್ಪಣ್ಯಗಳ ಬಗ್ಗೆ ಕೈಗೊಳ್ಳಬಹುದಾದ ಯೋಜನೆಯನ್ನು ಸೂಕ್ಷ್ಮವಾಗಿ ಹೇಳಿದ್ದಾರೆ ಇದಕ್ಕಾಗಿ ನಾವು ನಮ್ಮ ರಾಜ್ಯಪಾಲರನ್ನು ವಂದಿಸಬೇಕಾಗಿದೆ. ಇದು ಯಾವುದೋ ಸರ್ಕಾರದ ಸೆಕ್ರೆಟರಿಯಾಗಲಿ ಅಥವಾ ಅಧಿಕಾರಿಯಾಗಲಿ ಬರೆದು ಕೊಟ್ಟ ರಿಪೋರ್ಟು ಆಗಿರದೆ, ಕಾಯಾ ವಾಚಾ ಮನಸಾ ನಮ್ಮ ಸರ್ಕಾರದವರು ಹಾಗೂ ಮಂತ್ರಿಮಂಡಲದವರು ದೇಶದ ಅಭಿವೃದ್ಧಿಗೆ, ಮತ್ತು ನಾಡಿನ ಅಭಿವೃದ್ಧಿಗೋಸ್ಕರ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬ ವೇದ್ಯವಾಗತ್ತದೆ.ಮೊದಲನಿಂದ ಹಾಕಿಕೊಂಡ ಕಾರ್ಯಕ್ರಮಗಳನ್ನು ನೋಡಿದರೆ,ಈಗಿನಿಂದಲೇ ಅದು ಪ್ರಾರಂಭವಾಗುತ್ತಿದೆ ಎಂದು ಕಾಣುತ್ತದೆ. ಇವತ್ತು ಜನರಿಗೆ ಅಶನ, ಮತ್ತು ವಸತಿ ಸಾಕಷ್ಟು ಬೇಕಾಗಿದೆ. ಅದನ್ನು ಕೊಟ್ಟ ಮೇಲೆ ನಮ್ಮ ಕಾರ್ಯಕ್ರಮದಲ್ಲಿ ಅರ್ಧದಷ್ಟು ಸಾಧಿಸಿದ ಹಾಗೆ ಆಗುತ್ತದೆ. ಇದು ಸಂತೋಷದ ವಿಚಾರವೆಂದು ಕಾಣುತ್ತದೆ. ಬಹುಶಃ ಈಗ ಬಂದಿರತಕ್ಕಂತಹ ಕ್ಷಾಮದ ಪರಿಸ್ಥಿತಿಯನ್ನು ನೋಡಿದರೆ, ಯುದ್ಧ ಕಾಲದ ನೆನಪಾಗುತ್ತದೆ. ಯುದ್ಧಕಾಲದಲ್ಲಿ ಎಲ್ಲವನ್ನೂ ಒಬ್ಬನೇ ಸಾಧನೆ ಮಾಡುತ್ತೇನೆ ಎಂದು ಹೇಳಿದರೆ ಸಾಧ್ಯವಾಗಲಾರದು. ಆಗ ಎಲ್ಲಾ ಜನರ ಹಾಗೂ ಪಕ್ಷಗಳ ಸಹಾಯ ಮತ್ತು ಸಹಕಾರ ಬೇಕಾಗುತ್ತದೆ. ಆದ್ದರಿಂದ ರಾಜ್ಯಪಾಲರು, ತಮ್ಮ ಭಾಷಣದಲ್ಲಿ ಜನಸಾಮಾನ್ಯರ ಸಹಕಾರ ಮತ್ತು ಸರ್ವ ಪಕ್ಷಗಳ ಸಹಕಾರವನ್ನು ಈ ದಿನಯಲ್ಲಿ ಕೋರಿದ್ದಾರೆ. ಅದರಂತೆ ಈ ಬರಗಾಲವಾರಣೆಗೆ ನಮ್ಮ ಎಲ್ಲಾ ಜನರು ಮತ್ತು ಎಲ್ಲಾ ಪಕ್ಷದವರು ತಮ್ಮ ತಮ್ಮ ಕೈಲಾದಷ್ಟು ಸಹಕಾರ ಕೊಟ್ಟರೆ ನಮ್ಮ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಅದು ಇಲ್ಲದೆ ಕೋಟಿ ಗಟ್ಟಲೆ ಹಣವನ್ನು ಖರ್ಚು ಮಾಡಿದರೂ ಸಾಧ್ಯವಿಲ್ಲ. ಆದ್ದರಿಂದ ಜನತೆಯ ಸಹಕಾರ ದೊರೆಯದಿದ್ದರೆ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ವಿರೋಧ ಪಕ್ಷದ ಮಿತ್ರರಲ್ಲಿಯೂ ನಿವೇದಿಸಿ ಕೊಳ್ಳುವುದೇ ನೆಂದರೆ, ಎಲ್ಲೆಲ್ಲ ಬರಗಾಲ ಇದೆ, ಅಲ್ಲಿ ಯುವಕ ಸೈನಿಕರನ್ನು ತಯಾರು ಮಾಡಿ, ಅಲ್ಲಿಗೆ ಕಳಿಸಿ ಸರ್ಕಾರ ಮಾಡುತ್ತಿರುವ ಕೆಲಸ ಸರಿಯಾಗಿ ನಡೆಯುತ್ತಿದೆಯೇ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂಬುದನ್ನು ನೋಡಿ ಜನರಿಗೆ ಇದರಿಂದ ಸರಿಯಾದ ಅನುಕೂಲ ದೊರೆಯುತ್ತದೆಯೇ ಎಂಬುದನ್ನು ತಿಳಿದುಕೊಳ್ಳಬಹುದು. ಅದು ಬಿಟ್ಟು ಬರೇ ಅಧಿಕಾರಿಗಳ ಮುಖಾಂತರ ಹಣ ಖರ್ಚು ಮಾಡಿ ಜನರಿಗೆ ನೇರವಾಗಿ ಅದರ ಫಲಸಿಗುತ್ತದೆ ಎಂದು ಕೂತರೆ ಅದು ಸರಿಯಾಗುವುದಿಲ್ಲ, ಅಥವಾ ಅದರ ಬಗ್ಗೆ ನಾವು ಸತ್ಯಾಗ್ರಹ ಮಾಡುತ್ತೇವೆ, ಇಲ್ಲವೇ ಪ್ರತಿಭಟನೆ ಮಾಡುತ್ತೇವೆ ಎಂದು ಹೇಳುವುದೂ ಸರಿಯಾದ ಮಾತಲ್ಲ. ಅದರಿಂದ ಜನಸಾಮಾನ್ಯರಿಗೆ ಏನೂ ಪ್ರಯೋಜನ ಆಗುವುದಿಲ್ಲ. ಜನತೆಯ ಸಹಕಾರ ಇಲ್ಲದಿದ್ದರೆ, ಈ ಬರಗಾಲ ಸಮಸ್ಯೆಯನ್ನು ಹೋಗಲಾಡಿಸಿಲು ಪ್ರಾಮಾಣಿಕತನದಿಂದ ಪ್ರಯತ್ನ ಮಾಡಿದರೂ ಸಾಧ್ಯವಾಗದೆ, ಅಲ್ಲಲ್ಲಿ ತೊಂದರೆಗಳು ಬಂದೇ ಬರುವವು ಎಂದು ನಾನು ಭಾವಿಸುತ್ತೇನೆ.

5-00 P.M.

ನಾವು ಯೋಚಿಸದೇ ಇದ್ದಂಥ ತೊಂದರೆಗಳು ಮಧ್ಯಕಾಲದಲ್ಲಿ ಬರುತ್ತದೆ. ಆ ರೀತಿಯಾಗಿ ಬಂದರೆ ಅವನ್ನು ಯಾವರೀತಿ ಬಗೆಹರಿಸಬೇಕೆಂದು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಂದುವೇಳೆ ಆ ರೀತಿಯಾಗಿ ನಡೆಸುವುದಕ್ಕೆ ಆಗದಿದ್ದರೆ ತುರ್ತು ಕೆಲಸಗಳನ್ನು ಸೂಕ್ತ ಯೋಜನೆಗಳ ಪ್ರಕಾರ ನಡೆಸಬೇಕು. ಹಿಂದಿನ ಸರ್ಕಾರ 1964 ರಿಂದ 1970 ರವರೆಗೆ ಕ್ಷಾಮ ಪರಿಸ್ಥಿತಿ ಬಂದಾಗ ಏನೇನು ಕ್ರಮಗಳನ್ನು ತೆಗೆದುಕೊಳ್ಳದೆ ಅನೇಕ ಜನರು ಕ್ಷಾಮದ ದವಡೆಗೆ ಸಿಕ್ಕಿ ನರಳುವಂತೆ ಮಾಡಿದ್ದಾರೆ. ಹಳೆಯ ಮೈಸೂರಿನಲ್ಲಿ ಇದೇ ರೀತಿಯ ಕ್ಷಾಮ ಹಿಂದೆ ಬಂದಾಗ ಜನತೆ ಅನೇಕ ಕಷ್ಟವನ್ನು ಅನುಭವಿಸಿದ್ದಾರೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗಿನ ಸರ್ಕಾರ

(ಶ್ರೀ ಡಿ. ಹಲಗೇಗೌಡ)

ತೆಗೆದುಕೊಂಡ ಕ್ರಮಗಳನ್ನು ಆ ಸರ್ಕಾರ ತೆಗೆದುಕೊಂಡಿಲ್ಲವೆಂದು ನಾನು ಘಂಟಾಘೋಷವಾಗಿ ಪ್ರಾಮಾಣಿಕವಾಗಿ ಹೇಳುತ್ತೇನೆ. ನಾನು ಈ ಮಾತನ್ನು ಬೇರೆ ಪಕ್ಷಗಳನ್ನು ದೂಷಿಸುವ ದೃಷ್ಟಿಯಿಂದ ಇಲ್ಲಿ ಹೇಳುತ್ತಾ ಇಲ್ಲ. ಹಿಂದೆ ಅವರು ಖರ್ಚು ಮಾಡಿದಂತ ಹಣಕ್ಕಿಂತಲೂ 10—20 ಪಟ್ಟು ಹೆಚ್ಚು ಹಣ ಖರ್ಚುಮಾಡುತ್ತಿದ್ದಾರೆ. ಈಗಿನ ಪರಿಸ್ಥಿತಿಗೆ ಇವತ್ತು ಹೆಚ್ಚಿಗೆ ಖರ್ಚುಮಾಡುತ್ತಿದ್ದಾರೆ. ಅದು ಮಾಡಿಲ್ಲ, ಇದು ಮಾಡಿಲ್ಲ, ಎಂದು ಮಂತ್ರಿಗಳ ಮೇಲೆ ಹಾಗೂ ಅಧಿಕಾರಿಗಳ ಮೇಲೆ ದೂರು ಹೇಳುವುದರಲ್ಲಿ ನಮ್ಮ ಕಾರ್ಯ ಮುಗಿಯಿತು ಎಂದು ಆ ಕಡೆಯವರು ಹೇಳುವುದಾದರೆ ಅದು ಅಷ್ಟು ಸರಿಯಾದುದಲ್ಲ. ಆದ್ದರಿಂದ ಈ ಕಷ್ಟಗಳನ್ನು ನಿವಾರಣೆಮಾಡುವುದರಲ್ಲಿ ಕೊಟ್ಟಂಥ ಹಣ ಸರಿಯಾಗಿ ವಿನಿಯೋಗವಾಗುವುದರಲ್ಲಿ ಬಲಗೊಳಿಸಿ ಪ್ರತಿ ಯೊಬ್ಬರೂ ನಮ್ಮನಮ್ಮ ಪಾಲಿನ ಕೆಲಸವನ್ನು ನಾವು ಕೂಡಲೇ ಮಾಡಬೇಕು. ಇಲ್ಲದಿದ್ದರೆ ಯಾವ ಕೆಲಸಗಳೂ ತ್ವರಿತವಾಗಿ ಆಗುವದಿಲ್ಲ ವೆಂದು ನಾನು ಮಾನ್ಯ ಸದಸ್ಯರಲ್ಲಿ ನಿವೇದಿಸಿ ಕೊಳ್ಳುತ್ತೇನೆ. ಈಗ ಕೊಟ್ಟಿರುವ ಕಾರ್ಯಕ್ರಮದಂತೆ ನೀರಾವರಿ ಕಾಮಗಾರಿಗಳಿಗೆ ಹಾಗೂ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಕೊಡಲು ಸರ್ಕಾರದವರು ಈಗ ಯೋಚನೆ ಮಾಡಿದ್ದಾರೆ. ಇದು ಬರೀ ಅಷ್ಟಕ್ಕೇ ಸಾಲದು. ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನಕೊಡಬೇಕು. ಏತಕ್ಕೆಂದರೆ ನಮ್ಮ ಏರಿಯಾಗಳಲ್ಲಿ. ಕೇವಲ ದೊಡ್ಡ ದೊಡ್ಡ ಯೋಜನೆಗಳಿಂದ ಏನೂ ಅನುಕೂಲವಾಗುವುದಿಲ್ಲ. ಸಣ್ಣ ಸಣ್ಣ ನೀರಾವರಿ ಯೋಜನೆಗಳಿಂದ ಪ್ರತಿಯೊಂದು ಗ್ರಾಮಕ್ಕೂ ಹೆಚ್ಚಿನ ಉಪಕಾರವನ್ನು ಒದಗಿಸುವ ಅವಕಾಶ ಇದೆ. ಆದ್ದರಿಂದ ಅದರ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಏನಾದರೂ ಕೂಡ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಾಗಲೀ. ಸಣ್ಣ ನೀರಾವರಿ ಯೋಜನೆಗಳಾಗಲೀ ನೈಸರ್ಗಿಕ ಮೈಪರಿಸ್ಥಿತ್ಯಕ್ಕೆ ಒಳಪಟ್ಟರೆ, ಕೆಲವು ಕಾಲ ಮಳೆ ಬಾರದೆ ಇದ್ದರೂ ಸಣ್ಣ ನೀರಾವರಿ ಯೋಜನೆಗಳಿಂದ ತಕ್ಕಷ್ಟು ಕೊಳವೆ ಬಾವಿಗಳ ಮೂಲಕ ವ್ಯವಸಾಯಕ್ಕೆ ಅನುಕೂಲ ಮಾಡಿ ಕೊಟ್ಟರೆ, ಇದರಿಂದ ಎಷ್ಟೋ ಬರಗಾಲವನ್ನು ನಿವಾರಣೆಮಾಡಬಹುದು. ಇದರ ಬಗ್ಗೆ ನಮ್ಮಾರು 10-15 ವರ್ಷಗಳಿಂದಲೂ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ನಾವು ಈ ನಾಡಿನಲ್ಲಿ ಪ್ರತಿವರ್ಷವೂ ಕ್ಷಾಮ ಪರಿಸ್ಥಿತಿಯನ್ನು ನೋಡುತ್ತಲಿದ್ದೇವೆ. ಆದರೆ ವರ್ಷ ವರ್ಷವೂ ಇದರ ಬಗ್ಗೆ ಸೂಕ್ತ ಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿದ್ದರೆ, ನಾವು ಈಗ ಈ ಮಟ್ಟಕ್ಕೆ ಇಳಿದು ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಚಿಂತಿಸಬೇಕಾಗಿರಲಿಲ್ಲ. ಈ ವಿಚಾರದಲ್ಲಿ ನಾವು ಯಾರ ಮೇಲೂ ಕೂಡ ಧೂಷಣೆ ಮಾಡುವ ಮಾತಲ್ಲ. ಈಗ ನನ್ನ ಅನುಭವಕ್ಕೆ ಬಂದ ಮಾತುಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಇದರಲ್ಲಿ ಪ್ರತ್ಯೇಕತೆಗೆ 5 ಜಿಲ್ಲೆಗಳನ್ನು ಬಿಟ್ಟರೆ ಉಳಿದ ಜಿಲ್ಲೆಗಳಲ್ಲಿಯೂ ಕೂಡ ಈಗ ಕ್ಷಾಮದ ಪರಿಸ್ಥಿತಿ ತಲೆ ಹಾಕುತ್ತಾ ಇದೆ, ಮಾಂಡ್ಯ ಜಿಲ್ಲೆಯಲ್ಲಿ ಈಗ ಕ್ಷಾಮ ಇದೆ. ಕೇವಲ ಸೇಕಡ 40 ಭಾಗ ಮಾತ್ರ ನೀರಾವರಿ ಪ್ರದೇಶವಿದೆ, ಉಳಿದ ಸೇಕಡ 60 ಭಾಗ ನೀರಾವರಿ ಪ್ರದೇಶವಲ್ಲ, ನಾಗಮಂಗಲ ಕೃಷ್ಣರಾಜ ಪೇಟೆ, ಪಾಂಡವಪುರ ಕಡೆಗಳಲ್ಲಿ ಸೇಕಡ 80 ರಷ್ಟು ನೀರಾವರಿ ಪ್ರದೇಶವಿದೆ. ಮಳವಳ್ಳಿಯಲ್ಲಿ ಸೇಕಡ 50 ಭಾಗ ನೀರಾವರಿ ಪ್ರದೇಶವಿದೆ, ಮದ್ದೂರಿನಲ್ಲಿ ಸೇಕಡ 30 ಭಾಗ ನೀರಾವರಿ ಪ್ರದೇಶವಿದೆ, ಶ್ರೀರಂಗಪಟ್ಟಣದಲ್ಲಿ ಸೇಕಡ 25 ರಷ್ಟು ನೀರಾವರಿ ಪ್ರದೇಶವಿದೆ, ಅದರಲ್ಲಿ ಎಷ್ಟೋ ಭಾಗ ಖಾನಗೀ ಪ್ರದೇಶಕ್ಕೆ ಸೇರಿದೆ, ಇವತ್ತಿನ ದಿವಸ ಅನೇಕ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ಬಹಳವಾಗಿ ಕಷ್ಟ ಬಂದಿದೆ. ಇಷ್ಟಾದರೂ ಕೂಡ ಕಾಮಗಾರಿಗಳನ್ನು ಇನ್ನೂ ಸಾಕಷ್ಟು ತೆಗೆದು ಕೊಂಡಿಲ್ಲ, ಆದ್ದರಿಂದ ಈಗಲಾದರೂ ಕ್ಷಾಮದ ದವಡೆಯಲ್ಲಿ ಸಿಕ್ಕಿರುವಂತಹ ಪ್ರದೇಶಗಳಲ್ಲಿ ಕೂಡಲೇ ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ, ಕೋಟ್ಯಾಂತರ ರೂಪಾಯಿಗಳನ್ನು ಕ್ಷಾಮದ ಪ್ರದೇಶಗಳಲ್ಲಿ ಖರ್ಚುಮಾಡಬೇಕು, ಹೆಚ್ಚಿಗೆ ಎಲ್ಲ ಸಾಲಭ್ಯಗಳನ್ನೂ ಕಲ್ಪಿಸಿಕೊಡಬೇಕು, ಅವರಿಗೆ ಉಚಿತವಾಗಿ ವಸತಿ, ಅನ ಊಟದ ವ್ಯವಸ್ಥೆಗಳನ್ನು ಮಾಡಬೇಕು. ಅಭಾವ ಇಲ್ಲದೇ ಇರು ಪ್ರದೇಶಗಳಲ್ಲಿ ಅಷ್ಟು ಕ್ಷಾಮಬಾರದೇ ಇದ್ದರೂ ಕೂಡ ಸ್ವಲ್ಪ ಮಟ್ಟಿಗಾದರೂ ಅಲ್ಲಿನ ಜನರಿಗೆ ಬಡತನ ಇದ್ದೇ ಇರುತ್ತದೆ. ಆದಕ್ಕಾಗಿ ಅಲ್ಲಿನ ಬಡ ಜನರಿಗೆ ಸರಿಯಾಗಿ ಕೂಲಿ ಸಿಗುವ ವ್ಯವಸ್ಥೆಯನ್ನು ಮಾಡಬೇಕು. ಕ್ಷಾಮಕ್ಕೆ ತುತ್ತಾಗಿರುವ ಪ್ರದೇಶಗಳಲ್ಲಿ ಕ್ಷಾಮ ಪರಿಹಾರ ಕಾರ್ಯಗಳಿಗಾಗಿ 10 ಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ ಕ್ಷಾಮಕ್ಕೆ ತುತ್ತಾಗದೇ ಇರತಕ್ಕಂಥ ಪ್ರದೇಶ ಗಳಲ್ಲಿ ಇರತಕ್ಕ ಬಡತನವನ್ನು ಹೋಗಲಾಡಿಸುವ ದೃಷ್ಟಿಯಿಂದ ಕನಿಷ್ಟ ಪಕ್ಷ 2ಕೋಟಿ ರೂಪಾಯಿ ಗಳನ್ನಾದರೂ ಖರ್ಚುಮಾಡುವ ವ್ಯವಸ್ಥೆಮಾಡಬೇಕು.

ಅಧ್ಯಕ್ಷರೇ ಹಾಗೂ ನನ್ನ ಬಂಧುಗಳೇ, ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಬಜೆಟ್‌ನಲ್ಲಿ ಸುಮಾರು ಹೆಚ್ಚು ಪೊಬಲಗನ್ನು ವಿದ್ಯಾಭ್ಯಾಸಕ್ಕೋಸ್ಕರ ಖರ್ಚುಮಾಡಿದ್ದರೂ ನಮ್ಮ ಪಕ್ಕಳಿಗೆ ಸರಿಯಾದ ವಿದ್ಯಾಭ್ಯಾಸದ ಸೌಕರ್ಯ ಸಿಗುತ್ತಾ ಇಲ್ಲ. ಯಾರು ಶಾಲೆಗೆ, ಕಾಲೇಜಿಗೆ ಸೇರಬಯಸುತ್ತಾರೋ ಅಂತಹವರಿಗೆ ಸ್ಥಳಾವಕಾಶವನ್ನು ಒದಗಿಸಿಕೊಡಬೇಕೆಂಬ ಪರಿಸ್ಥಿತಿ ಈಗ ಇಲ್ಲ. ಅನೇಕ ಮಕ್ಕಳು ಶಾಲಾ ಕಾಲೇಜುಗಳಿಗೆ ಪ್ರವೇಶಿಸಲು ಸೀಟು ದೊರೆಯದೆ ನಿರಾಶರಾಯಕರಾಗಿದ್ದಾರೆ. ಶೇಕಡ 30 ರಷ್ಟು ವಿದ್ಯಾವಂತರು ಆಗಿರತಕ್ಕ ಪರಿಸ್ಥಿತಿಯಲ್ಲಿ ಈಗ ಇನ್ನೂ ಸ್ಥಳಾವಕಾಶ ಸಾಕಷ್ಟು ಒದಗಿಸಿದರೆ ಶೇಕಡ 70 ಅಥವಾ 80ರಷ್ಟು ಜನರನ್ನು ನಮ್ಮ ದೇಶದಲ್ಲಿ ವಿದ್ಯಾವಂತರನ್ನಾಗಿ ಮಾಡುವ ಗುರಿಯನ್ನು ಮುಟ್ಟುವುದು ಹೇಗೆ ಎಂಬ ವಿಚಾರ ಈಗ ಬರುತ್ತಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭ ಮಾಡಿರತಕ್ಕ ಕಾಲೇಜುಗಳಲ್ಲಿ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಕೂಡಲಿಕ್ಕೆ ಜಾಗ ಇರುವುದಿಲ್ಲ. ಆದ್ದರಿಂದ ಮೊಟ್ಟ ಮೊಡಲನೆಯದಾಗಿ ವಸತಿ ವ್ಯವಸ್ಥೆಯನ್ನು ಮಾಡಬೇಕು. ದೊಡ್ಡ ದೊಡ್ಡ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಆಗದೇ ಇದ್ದರೂ ಸಣ್ಣ ಗುಡಿಸಲಿಂಥಹ ಕಟ್ಟಡಗಳನ್ನು ಕಟ್ಟಿ ಮಕ್ಕಳು ಹೊಕ್ಕವಾದ ರೀತಿಯಲ್ಲಿ ತಂತಮ್ಮ ವಿದ್ಯಾಭ್ಯಾಸವನ್ನು ಮುಂದು ವರಿಸುವಂಥೆ ವ್ಯವಸ್ಥೆಮಾಡಬೇಕು. ಅನೇಕ ಶಾಲಾ ಕಾಲೇಜುಗಳಲ್ಲಿ ಸರಿಯಾದ ಅಧ್ಯಾಪಕರು ಇರುವುದಿಲ್ಲ. ಕನ್ನಡ ನಾಡಿನಲ್ಲಿ ಕನ್ನಡವನ್ನು ಬೋಧಿಸತಕ್ಕ ಉಪಾಧ್ಯಾಯರುಗಳು ಸಹ ಇರುವುದಿಲ್ಲ. ಕನ್ನಡ ಭಾಷೆಯನ್ನು ತಿಳಿಯದೆ ಬೇರೆ ಯಾವುದೋ ಒಂದು ಭಾಷೆ ತಿಳಿದುಕೊಂಡು ಪಾಠ ಹೇಳುವ ಪರಿಸ್ಥಿತಿ ಈಗ ಬಂದಿದೆ. ಈಗ ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಶಾಲೆಗಳನ್ನು ಸರ್ಕಾರ ವಹಿಸಿಕೊಂಡಿರುವುದು ನಿಜ. ಆದರೆ ಅವುಗಳ ಸ್ಥಿತಿ ತ್ರಿಶಂಕು ಸ್ವರ್ಗದಂತಾಗಿದೆ. ಸರ್ಕಾರದ ಶಾಲೆಗಳ ಸ್ಥಿತಿಯಂತೂ ಹೇಳುವ ಹಾಗೆ ಇಲ್ಲ. ಅದರಂತೆ ಸ್ಥಳೀಯ ಸಂಸ್ಥೆಗಳ ಶಾಲೆಯ ಪರಿಸ್ಥಿತಿಯೂ ಅಷ್ಟೇ. ಪಟ್ಟಣಗಳಲ್ಲಿರತಕ್ಕ ಶಾಲೆಗಳ ಪರಿಸ್ಥಿತಿ ಹೀಗೆ ಇರುವಾಗ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳ ಪರಿಸ್ಥಿತಿಯನ್ನು ಹೇಳುವ ಹಾಗೆ ಇಲ್ಲ. ಶಾಲಾ ಕಟ್ಟಡಗಳ ರಿಪೇರಿ ಕೆಲಸ ಕೂಡ ಇನ್ನೂ ಆಗಿಲ್ಲ. ಅನೇಕ ಶಾಲೆಗಳಿಗೆ ಇನ್ನೂ ಸುಣ್ಣಬಣ್ಣ ಆಗಿಲ್ಲ. ಸರಿಯಾದ ಸೌಲಭ್ಯಗಳೂ ಸಹ ಅಲ್ಲಿರತಕ್ಕವರಿಗೆ ಒದಗುತ್ತಾ ಇಲ್ಲ. ಆದ್ದರಿಂದ ಆ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಸರ್ಕಾರದ ಶಾಲೆಗಳಿಗೆ ಕೊಡುತ್ತಿರುವ ಸವಲತ್ತುಗಳನ್ನು ಸ್ಥಳೀಯ ಸಂಸ್ಥೆಗಳ ಶಾಲೆಗಳಿಗೂ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಭಿನ್ನೈಸಿಕೊಳ್ಳುತ್ತೇನೆ.

ಕೊನೆಯದಾಗಿ ಹೇಳುವುದಾದರೆ, ನಮ್ಮ ಈ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗಿ ನಡೆಯಬೇಕಾದರೆ, ನಮ್ಮ ಮಾನ್ಯ ಮಿತ್ರರೆಲ್ಲರ ಸಹಕಾರ ಕೋರುತ್ತೇನೆ. ನಮ್ಮ ದೇಶದಲ್ಲಿ ಈಗ ಅರಿಕ್ಷೆಯವಾಗಿ ಬಂದಿರತಕ್ಕ ಗಂಡಾಂತರ ಹಾಗೂ ಬರಗಾಲವು ಮಾಯವಾಗಬೇಕಾದರೆ ರಾಜ್ಯ ಪಾಲರು ಸೂಚಿಸಿರುವಂತೆ ತಕ್ಕ ಕ್ರಮಗಳನ್ನು ಸರ್ಕಾರದವರು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಆಲ್ಲದೆ ಇಲ್ಲಿ ಅದನ್ನು ಮಾಡಿಲ್ಲ, ಇದನ್ನು ಮಾಡಲಿಲ್ಲವೆಂದು ಸುಮ್ಮನೆ ಸರ್ಕಾರವನ್ನು ಟೀಕೆಮಾಡುವಂಥ ವಿವಾದವನ್ನು ಬಿಟ್ಟು ಎಲ್ಲರೂ ಈ ನಾಡಿನ ಹಿತಚಿಂತನೆಯನ್ನು ಗಮನದಲ್ಲಿಟ್ಟುಕೊಂಡು ಈ ದೇಶದ ಏಳಿಗೆಗಾಗಿ ಇಡೀ ಜನತೆಯ ಒಳಿತಿಗಾಗಿ ಆಡಳಿತ ಪಕ್ಷದವರ ಜೊತೆಯಲ್ಲಿ ವಿರೋಧಪಕ್ಷದವರೆಲ್ಲರೂ ಸಹಾಯ ಮತ್ತು ಸಹಕಾರ ಕೊಟ್ಟರೆ ಬಹಳ ಒಳ್ಳೆಯದು. ಅಂತಹ ಒಂದು ಕೆಲಸವನ್ನು ಸಾಧನೆ ಮಾಡುವುದಕ್ಕೆ ಸರ್ಕಾರದವರು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುವಂತಹ ಕೆಲಸವನ್ನು ನಾನು ತಮ್ಮಿಂದ ಅಪೇಕ್ಷಿಸುತ್ತೇನೆ. ಇಷ್ಟು ಹೊತ್ತು ನಾನು ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ:

ಶ್ರೀ ಚೌಡ ರೆಡ್ಡಿ (ಚಿಂತಾಮಣಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ವಂದಿಸಲು ಈ ಸಭೆಯಲ್ಲಿ ಮಂಡಿಸಿರುವ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಈ ಸಮಯದಲ್ಲಿ ಕೆಲವು ಅಂಶಗಳನ್ನು ಹಾಗೂ ಕೆಲವು ಸಲಹೆಗಳನ್ನು ಈ ಸದನದಲ್ಲಿ ಇಡಲು ಇಚ್ಛಿಸುತ್ತೇನೆ. ಈಗಾಗಲೇ ಎರಡು ದಿನಗಳಿಂದಲೂ ಅನೇಕ ಸದಸ್ಯರು ಭಾಷಣಗಳನ್ನು ಮಾಡಿದ್ದಾರೆ. ಆಡಳಿತ ಪಕ್ಷದವರು ಈಗಾಗಲೇ ಬಹಳಮಟ್ಟಿಗೆ ಬರಗಾಲ ವಿಷಯದಲ್ಲಿ ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ. ಇದರಿಂದ ಬರಗಾಲದ ಜನತೆಗೆ ಬಹಳಮಟ್ಟಿಗೆ ಉತ್ತೇಜನ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ವಿರೋಧ ಪಕ್ಷ ಮತ್ತು ಆಡಳಿತ, ಮಧ್ಯದಲ್ಲಿರತಕ್ಕ ನಮ್ಮಂಥವರು, ವಿರೋಧ

(ಶ್ರೀ ಚೌಡರೆಡ್ಡಿ)

ಪಕ್ಷದವರು ನಿರಾಸೆಯಿಂದ ಮಾತನಾಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಆದರಲ್ಲಿ ಸ್ವಲ್ಪ ಮಟ್ಟಿಗೆ ನಿಜವಿದೆ. ಬಂಕಿಯಿಲ್ಲದೆ ಹೊಗೆ ಬರುವುದಿಲ್ಲ—ಎಂಬುದನ್ನು ಹೇಳಬಯಸುತ್ತೇನೆ. ಆಡಳಿತ ಪಕ್ಷದವರು ಹಾಕಿಕೊಂಡಿರತಕ್ಕ ಅನೇಕ ಯೋಜನೆಗಳಿವೆ. ಬರಗಾಲ ಪ್ರದೇಶಕ್ಕೆ ಅನುಗುಣವಾಗತಕ್ಕ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಿರುವುದೂ ನಿಜ. ಆದರೆ ಆಗಿರತಕ್ಕ ಕಾರ್ಯಗಳಲ್ಲಿ ಅನೇಕ ನ್ಯೂನತೆಗಳನ್ನು ನಾವು ಕಾಣುತ್ತೀದ್ದೇವೆ. ಹಿಂದಿನ ಬ್ರಿಟಿಷರ ಸರ್ಕಾರಕ್ಕೂ ಮತ್ತು ಈಗಿನ ಸರ್ಕಾರಕ್ಕೂ ಹೋಲಿಕೆಮಾಡಿ ನೋಡಿದರೆ ಜನಸಾಮಾನ್ಯರಿಗೆ ಇಂದು ಶಾಂತಿ ಕಂಡುಬರುತ್ತಿಲ್ಲ. ತಾಲ್ಲೂಕ್ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದ ಎಲ್ಲಾ ಕಛೇರಿಗಳಲ್ಲೂ ಅಧಿಕಾರಿಗಳು ಜನರಿಗೆ ಬಹಳ ಕಿರುಕುಳವನ್ನು ಕೊಡುತ್ತಿದ್ದಾರೆ. ಈ ವಿಚಾರ ನಮ್ಮೆಲ್ಲಿ ಎಲ್ಲರಿಗೂ ಗೊತ್ತಿದೆ. ಗ್ರಾಮಗಳಲ್ಲಿರತಕ್ಕ ಅಕೌಂಟೆಂಟ್ ಮೊದಲುಗೊಂಡು ಎಲ್ಲರೂ ಜನರಿಗೆ ಕಿರುಕುಳ ಕೊಡತಕ್ಕವರೇ ಆಗಿದ್ದಾರೆ. ಈ ದಿವಸ ನಾವು ತಾಲ್ಲೂಕ್ ಕಛೇರಿಗೆ ಹೋದರೆ ಅಲ್ಲಿ ಯಾವ ಒಂದು ಕೆಲಸವಾಗಬೇಕಾಗಿದ್ದರೂ ಅವರು ಪೇಪರಿಗೆಷ್ಟು ಕೊಡಕ ಇದೆಯೇ ಎಂದು ನೋಡುವುದಕ್ಕೆ ಪ್ರಾರಂಭಮಾಡಿದ್ದಾರೆ. ನಾನು ಕಂಡಮಟ್ಟಿಗೆ ಹೇಳುವುದಾದರೆ ಈಗ ಸರ್ಕಾರದವರು ಓಲ್ಡೇಜ್ ಪೆನ್‌ಷನ್‌ಕೊಡುವುದಕ್ಕೆ ಒಂದು ಸುಗಮ ದಾರಿಯನ್ನು ಮಾಡಿದ್ದಾರೆ. ತಾಲ್ಲೂಕ್ ಮಟ್ಟದಲ್ಲಿರತಕ್ಕ ಪೆನಷನ್‌ದಾರರ ಸಂಖ್ಯೆಯೇ ಬಹಳ ಕಡಿಮೆ. ಅದರೂ ಅಲ್ಲಿಯೂ ಪೆನ್‌ಷನ್ ತಲುಪಿಸುವುದರಲ್ಲಿ ಒಂದೆರಡು ತಿಂಗಳ ನಿಧಾನವಾಗುತ್ತಿದೆ. ಸರ್ಕಾರದವರು ಇದನ್ನು ಸರಿಪಡಿಸಬೇಕು.

ಇನ್ನು ಲ್ಯಾಂಡ್‌ಗ್ರಾಂಟ್ ವಿಚಾರಕ್ಕೆ ಬಂದರೆ—ಈ ಕಮಿಟಿಯಲ್ಲಿ ನಾನೂ ಕೂಡ ಹೆನರಿಗಾಗಿ ಒಬ್ಬ ಸದಸ್ಯನಾಗಿದ್ದೇನೆ. ಈ ಕಮಿಟಿಗಳೆಲ್ಲಾ ಬಹಳಮಟ್ಟಿಗೆ ಆಡಳಿತ ಪಕ್ಷದವರಿಗೇ ಸಿಮೀತವಾಗಿವೆ. ಅಲ್ಲಿ ನಡೆಯತಕ್ಕ ತೀರ್ಮಾನಗಳೇನಿದ್ದರೂ ಈ ಆಡಳಿತ ಪಕ್ಷಕ್ಕೆ ಮಾತ್ರ ಅನುಕೂಲವಾಗತಕ್ಕ ರೀತಿಯಲ್ಲಿ ಅವರ ಪಕ್ಷದ ಸದಸ್ಯರನ್ನೇ ಮೆಜಾರ್ಟಿಯಲ್ಲಿ ಹಾಕಿಕೊಂಡಿದ್ದಾರೆ. ಬಡರೈತರಿಗೆ ಜಮೀನನ್ನು ಹಂಚುವುದಕ್ಕೆ ಹೊರಟು—ಎಲ್ಲೆಲ್ಲಿ ಎಷ್ಟೆಷ್ಟು ಜಮೀನಿದೆ ಅದನ್ನು ಕರಿತುಕೊಂಡು ಆದರಲ್ಲಿ ಎಷ್ಟು ಭೂಮಿಯನ್ನು ರಿಜರ್ವ್ ಇಡಬೇಕಾಗುತ್ತದೆಂಬುದನ್ನು ನೋಡಿ ಆನಂತರ ಎಷ್ಟು ಅರ್ಜಿಗಳು ಬಂದಿರುತ್ತವೆಂಬುದನ್ನು ವಿಚಾರಿಸಿ ನಂತರ ನಮ್ಮ ಕಮಿಟಿಯಲ್ಲಿ ಅವುಗಳ ತೀರ್ಮಾನ ಮಾಡೋಣ ಎಂದರೆ ನನ್ನಮಾತನ್ನು ಅಲ್ಲಿ ಕೇಳತಕ್ಕವರೇ ಇಲ್ಲ. ಅವರಿಗೆ ಹೇಗೆ ಅನುಕೂಲ ಕಾಣುತ್ತದೋ ಹಾಗೆ ವಿಲೇವಾರಿ ಮಾಡುತ್ತಿದ್ದಾರೆ. ಅದನ್ನು ನೋಡಿ ಇಂಥ ಕಮಿಟಿಯಲ್ಲಿ ಸದಸ್ಯನಾಗಿರುವುದಕ್ಕಿಂತ ಇಲ್ಲದಿರುವುದೇ ಲೇಸೆಂದು ನನಗೆ ಅನೇಕ ಬಾರಿ ಅನ್ನಿಸಿದೆ. ಸಾಮಾನ್ಯವಾಗಿ ದೊಡ್ಡ ಅಧಿಕಾರಿಗಳು ಇಷ್ಟಯ ತನಕ ಹಣದ ಪ್ರಭಾವಕ್ಕೆ ಹಾಗೂ ಧನಿಕರ ಪ್ರಭಾವಕ್ಕೆ ಒಳಗಾಗಿ ಭೂಮಿಯನ್ನು ವಿಲೇವಾರಿ ಮಾಡಿದ್ದಾರೆ. ರಾಜಪಾಲರ ಕಾಲದಲ್ಲಿ ಕೂಡ ಹಾಗೆ ಆಗಿದೆ. ಇನ್ನು ಭಾಷಾ ವಿಚಾರವಾಗಿ ಪ್ರಸ್ತಾಪ ಮಾಡುತ್ತಾ ಜಿಲ್ಲಾ ಮಟ್ಟದಲ್ಲಿಯೂ ಮತ್ತು ಸಬ್‌ಡಿವಿನ್ ಮಟ್ಟದಲ್ಲಿಯೂ ಕನ್ನಡ ಭಾಷೆಗೆ ಪ್ರಾಧಾನ್ಯತೆ ಕೊಟ್ಟು ಅದನ್ನು ಅಫಿಷಿಯಲ್ ಲಾಂಗ್ವೇಜ್ ಮಾಡಬೇಕೆಂದು ಹೇಳಿದ್ದಾರೆ. ಇದು ಬಹಳ ಸಂತೋಷಕರವಾದ ಸುದ್ದಿ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಇದೇ ಸಂದರ್ಭದಲ್ಲಿ ಕನ್ನಡ ಮತ್ತು ತೆಲುಗು ಲಿಪಿಗೂ—ಮತ್ತು ಭಾಷೆಯಲ್ಲಿಯೂ ಬಹಳ ಸಾಮ್ಯ ಇರುವುದರಿಂದ ಇವೆರಡಕ್ಕೂ ಒಂದು ಕಾಮನ್ ಸ್ಕ್ರಿಪ್ಟ್ ಇರಬೇಕಾದ್ದು ಅಗತ್ಯ ಎಂದು ಹೇಳುತ್ತಾ ಈ ವಿಚಾರದಲ್ಲಿ ಪ್ರೊಫೆಸರ್ ನುಬ್ಬರಾಯಪ್ಪ ಎನ್ನತಕ್ಕವರು ಕೊಟ್ಟಿರತಕ್ಕಕೆಲವು ಅಂಕಿ ಅಂಶಗಳನ್ನು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ:—

"A common script for Telugu and Kannada Languges was first mooted by Acharya Vinoba Bhave when he toured Andhra and Mysore States years back. He learnt these two language-alphabets himself before suggesting a common script for Telugu and Kannada since he found very close similarities in these two scripts.....

The Telugu Script Reform Committee constituted by the Government of Andhra Pradesh have agreed to have a common script for Kannada and Telugu. The Andrah Pradesh Government agreeing to the proposal, sent their suggestion to the

Mysore Government for their opinion and the Mysore Government agreed to this proposal in principle. The former Chief Ministers of Andhra Pradesh, Sriyuths Nilam Sanjeeva Reddi, D. Sanjeevaian and Kaasu Brambananda Reddi and the Former Chief Ministers of Mysore Sriyuths K. Hanumanthiah, B.D. Jatti and Veerendra Patil have welcomed this proposal.....

The Kannada Sahithya Sammelana held at Bellary on 20th January 1958 passed a resolution favouring the common script for these two languages, Sri D. R. Bendre, the renowned poet and scholar, moved this proposal at this Conference.....

A common script for Telugu and Kannada besides promoting emotional intergraion, will afford economy in the manufactur of a common typewriter, linotype, printing types, cheap printing and publication in both Telugu and Kannada languages at competitive rates

The Andhra Pradesh Government are earnest and eager to reform their script. The Ex-Chief Minister of A. P., P. V. Narasimha Rao, has a desire to have a common script for Kannada and Telugu languages, provided the Mysore Government also comes forword to implement it. The President of the Kannda Sahithya Parishad with whom Sri Narasimha Rao had dissicussions while he was the Education Minister of A. P. told Sri Narasimha Rao that though he was agreeable to this proposal the popular Government had to take a decision in the matter."

ಇನ್ನು ಶಿಲ್ಕ್ ಇಂಡಸ್ಟ್ರಿ ವಿಚಾರಕ್ಕೆ ಬಂದರೆ ನಾನು ಅನೇಕ ವಿಷಯಗಳನ್ನು ಕಳೆದ ಬಜೆಟ್ ಅಧಿವೇಶನದಲ್ಲೂ ಹೇಳಿದ್ದೆ. ಅದರ ಪ್ರಕಾರ ಸರಕಾರ ಈಗ 80 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆಯೆಂದು ಇಲ್ಲಿ ಹೇಳಿದ್ದಾರೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಇದು ಬಹಳ ಪ್ರಸಿದ್ಧಿಯಾದ ಒಂದು ಇಂಡಸ್ಟ್ರಿಯಾಗಿದೆ. ನಾವು ಗ್ರಾಮಾಂತರಗಳಲ್ಲಿ ಸುತ್ತಾಡುತ್ತಿರುವಾಗ ಎಲ್ಲಿಯಾದರೂ ಒಂದು ಹಳ್ಳಿಯಲ್ಲಿ ಒಂದು ಮನೆಯನ್ನು ನೋಡಿದರೆ ಅದು ರೇಷ್ಮೆ ಇಂಡಸ್ಟ್ರಿಯಪರದೇ ಇರಬೇಕೆಂಬ ಅಭಿಪ್ರಾಯ ತಿಳಿದು ಬರುತ್ತದೆ. ಸದರಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಮ್ಮ ಮೈಸೂರು ರಾಜ್ಯದಲ್ಲಿ ತತ್ಕಾಪಿ ಕೋಲಾರ ಜಿಲ್ಲೆಯಲ್ಲಿ ಇದರ ಅಭಿವೃದ್ಧಿ ಬಹಳ ಚೆನ್ನಾಗಿ ನಡೆದಿದೆಯೆಂದು ನನಗೆ ತುಂಬಾ ಸಂತೋಷವಾಗುತ್ತದೆ. ಆದರೆ ಇದರಲ್ಲಿ ಅಧಿಕಾರಿಗಳ ಪ್ರಭಾವ ಹೆಚ್ಚಾಗಿದೆ. ಅದಕ್ಕೆ ಅವಕಾಶ ಕೊಡದೆ ಒಂದು ರೇಷ್ಮೆ ಡೆವಲಪ್‌ಮೆಂಟ್ ಬೋರ್ಡ್ ಮಾಡಿ ಆದರ ಮುಖಾಂತರ ಹಣವನ್ನು ಸರಿಯಾಗಿ ವಿನಿಯೋಗ ಮಾಡಿ ಕೋಲಾರ ಜಿಲ್ಲೆಯ ಬಡರೈತರಿಗೆ ಅನುಕೂಲಮಾಡಿ ಎಂದು ಸರಕಾರವನ್ನು ಪ್ರಾರ್ಥಿಸುತ್ತೇನೆ.

ವಿದ್ಯಾ ಇಲಾಖೆ ತೆಗೆದುಕೊಂದರೆ ಲೈಬ್ರರಿ ಇಲಾಖೆಗೆ ಸರಿಯಾದ ಸ್ಥಾನ ಕೊಟ್ಟಿಲ್ಲ. ಇಲಾಖೆಯ ಮುಖ್ಯಾಧಿಕಾರಿಗಳು 1966ರಲ್ಲಿ ಪ್ರಾರಂಭಿಸಿ ಅನೇಕ ಕಡೆ ಡಿಸ್ಟ್ರಿಕ್ಟ್ ಲೈಬ್ರರಿ ಮತ್ತು ಸಿಟಿ ಸೆಂಟ್ರಲ್ ಲೈಬ್ರರಿಗಳನ್ನು ಪ್ರಾರಂಭ ಮಾಡಿದ್ದಾರೆ. ಅವುಗಳಿಗೆ ಬೇಗ ಗ್ರಂಥಪಾಲಕರನ್ನು ನೇಮಕ ಮಾಡಿಲ್ಲ. ಅನೇಕ ಸಲ ಸರ್ಕಾರಕ್ಕೆ ಪ್ರಸ್ತಾಪಮಾಡಿದ್ದೇನೆ. ರೆಕ್ರೂಟಮೆಂಟ್ ರೂಲ್ಸ್ ಆಗಬೇಕೆಂದು ಮೂರುನಾಲ್ಕು ವರ್ಷಗಳಿಂದ ಹೇಳುತ್ತಿದ್ದಾರೆ. ಇದುವರೆಗೆ ಮಾಡಿಲ್ಲ. ಲೈಬ್ರರಿ ಪ್ರೂವ್‌ಮೆಂಟ್ ಹೆಚ್ಚಾಗಿ ಬೆಳೆಯಬೇಕು, ಡಿಸ್ಟ್ರಿಕ್ಟ್ ಕೇಂದ್ರಗ್ರಂಥಾಲಯಗಳಿಗೆ ಹಾಗೂ ಸಂಬಂಧಪಟ್ಟ ಇತರೇ ಹುದ್ದೆಗಳಿಗೆ ಸರಿಯಾದ ಅಧಿಕಾರಿಗಳನ್ನು ನೇಮಕ ಮಾಡಲು ಸರಕಾರ ಕ್ರಮ ತೆಗೆದುಕೊಳ್ಳಬೇಕು.

(ಶ್ರೀ ಚೌಡ ರೆಡ್ಡಿ)

ಆಸ್ಪತ್ರೆಗಳಿಗಾಗಿ ಹೆಚ್ಚು ಹಣ ವಿನಿಯೋಗವಾಗುತ್ತಿದೆ, ಆದರೆ ಅದಕ್ಕನುಗುಣವಾಗಿ ಸೇವೆ ಸಲ್ಲುತ್ತಿಲ್ಲ. ಅನೇಕ ಕಡೆ ಷುಗರ್ ಕಂಪ್ಲೈಂಟ್ ಇರತಕ್ಕಂತ ಬಡಜನರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನೀರಿನಲು ಯೋಚಿಸಿದರೆ ಇದೇನು ಧರ್ಮಛತ್ರವೇ ? ಎಂದು ಕೇಳುವರು. ಬಡವರು ಇದಕ್ಕಾಗಿ ಪ್ರತಿ ದಿವಸ ಒಂದು ರೂಪಾಯಿ ಎಲ್ಲಿಂದ ತರಬೇಕು ? ಅವರು ಸಾಯಬೇಕೇ ? ಹುಚ್ಚರ ಆಸ್ಪತ್ರೆಯಲ್ಲೂ ಅಷ್ಟೆ, ಹುಚ್ಚರ ಸಂಖ್ಯೆ ಹೆಚ್ಚಾಗಿದೆ. ಅವರನ್ನು ಯಾವಾಗಲೂ ಆಸ್ಪತ್ರೆಯಲ್ಲಿಟ್ಟುಕೊಳ್ಳುವುದಿಲ್ಲ ಎಂದು ಹೇಳುವರು. ಇದನ್ನು ಗಮನಿಸಿ ಶ್ರೀಸಾಮಾನ್ಯರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು.

ಆಮೇಲೆ ಲೆಜಿಸ್ಲೇಚರ ವಿಚಾರ. ಹೋದ ಬಜೆಟ್ ಅಧಿವೇಶನದಲ್ಲಿ ನಾನು ಇಂಟರ್‌ಪೆಲೇಷನ್ ಕೊಟ್ಟಿದ್ದಕ್ಕೆ ರೀಪ್ಲೈ ಮಾಡಬೇಕಾಗಿದೆ. ಅದು ಸಭೆಯ ಮುಂದೆ ಸರಿಯಾದ ಸಮಯದಲ್ಲಿ ಬರುತ್ತಿಲ್ಲ. ಹಿಂದೆ ಬಜೆಟ್ ಅಧಿವೇಶನದಲ್ಲಿ ಹಾಕಿದ್ದ ಪ್ರಶ್ನೆ ಇಂದು ಬಂದಿದೆ. ಕೇಳಿದ್ದಕ್ಕೆ ಅಧ್ಯಕ್ಷರು ಕೋಪ ಮಾಡಿಕೊಂಡರು, ಒಂದು ವರ್ಷವಾದ ಮೇಲೆ ಬರುತ್ತಿದೆ. ಹೀಗಾದರೆ ಕಷ್ಟ.

ಕೋಲಾರ ಜಿಲ್ಲೆ ಅಭಾವ ಪ್ರದೇಶವೆಂದು ಘನಸರಕಾರದವರು ತೀರ್ಮಾನ ಮಾಡಿದ್ದಾರೆ, ಅದರ ಮೇಲೆ ಡಿ.ಪಿ.ಎ.ಪಿ. ಕಾರ್ಯಕ್ರಮ ಹಾಕಿದ್ದಾರೆ. ಇಲ್ಲಿಗೆ ಬೇಕಾದ ಕಾರ್ಯಗಳನ್ನು ಈಗಾಗಲೆ ಕೈಕೊಳ್ಳಬೇಕಾಗಿತ್ತು. ಕೇಂದ್ರ ಸರಕಾರಕ್ಕೆ ಕೋಲಾರ ಮತ್ತು ಬಿಜಾಪುರದ ಪ್ರೋಗ್ರಾಂ ಕಳಿಸಿದ್ದೇವೆಂದು ಹೇಳುವರು, ಕೆಲಸ ಪ್ರಾರಂಭವಾಗಿಲ್ಲ. ಕೋಲಾರ ಜಿಲ್ಲೆಯಲ್ಲಿ ಬರಗಾಲ ಶಾಶ್ವತವಾಗಿದೆ. ಅದಕ್ಕೆ ಸರಿಯಾದ ಕಾರ್ಯಕ್ರಮ ಹಾಕಿ ಮೈಸೂರಿನಿಂದ ಕಾವೇರಿ ನೀರು ಬೆಂಗಳೂರಿಗೆ ಬರುವಾಗ ನಂದಿಬೆಟ್ಟದ ಕಡೆ ತಂದು ಕೋಲಾರ ಜಿಲ್ಲೆಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದು. ಇದಕ್ಕೆ ಸರಕಾರ ಗಮನ ಕೊಡಬೇಕು ಎಂದು ಇಷ್ಟನ್ನು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಟ್ರೈಬರಿ ಬೆಂಚಿನವರು ಅಟೆಂಟಿವ್ ಆಗಿರಬೇಕು ಎಂದು ಅಧ್ಯಕ್ಷರು ರೂಲಿಂಗ್ ಕೊಟ್ಟರೂ ಸರಕಾರದವರು ಅದನ್ನು ಪರಿಪಾಲನೆ ಮಾಡುತ್ತಿಲ್ಲ. ಅವರ ವರ್ತನೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಶ್ರೀ ಕಾಗೋಡು ತಿಮ್ಮಪ್ಪ ಮತ್ತು ಶ್ರೀ ಕೋಣಂದೂರು ಲಿಂಗಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಂ. ರುದ್ರಪ್ಪ (ನಕಲೇಶಪುರ).—ಸಭೆಯ ಮುಂದಿರುವ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಈಗ ಎಲ್ಲರ ಗಮನವನ್ನೂ ಹೆಚ್ಚಾಗಿ ಸೆಳೆದಿರುವ ಪ್ರಶ್ನೆ ಉತ್ತರ ಕರ್ನಾಟಕದಲ್ಲಿ ಬರಗಾಲ ಬಂದಿರುವುದು. ಇದು ದೇಶದ ಗಮನವನ್ನೂ ಸೆಳೆದಿದೆ. ನಮ್ಮ ಸರಕಾರ, ಈಗಿನ ಮಂತ್ರಿಮಂಡಲ ಇದನ್ನು ಎಷ್ಟುಮಟ್ಟಿಗೆ ಎದುರಿಸಿದೆ ಮತ್ತು ಈ ಸಮಸ್ಯೆಯನ್ನು ಎಷ್ಟುಮಟ್ಟಿಗೆ ಪರಿಹಾರ ಮಾಡಲು ಪ್ರಯತ್ನಮಾಡಿದೆ ಎಂಬ ವಿಚಾರದಲ್ಲಿ ವಿರೋಧ ಪಕ್ಷದವರು ಹೆಚ್ಚಾಗಿ ಟೀಕೆಮಾಡಿದ್ದಾರೆ. ಆದರೆ ಈ ಸರಕಾರ ಮಾಡಿರುವ ಒಳ್ಳೆಯ ಕೆಲಸಗಳನ್ನು ಅವರು ಉದಾರವಾದ ರೀತಿಯಲ್ಲಿ ನೋಡಲಿಲ್ಲ. ಮಂತ್ರಿಮಂಡಲ ಎಲ್ಲಾ ಪಕ್ಷದ ಸದಸ್ಯರಾದ ಆರ್ಮುಗಂರವರನ್ನು ಅಭಾವ ಪ್ರದೇಶಗಳಿಗೆ ಕಳಿಸಿ ವಿಷಯ ತಿಳಿದುಬರಲು ಅವಕಾಶ ಕಲ್ಪಿಸಿತ್ತು. ಅದು ಸರಕಾರದ ಉದಾರತೆಯನ್ನು, ಔದಾರ್ಯವನ್ನು ತೋರಿಸುವುದು. ಆವರು ಇದಕ್ಕೆ 50 ಕೋಟಿ ರೂಪಾಯಿ ಬೇಕೆಂದು ತಿಳಿಸಿ ತಮ್ಮ ವರದಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಸರಕಾರ ಅದೂ ಸಾಲದೆಂದು ಭಾವಿಸಿ ಶಾಶ್ವತವಾದ ಪರಿಹಾರ ಇದಕ್ಕೆ ಕಂಡುಹಿಡಿದು ಸೂಕ್ತ ಕಾರ್ಯಕ್ರಮ ಕೈಕೊಳ್ಳಲು ಕ್ಷಾಮ ಬಾರದಹಾಗೆ ತಡಗಟ್ಟಲು 150 ಕೋಟಿ ರೂಪಾಯಿ ಬೇಕು ಎಂದು ಅಂಕಿಅಂಶಗಳ ಪಟ್ಟಿಮಾಡಿ ಕೇಂದ್ರ ಸರಕಾರದ ಮುಂದಿಟ್ಟಿದೆ. ಕೇಂದ್ರ ಸರಕಾರದವರು ಅದನ್ನು ಪರಿಶೀಲಿಸುತ್ತಿದ್ದಾರೆ. ಸರಕಾರ ಶಾಶ್ವತವಾದ ರೀತಿಯಲ್ಲಿ ಜನರಿಗೆ ಪರಿಹಾರ ಒದಗಿಸಲು ಆಸಕ್ತಿವಹಿಸಿದ್ದಾರೆಂಬುದನ್ನು ಇದು ತೋರಿಸುವುದು. ಹಿಂದೆ ಬಿಜಾಪುರದಲ್ಲಿ 1918ರಲ್ಲಿ ಬರಗಾಲ ಬಂತು, ಆಗ ಕೇವಲ 8 ಇಂಚು ಮಳೆಯಾಗಿತ್ತು. ಅದೇ ರೀತಿ 1924 ರಲ್ಲಿ ಮತ್ತೆ ಬಂತು. ಎಲ್ಲಕ್ಕಿಂತ ಹೆಚ್ಚಾಗಿ ಈಗ ಬಂದಿದೆ. ಬಿದರೆ, ರಾಯಚೂರು, ಗುಲ್ಬರ್ಗ ಮುಂತಾದ ಕಡೆಗಳಲ್ಲಿ ಬರಗಾಲವಿರುವಾಗ ಸರಕಾರ ವಿಶೇಷ ಗಮನಕೊಟ್ಟು ಸೂಕ್ತ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳುತ್ತಿದ್ದಾರೆ. ಇದನ್ನು ಗಮನಿಸಿ ವಿರೋಧ ಪಕ್ಷದವರು ಪ್ರಶಂಸೆ ಮಾಡುವರೆಂದು ನಂಬಿದ್ದೇನೆ.

ಮಹಾರಾಷ್ಟ್ರದಲ್ಲಿ ಬರಗಾಲವಿದೆ. ಅಲ್ಲಿ ಹೆಚ್ಚು ಹಣ ಸಹಾಯ ಪಡೆದಿದ್ದಾರೆ, ಇಲ್ಲಿ ಪಡೆದಿಲ್ಲ ಎಂದು ಹೇಳಿದ್ದಾರೆ. ಇಲ್ಲಿಗೂ ಕೂಡ ಸಾಕಷ್ಟು ಸಹಾಯ ದೊರೆಯುವ ನಿರೀಕ್ಷೆ ಇದೆ. ಇಲ್ಲಿ ವ್ಯವಸಾಯಕ್ಕೆ, ಬಾರಿ ನೀರಾವರಿ ಯೋಜನೆಗಳಿಗೆ ಹೆಚ್ಚು ಆದ್ಯತೆ ಕೊಡಲಾಗುತ್ತಿದೆ, ಮಹಾರಾಷ್ಟ್ರದಲ್ಲಿ ರೈತೆಯೇಗೆ ಹೆಚ್ಚು ಆದ್ಯತೆ ಕೊಡುತ್ತಿರಬಹುದು. ಅಲ್ಲಿ ಅಫಿಷಿಯಲ್ಸ್ ಸಮಿತಿ ಮತ್ತು ನಾನ್-ಅಫಿಷಿಯಲ್ಸ್ ಸಮಿತಿ ಮಾಡಿರುವಂತೆ ಇಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದ್ದಾರೆ. ಅದರಲ್ಲಿ; ಎಲ್ಲ ಪಕ್ಷಪಂಗಡಗಳವರೂ ಸದಸ್ಯರಾಗಿದ್ದಾರೆ. ಅವರಿಗೆ ಹೆಚ್ಚು ಸಹಕಾರ ಕೊಟ್ಟರೆ ಸರಕಾರ ಈಗಿನ ಪರಿಸ್ಥಿತಿಯನ್ನು ಪ್ರಾಪಕವಾದ ರೀತಿಯಲ್ಲಿ ಎದುರಿಸಬಹುದು.

ವ್ಯವಸಾಯದ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಇದಕ್ಕೆ ಹೆಚ್ಚು ಆದ್ಯತೆ ಈ ಸರಕಾರದವರು ಕೊಡುತ್ತಿದ್ದಾರೆ. ಆದರೆ ರೈತರಿಗೆ ಬೇಕಾದ ಗೊಬ್ಬರ, ಫರ್ಟಿಲೈಜರ್ಸ್ ಮುಂತಾದುವುಗಳ ಅಭಾವವಿದೆ. ಅದನ್ನು ಸಾಕಷ್ಟು ಸರಬರಾಯಿ ಮಾಡಬೇಕು. ಮಂಗಳೂರಿನಲ್ಲಿ ಫರ್ಟಿಲೈಜರ್ಸ್ ಕಾರ್ಖಾನೆ ಸ್ಥಾಪನೆಯಾಗಿದೆ. ಅದು ಪ್ರಗತಿಪರವಾಗಿ ಕೆಲಸಮಾಡುವುದು, ತನ್ಮೂಲಕ ಸರಕಾರ ಸಾಕಷ್ಟು ಗೊಬ್ಬರ ಒದಗುವುದು ಎಂದು ನಂಬಬಹುದು.

ನಮ್ಮ ದೇಶಕ್ಕೆ ಮುಖ್ಯವಾಗಿ ಬೇಕಾಗಿರುವುದು ಅರಣ್ಯ ಸಂಪತ್ತು, ಅದು ಸಾಕಷ್ಟು ಅಭಿವೃದ್ಧಿಯಾಗಿಲ್ಲ. ಆದುದರಿಂದ ಅರಣ್ಯ ಸಂಪತ್ತು ನಷ್ಟವಾಗದಂತೆ ತಡೆಹಿಡಿಯಬೇಕಾಗಿದೆ. ಇದಕ್ಕಾಗಿ ನಮ್ಮ ಅರಣ್ಯ ಸಚಿವರು ಕಟ್ಟುನಿಟ್ಟಾದ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ.

ಎಲ್ಲೆಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೋ ಅಲ್ಲಿ ಅವರನ್ನು ದಂಡನೆಗೆ ಗುರಿ ಮಾಡಿದ್ದಾರೆ. ಅನೇಕ ಜನಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ನಮ್ಮ ಮಂತ್ರಿಮಂಡಲದಲ್ಲಿ ಯಾರು ತಪ್ಪು ಮಾಡುತ್ತಾರೋ ಅವರಿಗೆ ದಾಕ್ಷಿಣ್ಯ ಇಲ್ಲದ ರೀತಿ ವರ್ತನೆ ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ.

5-30 P.M.

ಇನ್ನು ನಮ್ಮ ದೇಶದಲ್ಲಿರತಕ್ಕ ಅರಣ್ಯಸಂಪತ್ತು ಸಾಲದು, ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಹೆಚ್ಚಿಸಬೇಕು. ಅದಕ್ಕೆ ಒಂದು ಬೋರ್ಡು ಇದೆ. ಅರಣ್ಯ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಈ ಬೋರ್ಡು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಮಾಡಬೇಕು. ಅದಕ್ಕೆ ಹೆಚ್ಚಿನ ಹಣಕಾಸಿನ ಸಹಾಯವನ್ನು ಸಹ ನಮ್ಮ ಸರ್ಕಾರದವರು ಒದಗಿಸಬೇಕು. ಮುಖ್ಯವಾಗಿ ನಾನು ಹೇಳಬೇಕು ಎಂದರೆ, ಅರಣ್ಯಸಂಪತ್ತು ಹೆಚ್ಚಾಗಿ ಇರತಕ್ಕದ್ದು ಮಲೆನಾಡುಪ್ರದೇಶದಲ್ಲಿ ಮಲೆನಾಡು ನೈಸರ್ಗಿಕ ಸಂಪತ್ತಿನ ನೆಲವೀಡಾಗಿದೆ. ಇದನ್ನು ಅಭಿವೃದ್ಧಿ ಪಡಿಸಿದರೆ ನಮ್ಮ ರಾಜ್ಯಕ್ಕೆ ಹೆಚ್ಚಿನ ಪ್ರಯೋಜನವಾಗುತ್ತದೆ. ಇದರಿಂದ ಆರ್ಥಿಕ ಪರಿಸ್ಥಿತಿಯೂ ಉತ್ತಮವಾಗುತ್ತದೆ. ಆದ್ದರಿಂದ ಮಲೆನಾಡಿನಿಂದ ಅರಿಸಿ ಬಂದಂಥ ಎಲ್ಲ ಶಾಸಕರು ಮಲೆನಾಡು ಅಭಿವೃದ್ಧಿ ಮಂಡಲಯನ್ನು ನೇಮಕ ಮಾಡಿ ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮಾನ್ ಎ. ಆರ್. ಬದರೀನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಈ ಬೋರ್ಡು ರಚನೆಯಾಗಿತ್ತು. ಈಗಲೂ ಇಂಥ ಒಂದು ಬೋರ್ಡನ್ನು ರಚನೆ ಮಾಡಿ ಮಲೆನಾಡಿನ ನೈಸರ್ಗಿಕಸಂಪತ್ತನ್ನು ನಾವು ಹೆಚ್ಚಿಸಿಕೊಂಡರೆ ಮೈಸೂರು ರಾಜ್ಯದ ಆರ್ಥಿಕಸಂಪತ್ತು ತನ್ಮೂಲಕ ಹೆಚ್ಚಾಗುತ್ತದೆ ಎಂದು ನಂಬಬಹುದಾಗಿದೆ. ಇದನ್ನು ಸರ್ಕಾರದವರು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಇದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಕೈಬಿಟ್ಟಿದ್ದಾರೆ, ಮುಂದೆ ಸಹ ಈ ರೀತಿ ಮಾಡದೆ, ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಅರಣ್ಯ ಸಂಪತ್ತನ್ನು ಕಾಪಾಡುವ ವಿಚಾರದಲ್ಲಿ, ಸಾ ಮಿಲ್ಸ್‌ಗೆ ಮರ ಕಡಿಯುವ ಲೈಸೆನ್ಸ್ ಕೊಡುವುದನ್ನು ನಿಲ್ಲಿಸಬೇಕು. ಸಾ ಮಿಲ್ಸ್‌ಗಳನ್ನು ರಾಷ್ಟ್ರೀಕರಣ ಮಾಡಿ ಅರಣ್ಯ ಸಂಪತ್ತನ್ನು ಕಾಪಾಡಬೇಕು ; ಎಂದು ನಾನು ಸಲಹೆ ಮಾಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ, ಈ ಕೆಲಸ ಇನ್ನೂ ತೀವ್ರಗತಿಯಲ್ಲಿ ಆಗಬೇಕು. ನೀರಿನ ಬಗ್ಗೆ ಮೈಸೂರಿಗೂ ಮತ್ತು ಮದ್ರಾಸಿಗೂ ಆಗಿರತಕ್ಕ ಒಪ್ಪಂದ 1974ನೇ ಇಸವಿಗೆ ಮುಕ್ತಾಯವಾಗುತ್ತದೆ ಆದ್ದರಿಂದ ಕಾವೇರಿ ಬೇಸಿನಲ್ಲಿ ದೊಡ್ಡ ನೀರಾವರಿ ಯೋಜನೆಗಳನ್ನು ಸರ್ಕಾರದವರು ಕೈಗೊಂಡು, ತೀವ್ರಗತಿಯಲ್ಲಿ ಕೆಲಸ

(ಶ್ರೀ ಕೆ. ಎಂ. ರುದ್ರಪ್ಪ)

ಆಗಬೇಕು ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹೇಮಾವತಿ ನದಿಗೆ ಗೋರೂರು ಹತ್ತಿರದ ಅಣೆಕಟ್ಟಿನ ಕೆಲಸ ತೀವ್ರಗತಿಯಲ್ಲಿ ಆಗಬೇಕು, ಅದನ್ನು ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ವಿದ್ಯುಚ್ಛಕ್ತಿಯ ವಿಚಾರ, ಇದು ಬಹಳ ಪ್ರಾಮುಖ್ಯವಾದುದು. ಯಾವ ದೇಶ ಅಭಿವೃದ್ಧಿ ಆಗಬೇಕಾದರೂ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕು, ಇದಕ್ಕೆ ಹೆಚ್ಚಿನ ವಿದ್ಯುಚ್ಛಕ್ತಿ ಬೇಕು. ಈಗ ಕಾಳೀನದಿ ಯೋಜನೆಯನ್ನು ನಮ್ಮ ಸರ್ಕಾರದವರು ತೆಗೆದುಕೊಂಡಿದ್ದಾರೆ. ಆದಕ್ಕೂ ಸಹ ಕೇಂದ್ರದವರು 13 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ನಮ್ಮ ಮಂತ್ರಿಮಂಡಲದವರು ಪ್ರಭಾವ ಬೀರದೆ ಹೋಗಿದ್ದರೆ ಈ 13½ ಕೋಟಿ ರೂಪಾಯಿಗಳನ್ನು ಕೇಂದ್ರದವರು ಕೊಡುತ್ತಾ ಇರಲಿಲ್ಲ. ಇದನ್ನು ವಿರೋಧಪಕ್ಷದ ನಾಯಕರು ಗುರುತಿಸಿಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ.

ನಮ್ಮ ಸರ್ಕಾರದವರು ಪ್ರಥಮತ: ಒಂದು ಹೆಲ್ತ್ ಸೈನ್ಸ್ (Health Science) ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಬೇಕೆಂದು ಕಾರ್ಯಕ್ರಮ ಕೈಗೊಳ್ಳುವವರಾಗಿದ್ದಾರೆ. ಇಂಥ ಯೂನಿವರ್ಸಿಟಿ ಭಾರತದಲ್ಲಿ ಎಲ್ಲಿಯೂ ಇಲ್ಲ. ದೂರದೃಷ್ಟಿಯಿಂದ ನಮ್ಮ ಆರೋಗ್ಯ ಸಚಿವರು ಭಾರತಕ್ಕೆ ಮಾದರಿಯಾಗಿ ಇಲ್ಲಿ ಅದನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ ಅದು ಪ್ರಶಂಶನೀಯವಾದ ವಿಚಾರವಾಗಿದೆ. ನಮ್ಮ ಹಳ್ಳಿಗಾಡುಗಳಲ್ಲಿ ಕೆಲವು ವಿದ್ಯಾವಂತರು, ಅವರು ನಮಗೆ ಕೆಲಸ ಸಿಕ್ಕುತ್ತಾ ಇಲ್ಲ ಎಂದು ಒಂದು ತರಹ ಆಕ್ಷೇಪಣೆ ಮಾಡುವುದು ಕಂಡುಬರುತ್ತಿದೆ. ಆದರೆ ಹಳ್ಳಿಗಾಡುಗಳಲ್ಲಿ ವಿದ್ಯಾವಂತರು ಯಾರು ಇದ್ದಾರೋ ಅವರು ಅರ್ಹತೆಗೆ ತಕ್ಕಂಥ ಕೆಲಸಗಳನ್ನು ಸರ್ಕಾರದವರು ಕೊಡಬೇಕು. ಈಗ ಯೂತ್ ಸರ್ವೀಸ್ (ಯುವಜನ ಶಾಖೆ) ಎಂಬ ಇಲಾಖೆಯನ್ನು ನಮ್ಮ ಮಂತ್ರಿಮಂಡಲದಲ್ಲಿ ಮಾಡಿ ಅದನ್ನು ದಕ್ಷರಾದ ರಾಜ್ಯಸಚಿವರಾದ ಶ್ರೀ ಕೌಜಲಗಿಯವರಿಗೆ ವಹಿಸಿದ್ದಾರೆ. ಇದರ ಕಾರ್ಯಕ್ರಮವನ್ನು ಅವರು ಚೆನ್ನಾಗಿ ಮಾಡುತ್ತಾ ಇದ್ದಾರೆ. ಅವರು ಯುವಕರ ಶಕ್ತಿಯನ್ನು ಕ್ರೋಡೀಕರಿಸಿ, ಅವರಿಗೆ ನೌಕರಿಯನ್ನಾಗಲೀ, ತಕ್ಕ ಕೆಲಸಗಳನ್ನಾಗಲೀ ಎಲ್ಲೆಲ್ಲಿ ಒದಗಿಸಬೇಕೋ ಅದನ್ನು ಅವರು ಒದಗಿಸಿ ಕೊಡುತ್ತಾರೆ ಎಂದು ನಾವು ನಂಬಬಹುದಾಗಿದೆ.

ಈಗ ಆಹಾರ ಪದಾರ್ಥಗಳ ಬೆಲೆಗಳು ಬಹಳ ಜಾಸ್ತಿಯಾಗಿದೆ ಎಂದು ಟೀಕೆಗಳು ಬಂದಿವೆ. ಜಾಸ್ತಿಯಾಗಿರುವುದು ನಿಜ. ಅದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು. ಕಂಟ್ರೋಲ್ ತೆಗೆದುಬಿಡುವುದರಿಂದ ಬೆಲೆಗಳು ಜಾಸ್ತಿಯಾಗುತ್ತವೆ, ಇದು ಒಂದು ಕಾರಣ. ವ್ಯಾಪಾರಸ್ಥರು ಇಂಥ ಸಂದರ್ಭಗಳನ್ನು ಉಪಯೋಗಿಸಿಕೊಂಡು ಹಣ ಮಾಡಬೇಕು ಎನ್ನುವ ದೃಷ್ಟಿಯಿಂದ ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡಿ ಬೆಲೆಯನ್ನು ಜಾಸ್ತಿ ಮಾಡುತ್ತಾರೆ. ಇವರಿಗೆ ಬ್ಯಾಂಕಿನವರು ಹಣವನ್ನು ಕೊಡುವುದರ ಮೂಲಕ ಸಹಕರಿಸುತ್ತಾರೆ. ಇಂಥ ಕಾಳಸಂತೆಕೋರರಿಗೆ ದಾಸ್ತಾನನ್ನು ಇಡುವವರಿಗೆ ಬ್ಯಾಂಕ್‌ನವರು ಯಾವ ಸಹಾಯವನ್ನು ಮಾಡಬಾರದು.

ಲೆವಿ ಭತ್ತವನ್ನು ಸರ್ಕಾರದವರು ಕಲೆಕ್ಟ್ ಮಾಡುವಾಗ ರೈತರಿಗೆ ಯಾವ ರೀತಿ ತೊಂದರೆ ಯಾಗದಂತೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಹೇಳಬೇಕು ಎಂದರೆ, ಹಾಸನ ಜಿಲ್ಲೆಯಲ್ಲಿ, ನನ್ನ ಕ್ಷೇತ್ರವಾದ ಸಕಲೇಶಪುರದಲ್ಲಿ ಕಳೆದ ವರ್ಷದ ಲೆವಿ ಭತ್ತ 14 ಸಾವಿರ ಕ್ವಿಂಟಾಲ್ ಅಲ್ಲಿಯೇ ಇದೆ. ಅದನ್ನು ಬೇರೆ ಕಡೆಗೆ ಸಾಗಿಸಿಲ್ಲ. ಭತ್ತ ಕೆಟ್ಟುಹೋಗುತ್ತಿದೆ ಎಂದು ರಿಪೋರ್ಟ್ ಬಂದಿದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದಂತೆ ಸರ್ಕಾರದವರು ಭತ್ತವನ್ನು ಬೇರೆ ಕಡೆಗೆ ಸಾಗಿಸುವ ವ್ಯವಸ್ಥೆ ಮಾಡಿ ಮಾರಾಟ ಮಾಡಬೇಕು. ಲೇವಿ ಭತ್ತವನ್ನು ಕಲೆಕ್ಟ್ ಮಾಡುವಾಗ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಫಾಡಬೇಕು. ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಆಹಾರದ ಸಾಗಾಣಿಕೆಯ ನಿರ್ಬಂಧ ಇದೆ. ಅದು ಇರಬಾರದು ಎಂದು. ನಿರ್ಬಂಧ ತೆಗೆದರೆ, ಅಕ್ಕಿಯ ಧಾರಣೆ ಮತ್ತು ಭತ್ತದ ಧಾರಣೆ ಏನು ಜಾಸ್ತಿ ಇದೆ ಅದು ಕಡಿಮೆಯಾಗುತ್ತದೆ. ಏಕೆಂದರೆ, ಮೈಸೂರು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅಕ್ಕಿಯ ಹಂಚಿಕೆ ಆಗುತ್ತದೆ. ಈ ದೃಷ್ಟಿಯಿಂದ ಮಾನ್ಯ ವಿರೋಧಪಕ್ಷದ ನಾಯಕರ ಟೀಕೆಯನ್ನು ಸರ್ಕಾರದವರು ಗಮನಿಸಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಆಹಾರ ಪದಾರ್ಥಗಳನ್ನು ಸಾಗಿಸಬಾರದು ಎನ್ನುವ ಏನು ನಿರ್ಬಂಧ ಇದೆ ಇದನ್ನು ತೆಗೆದುಹಾಕಿದರೆ ಒಳ್ಳೆಯದು. ನಮ್ಮ ರಾಜ್ಯದ ಅಕ್ಕಿ ಕೇರಳ ಮಹಾರಾಷ್ಟ್ರ, ಮತ್ತು

ತಮಿಳುನಾಡಿಗೆ ಹೋಗದಂತೆ ಬಂದೋಬಸ್ತು ಇಟ್ಟು ಪೋಲೀಸ್ ನಿಬ್ಬಂದಿಯ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಮಂತ್ರಿಮಂಡಲದವರು ಇದನ್ನು ಗಮನದಲ್ಲಿಟ್ಟುಕೊಂಡು ಈ ರೀತಿ ವ್ಯವಸ್ಥೆ ಮಾಡುತ್ತಾರೆಂದು ನಂಬಿದ್ದೇನೆ.

ಇನ್ನು ರಸ್ತೆಸಾರಿಗೆ ವಿಚಾರ, ರಸ್ತೆ ಸಾರಿಗೆಯಲ್ಲಿ ಅನೇಕ ನ್ಯೂನತೆಗಳು ಇರುವುದು ನಿಜ, ನಮ್ಮ ಮುಖ್ಯಮಂತ್ರಿಗಳು ಹೇಳಿದ ಹಾಗೆ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ (R.T.A) ಪ್ರತಿ ಜಿಲ್ಲೆಯಲ್ಲೂ ಇದೆ. ಅದರಲ್ಲಿ ಖಾಸಗಿ ಸದಸ್ಯರು ಇರುತ್ತಾರೆ. ಜಿಲ್ಲಾಧಿಕಾರಿಗಳು, ಅಧ್ಯಕ್ಷರು ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರು, ಎಕ್ಸಿಕ್ಯುಟೀವ್ ಇಂಜಿನಿಯರ್ ಸದಸ್ಯರು: ಮತ್ತು ಖಾಸಗಿಯವರು ಒಬ್ಬರು ಇರುತ್ತಾರೆ. ಪ್ರೈವೇಟ್ ಬಸ್ಸಿನವರು ಅಪ್ಲಿಕೇಷನ್ ಹಾಕಿದಾಗ ಅಲ್ಲಿಯ ಸ್ಥಿತಿಗತಿಗಳನ್ನು ನೋಡಿಕೊಂಡು ಗೆಜೆಟ್‌ನಲ್ಲಿ ನೋಟಿಫೈ ಮಾಡಿ ಅವರಿಗೆ ಪರ್ಮಿಟ್ ಅನ್ನು ಕೊಡುತ್ತಾರೆ. ಅದರ ಮೇಲೆ ಅಪೀಲು ಇದೆ, ಈ ಕಾನೂನನ್ನು ಅಂದರೆ Motor Vehicles Actನ್ನು ತಿದ್ದುಪಡಿ ಮಾಡದ ಹೊರತು ಈ ರೀತಿ ಯಾರು ಅಪ್ಲಿಕೇಷನ್ ಹಾಕುತ್ತಾರೆ ಅವರಿಗೆ ಪರ್ಮಿಟ್‌ಗಳನ್ನು ತಕರಾರು ಬಾರದಿದ್ದಲ್ಲಿ ಕೊಡಬೇಕಾಗುತ್ತದೆ. ಆದ್ದರಿಂದ ಈ Motor Vehicles Act ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳಬೇಕು. ಎಂದು ನಾನು ಸೂಚನೆ ಮಾಡುತ್ತೇನೆ. ಎಂ ಎಸ್ ಆರ್ ಟಿ ಸಿ ಯವರು 25 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಾರೆ. ಆದರೆ ಈಗಿನ ರೀತಿಯಲ್ಲಿ ವ್ಯವಸ್ಥೆ ಸಾಲದು. ಸಂಚಾರ ಸೌಲಭ್ಯವನ್ನು ಜನಗಳಿಗೆ ಉತ್ತಮ ರೀತಿಯಲ್ಲಿ ಮಾಡಿಕೊಡಬೇಕು. ಎಂದು ಈ ಸಂದರ್ಭದಲ್ಲಿ ಸೂಚನೆ ಕೊಡಬಯಸುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಮಂತ್ರಿಮಂಡಲ ಕಷ್ಟಕಾಲದಲ್ಲಿಯೂ ಸಹ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ ಇರುವ ಸಮಯದಲ್ಲಿ ಹೆಚ್ಚಿನ ದಕ್ಷತೆಯನ್ನು ವಹಿಸಿ, ಟೀಕೆ ಟಿಪ್ಪಣಿಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲರ ಸಹಕಾರವನ್ನು ಬಯಸಿ ಕೆಲಸ ಮಾಡುತ್ತಾ ಇದ್ದಾರೆ. ಆದ್ದರಿಂದ ಅವರಿಗೆ ನಾವು ಸಂಪೂರ್ಣ ಬೆಂಬಲ ಕೊಡಬೇಕು. ಹಿಂದೆ ಏತಕ್ಕೆ ಕಷ್ಟ ಬಂತು ಎಂದರೆ, ಹಿಂದಿನ ಮಂತ್ರಿಮಂಡಲದವರು, ಕ್ಷಾಮ ಪ್ರದೇಶಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯದೆ ಕೆಲಸ ಮಾಡಿದರು. ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದ್ದರೆ ಇಷ್ಟು ಕಷ್ಟ ಬರುತ್ತಾ ಇರಲಿಲ್ಲ. ಹಿಂದಿನ ಮಂತ್ರಿಮಂಡಲದವರು ಹೆಚ್ಚು ಸಾಲವನ್ನು ಬಿಟ್ಟು ಹೋಗಿದ್ದಾರು. ಬೆವರ್ ಡ್ರಾಫ್ಟ್ ಇತ್ತು, ಅದನ್ನು ನಮ್ಮ ಸರ್ಕಾರದವರು ತೀರಿಸಿದ್ದಾರೆ ಈಗಿರುವ ಸಾಲವನ್ನು ತೀರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುತ್ತಿದ್ದಾರೆ. ಅನೇಕ ಎಡರು ತೊಡರುಗಳಿದ್ದರೂ ಇಷ್ಟು ಕೆಲಸ ಮಾಡಿದ್ದಾರೆ ಅವನ್ನು ಪ್ರಶಂಸೆ ಮಾಡಬೇಕು. ಒಟ್ಟಿನಲ್ಲಿ ಮಂತ್ರಿಮಂಡಲದವರು ಧಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಎಲ್ಲಾ ಪಾರ್ಟಿಯವರು ಎಲ್ಲಾ ಪಕ್ಷಗಳವರು ಅವರಿಗೆ ಬೆಂಬಲ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾರು ಆರ್ಥಿಕ ಸ್ಥಿತಿ ಉತ್ತಮ ಪಡಿಸಿಕೊಳ್ಳುತ್ತಾರೆ.

ಶ್ರೀ ಕೆ. ಎಂ. ರುದ್ರಪ್ಪ.—ದೇಶಕೋಸ್ಕರ ಎಲ್ಲರೂ ಪರವಾಗಿ ಕೆಲಸ ಮಾಡುತ್ತಾ ಇದ್ದಾರೆ. ಇನ್ನು ಒಂದು ಮಾತು ಕೇಳಿ ನನ್ನ ಭಾಷಣ ಮುಗಿಸುತ್ತೇನೆ. ನನ್ನ ಸ್ನೇಹಿತರಾದ ಶ್ರೀಮಾನ್ ಹೆಚ್. ಎಸ್. ಸಿದ್ದಪ್ಪನವರು ಮಂತ್ರಿಮಂಡಲವನ್ನು ನಾಟಕ ಕಂಪನಿಗೆ ಹೋಲಿಸಿದರು. ಎಲ್ಲಾ ನಟ ನಟಿಯರ ಹೆಸರುಗಳನ್ನು ಹೇಳಿದರು. ಯಾವ ನಾಟಕ ಆಗಬೇಕಾದರೂ ವಿದೂಷಕ ಬೇಕು ಅದು ಯಾರು ಎಂದು ಹೇಳಲಿಲ್ಲ. ವಿದೂಷಕ ಅವರ ಹೆಸರಿಗೆ ಇರಬೇಕು ಎಂದು ನನ್ನ ನಂಬಿಕೆ ಈ ಅವ್ಯವಹಾರ ನಾಟಕ ಕಂಪನಿಯ ನಾಟಕ ಯಶಸ್ವಿಯಾಗಿ ನೋಡಿಕೊಳ್ಳಲು ಸಿದ್ದಪ್ಪನವರು ನಡೆಸಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ). —ಸನ್ಮಾನ್ಯ ಸಭಾಧ್ಯಕ್ಷಣಿಯವರೇ ಈ ಸದನದ ಮುಂದೆ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದಂತಹ ವಿಷಯದಲ್ಲಿ ಮಂದನಾ ನಿರ್ಣಯವನ್ನು ವಿರೋಧಿಸುತ್ತಾ ತಮ್ಮ ಮುಖಾಂತರ ಸರ್ಕಾರ ಎಂದು ಹೆಸರಿಗೆ ಮಾತ್ರ ಇರತಕ್ಕಂಥ ಬೊಂಬೆಯಂತಹ ಮಂತ್ರಿಗಳಿಗೆ ಅವರ ಪಕ್ಷದಲ್ಲಿ ಇರತಕ್ಕಂಥ ಉತ್ತಮರು ಮತ್ತು ಮಹಿಳಾ ಸದಸ್ಯರ ಮುಖಾಂತರ ಕೆಲವೊಂದು ಮನವಿ ಮಾಡಿದರೆ ಪ್ರಾಯಶಃ ಗುಂಡುಕಲ್ಲು ಹೃದಯ ಇರತಕ್ಕಂಥ ಸರ್ಕಾರಕ್ಕೆ, ದಯಾ ದಾಕ್ಷಿಣ್ಯ, ಪಶ್ಚಾತ್ತೀತ ಅಡಳಿತ ಕೊಡತಕ್ಕಂಥ ಸಾಮರ್ಥ್ಯ ಇಲ್ಲದಿರುವ ಈ ಸರ್ಕಾರಕ್ಕೆ, ಈಗಲಾದರೂ ಹೃದಯ ಪರಿವರ್ತನೆ ಆಗಬಹುದು ಎನ್ನುವ ಹಂಬಲದಿಂದ ತಮ್ಮ ಮುಖಾಂತರ ನಮ್ರತೆಯಿಂದ ಕೆಲವು ಮಾತುಗಳನ್ನು ಸೂಚಿಸಲು ಇಷ್ಟಪಡುತ್ತೇನೆ. ಅನೇಕ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಸಂದರ್ಭಗಳಲ್ಲಿ ನಾನು ಪ್ರಸ್ತಾಪ ಮಾಡಿದೆ. ಈ ರಾಜ್ಯದಲ್ಲಿ ಅನೇಕ ಜನ ದಿವಾನರಾಗಿದ್ದರು. ಮುಖ್ಯಮಂತ್ರಿಗಳಾಗಿದ್ದರು ಆವರೆಲ್ಲಾ ರಾಜ್ಯಭಾರ ಮಾಡಿದ್ದರು. ಖ್ಯಾತಿ ಮತ್ತು ಅಪಖ್ಯಾತಿಯನ್ನು ಪಡೆದಿದ್ದರು. ಶ್ರೀಮಾನ್ ದೇವರಾಜ ಅರಸ್‌ರವರು ರಾಜ್ಯದ ಮುಖ್ಯ ಮಂತ್ರಿಗಳಾದಾಗ ನಮ್ಮ ಪಕ್ಷದವರಾಗಲಿ, ರಾಜ್ಯದ ಯಾವ ವಿರೋಧ ಪಕ್ಷದ ನಾಯಕರಾಗಲಿ ಅವರಿಗೆ ತಪಿಸಲಿಲ್ಲ. ನಾನು ಮತ್ತು ನಮ್ಮ ಪಕ್ಷದವರು ಅವರೆಲ್ಲರೂ ಉತ್ತಮವಾದ, ದಕ್ಷತೆಯಿಂದ ಕೂಡಿದ, ಪ್ರಾಮಾಣಿಕವಾದ ಆಡಳಿತವನ್ನು ನಡೆಸುತ್ತಾರೆ; ಈ ಮೈಸೂರು ರಾಜ್ಯದ ಚುಕ್ಕಾಣಿಯನ್ನೇ ಇವರ ಪ್ರಮುಖವಾದ ಆಡಳಿತ ಮತ್ತು ಇವರ ಸೇವೆ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟು ಈ ಮಹನೀಯ ರುಗಳ ಹೆಸರು ಉಳಿಯುತ್ತದೆ ಎಂದು ತಿಳಿದುಕೊಂಡಿದ್ದೇನು. ಸನ್ಮಾನ್ಯ ಅಧ್ಯಕ್ಷಣಿಯವರೇ ನಮ್ಮ ದೇಶದ ಎಲ್ಲರ ಮನೆ ತಿಗಣೆ ಆಗಿದ್ದಾರೆ. ಪ್ರತಿ ಮನೆಯಲ್ಲಿ ಜನ ಹಿರಿಯರಾಗಲಿ, ಮಕ್ಕಳಾಗಲಿ ಪ್ರಾಮುಖ್ಯವಾಗಿ ವಯಸ್ಸಾದರು ಇವರನ್ನು ತಿಗಣೆಗಳ ಹಾಗೆ ಹೊಡಕಿಕೊಳ್ಳುತ್ತಿದ್ದಾರೆ. ಈ ಕೃಮಿಕೀಟಗಳಿಗೆ ಶಾಶ್ವತವಾದ ಔಷಧಿಯನ್ನು ಉಪಯೋಗಿಸಿ, ಅವರನ್ನು ಹಾಸುಮಾಡಿ, ಆರೋಗ್ಯವನ್ನು ಕಾಪಾಡುವುದಕ್ಕೆ ಸಾಧ್ಯವಾಗುವಂತೆ ಶ್ರಮವಹಿಸಿ ಎಂದು ತಮ್ಮ ಮುಖಾಂತರ ಮೈಸೂರು ಜನತೆಗೆ ಪ್ರಾರ್ಥನೆ ಮಾಡುತ್ತೇನೆ. ಗುಂಡು ಕಲ್ಲಿನಂತಹ ಸರ್ಕಾರಕ್ಕೆ ಪರಿಶುದ್ಧವಾದ ಔಷಧಿಯನ್ನು ಎಲ್ಲಾದರೂ ಸೃಷ್ಟಿಮಾಡಿ ಜನತೆ ಉಪಯೋಗ ಮಾಡಿದ್ದರೆ ದೇಶಕ್ಕೆ ಹಾನಿಯಾಗುತ್ತದೆ ಎಂದು ನಮ್ಮ ಕೆಯಿಂದ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಅವರ ಪಕ್ಷದಲ್ಲಿ ಅನೇಕ ಹಿರಿಯ ಸದಸ್ಯರು ಇದ್ದಾರೆ, ಸತ್ಯವಂತರು ಇದ್ದಾರೆ, ಸತ್ಚಾರಿತ್ರ್ಯವನ್ನು ಹೊಂದಿರತಕ್ಕವರು ಇದ್ದಾರೆ. ಅವರನ್ನು ಪ್ರಶ್ನೆ ಮಾಡುತ್ತೇನೆ. ತಮ್ಮ ಪಕ್ಷದ ಅಧ್ಯಕ್ಷರು ಶ್ರೀ ರಂಗನಾಥ್ ಇದ್ದಾರೆ. ಅವರ ಜೀವಮಾನವೇ ತ್ಯಾಗ ಮಾಡಿರತಕ್ಕ ಶ್ರೀಮಾನ್ ಕರಿಯಪ್ಪನವರು, ಎಸ್. ಎಂ. ಲಿಂಗಪ್ಪನವರು ಇದ್ದಾರೆ, ಶ್ರೀ ನಾಯ್ಡು ಅವರು ಇದ್ದಾರೆ, ಶ್ರೀ ರಾಮುಲು ಮತ್ತು ಪ್ರಭಾಕರ್‌ರಾವ್ ಇದ್ದಾರೆ. ಇವರು ಜೀವಸಹಿತ ಇರುವಾಗ ನೀವು ನಿಮ್ಮ ಪಕ್ಷದ ಆಡಳಿತದಲ್ಲಿ ಮಂತ್ರಿಗಳು ಆಗಿರತಕ್ಕವರ ನೀತಿ ಬಗ್ಗೆ, ಆಡಳಿತದ ದಕ್ಷತೆ ಬಗ್ಗೆ ಅಪ್ರಮಾಣಿಕತೆ ಬಗ್ಗೆ ಕಂಚಿತ್ ದೇಶದ ದೃಷ್ಟಿಯಿಂದ ದೇಶದ ಬಡಜನತೆ ದೃಷ್ಟಿಯಿಂದ, ದೀನದಲಿತ ವರ್ಗದವರ ದೃಷ್ಟಿಯಿಂದ ನಿಮಗಾದರೂ ಚಿಂತನೆ ಏತಕ್ಕಾಗಿ ಬರಲಿಲ್ಲ ಎಂದು ನಿಮ್ಮನ್ನು ಪ್ರಶ್ನೆ ಮಾಡುತ್ತೇನೆ. ಅಪಾರ ಜನಗಳ ಸೇವೆ ಮಾಡಿದ್ದೀರಿ, ಜೈಲುವಾಸ ಅನುಭವಿಸಿದ್ದೀರಿ ನೀವು ವಾರ್ ಕ್ಯಾಬಿನೆಟ್ ಕಾಂಗ್ರೆಸ್ಸಿಗರು ಅಲ್ಲ ಅನೇಕರು ತ್ಯಾಗ ಮಾಡಿದ ಜನ ಇದ್ದಾರೆ ಅವರನ್ನು ಪ್ರಶ್ನೆ ಮಾಡುತ್ತೇನೆ. ಯಾವಾಗವರಾದರೂ ಬೊಂಬಾಯಿಗೆ ಹೋಗಿ ಏಟು ತಿಂದು ಬಂದಂತಹ ಜನ ಹಿಂದೆ ಮಂತ್ರಿ ಮಂಡಲದಲ್ಲಿ ಇದ್ದರೆ? ಇದನ್ನು ಈಗಾಗಲೇ ಹಿಂದೆ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಮಂತ್ರಿ ಮಂಡಲ ಸೃಷ್ಟಿ ಯಾದಂತಹ ಕೇವಲ ಕೆಲವು ದಿವಸಗಳಲ್ಲಿ ಮಂತ್ರಿಗಳ ಮೇರೆ ವೈಯಕ್ತಿಕವಾಗಿ ವ್ಯಕ್ತಿ ಗುಣಶೀಲಗಳ ಬಗ್ಗೆ ಸಂಸ್ಥಾ ಕಾಂಗ್ರೆಸ್‌ನವರು ಆಪಾದನೆ ಮಾಡಿದರೆ? ಈ ದೇಶದ ಪ್ರಮುಖ ಪತ್ರಿಕೆಗಳು, ದೇಶದ ನಾಗರೀಕ ಜನ ಮಂತ್ರಿಗಳ ನಡವಳಿಕೆ ಗುಣಚಾರಿತ್ರ್ಯಗಳ ಬಗ್ಗೆ ಸಂಶಯ ಪಟ್ಟರೆ ಶಿವಾಯಿ ಸಂಸ್ಥಾ ಕಾಂಗ್ರೆಸ್ ಅಲ್ಲ. ಶ್ರೀ ವೀರೇಂದ್ರ ಪಾಟೀಲ್, ಶ್ರೀ ನಿಜಲಿಂಗಪ್ಪ, ಶ್ರೀ ಕೆ. ಹನುಮಂತಯ್ಯನವರ ಹಿಂದಿನ ಸರ್ಕಾರಗಳ ದುರಾಡಳಿತದ ಫಲವಾಗಿ ಈ ರೀತಿ ಕ್ಷಾಮ ಬಂದಿದೆ ಎಂದು ಹೇಳಿಕೊಂಡು ಬರುವುದು ಇದು ಒಂದು ನೂತ್ಯವೇ ಶಿವಾಯ ಬೇರೆ ಉತ್ತಮ ಮಾತನಾಡುವ ಒಳ್ಳೆಯ ನಾಲಿಗೆ ಏತಕ್ಕೆ ತಮಗೆಕೊಡಲಿಲ್ಲ ಈ ಹುಳುಗಳನ್ನು ಮೈಸೂರು ದೇಶದ ಮಂತ್ರಿಮಂಡಲಕ್ಕೆ ಏತಕ್ಕೆ ಕೊಟ್ಟೆ ಎಂದು ರೈತನ ಮಗನಾಗಿ, ಶೀಲವಂತನ ಮಗನಾಗಿ, ಆ ಸೃಷ್ಟಿಕರ್ತ ಬ್ರಹ್ಮನನ್ನು ಕೇಳಿದರೆ ಅದು ಅಪಚಾರವಾಗುವುದಿಲ್ಲ ಎನ್ನುವವರಲ್ಲಿ ನಾನು ಒಬ್ಬ. ಪ್ರಾಮಾಣಿಕವಾಗಿ ಪ್ರಶ್ನೆ ಮಾಡಬೇಕಾದರೆ ತಮ್ಮಲ್ಲಿ ಗೌರವಯುತರಾದವರು ಸತ್ಯವಂತರು ಇದ್ದರೆ ತಮ್ಮ ಹೃದಯವನ್ನು ಬಿಚ್ಚಿ ನೋಡಬೇಕು. ಜಾತೀಯತೆಯನ್ನು ಯಾರು ಸೃಷ್ಟಿ ಮಾಡಿದರು? ಸಂಸ್ಥಾ ಕಾಂಗ್ರೆಸ್ಸಿಗರೇ? ತಾವು ಅಲ್ಲವೇ ಎಂದು ಅಧ್ಯಕ್ಷರ ಮುಖಾಂತರ ನವರಿಕೆ ಮಾಡಿಕೊಳ್ಳುತ್ತೇನೆ. ಮೈಸೂರು ರಾಜ್ಯದಲ್ಲಿ ಪ್ರಾಣಿಜಾತಿ ಇದ್ದರೆ ಸಾಕು. ಹರಿಜನ-ಗಿರಿಜನ ಮತ್ತು ಇತರೆ ಎಲ್ಲಾ ಜನತೆ ಜನಕ್ಕೆ ಒಂದು ಹೆಸರು ಇಟ್ಟರೆ ಸಾಕು. ಬರೀ "ಜನ ಎಂದು ಹೇಳಿದರೆ ಸಾಕು. ಹಿಂದುಳಿದ ವರ್ಗ ನಿರ್ಮಾಣ ಮಾಡಿ, ಹಿಂದುಳಿದವರಿಗೆ ಆಯೋಗವನ್ನು ಸೃಷ್ಟಿ ಮಾಡಿದಂತಹ ಸರ್ಕಾರಕ್ಕೆ ಸವಾಲು ಹಾಕುತ್ತೇನೆ. ಮೈಸೂರು ರಾಜ್ಯದಲ್ಲಿ ಪ್ರಾಣಿಜಾತಿ ಇದ್ದರೆ ಸಾಕು ಮುಖ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಸಾರಿ ಅಪ್ಪಣೆ ಕೊಟ್ಟಿದ್ದಾರೆ, ಯಾವ ಮನುಷ್ಯ ಯಾವ ಜಾತಿ ಎಂದು ಕರೆಯುವುದಕ್ಕೆ ಆಗುವುದಿಲ್ಲ. ಅಂಥ ಧೈರ್ಯ, ಸಾಮರ್ಥ್ಯ ಇದ್ದ ಪಕ್ಷದಲ್ಲಿ ಮೈಸೂರು

ರಾಜ್ಯದಲ್ಲಿ ಮೂರು ಜಾತಿ ಸಾಕು-ಹರಿಜನ, ಗಿರಿಜನ ಇತರ ಜನ ಬಲೀ ಜನ. ಹರಿಜನ, ಗಿರಿಜನ ಬಲೀ ಜನ ಈ ರೀತಿ ಮಾಡಿಕೊಂಡು ಶಿಲವಂತರು ರಾಜ್ಯವ ಆಡಳಿತ ನಡೆಸಿಯೆ ದು ನಾನು ಹೇಳುತ್ತೇನೆ. ಅಧ್ಯಕ್ಷರೇ ಕೆಲವು ಸನ್ನಿವೇಶಗಳನ್ನು ನೆನಪಿಸಿಕೊಂಡರೆ ಸತ್ಯವಂತ ರೈತನ ಮಗನಾಗಿ ನನಗೆ ಅಗತ್ಯ ಸಂಕಟವನ್ನು ಕಷ್ಮಲ್ಲಿ ತೋಡಿಕೊಳ್ಳುವುದ ಕ ಇಷ್ಟಪಡುತ್ತೇನೆ. ಸರ್ಕಾರದಲ್ಲಿ ಇರತಕ್ಕಂಥ ಮಾನ್ಯ ಮಂತಿ ಗಳಲ್ಲಿ ಕೇವಲ ದಕ್ಷತೆ, ಪ್ರಾಮಾಣಿಕತೆ ಇರುವವರ ಸಂಖ್ಯೆ ಕಡಿಮೆ ಇದೆ. ಒಬ್ಬಿಬ್ಬ ಮಂತ್ರಿ ಪ್ರಾಮಾಣಿಕನಾಗಿ ಇದ್ದಪಕ್ಷದಲ್ಲಿ ಪರ ಬಗ್ಗೆ ಪ್ರಚೋದನೆ ನಡೆಯುತ್ತಾ ಇದೆ, ಅವನು ಮಂತ್ರಿಮಂಡಲ ಜವಾಬ್ದಾರಿಯಿಂದ ಆಲೆಸಬೇಕು. ಪ್ರಾಮಾಣಿಕ ಅವನು ಉದ್ಧರಿಸಿದರೆ ಲೋಕ ವಾಡಿದಂತಾಗಿ ವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಚನ್ನಬಸಪ್ಪನವರು ರಾಜ್ಯದ ಯಾವ ಪಕ್ಷದಲ್ಲೇ ಇರಲಿ ಅವರು ದಕ್ಷತೆ, ಪ್ರಾಮಾಣಿಕತೆಯಿಂದ ಆಡಳಿತ ನಡೆಸುತ್ತಾರೆ. ಅಧ್ಯಕ್ಷರೇ ಮೊನ್ನೆ ಎಲ್ಲರೂ ಮಕ್ಕಳು ಹೆಕ್ಕಹಾಗೆ ಅವರು ಹೂ ಮಗುವನ್ನು ಹೆಕ್ಕು ಸಂತೋಷದಿಂದ ಅಕ್ಷತೆ ಹಿಟ್ಟು ಆಶೀರ್ವಾದ ಮಾಡತಕ್ಕ ಕಾಲದಲ್ಲಿ ಈ ದೇಶದಲ್ಲಿ ಯ ಪ ಸಮಾಜವಾದಿ ಕಾರ್ಯಕರ್ತರು ಅವರ ಮನೆ ಮುಂದೆ ಪ್ರದರ್ಶನ ಮಾಡಲಿಲ್ಲ. ಆದರ ಪಕ್ಷದವರೇ ಆದ ರಾಜ್ಯದ ಯುವಕ ನಾಯಕತ್ವ ವಹಿಸಿದಂತ ಶ್ರೀಮಾನ್ ಗುಂಡೂರಾಯರು ಕೇಳುತ್ತೇನೆ ನಿಮ್ಮ ಯುವಕರು ಶಕ್ತಿ 1973 ರ ಕಾಲದಲ್ಲಿ ಪ್ರದರ್ಶನಕ್ಕೋಸ್ಕರ ಮಿಸರೇ ! ಒಂದು ಕಡೆ ಮಗಳ ಮದುವೆ ಮತ್ತೊಂದು ಕಡೆ ಕೆಲವರ ಪ್ರತಿಭಟನೆ. ಅವರನ ಮನಸ್ಸಿನ ಅಂದೋಳನ ಯಾವರೀತಿ ಇದ್ದಿರಬಹುದು ?

ಅಧ್ಯಕ್ಷರೇ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಡೆಯತಕ್ಕ ವಿಚಾರಗಳನ್ನು, ಅಲ್ಲಿ ಇರತಕ್ಕ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳಿಗೆ ಗಮನಕ್ಕೆ ತಂದರೆ ಅವರ ಪಕ್ಷವೇ ತಮ್ಮ ಶಕ್ತಿ ಎಂದು ಅವರ ಪಕ್ಷವನ್ನು ಬಲಪಡಿಸುವುದಕ್ಕಾಗಿ, ನನ್ನ ಕ್ಷೇತ್ರದವನು ಇಂಥವನು ಬಂದರೆ ಹೀಗೆ ಮಾಡು ಎಂದು ಹೇಳತಕ್ಕ ಮಂತ್ರಿಮಂಡಲವನ್ನು ಕಣ್ಣ ಮುಂದೆ ಇದೆ. ಅದನ್ನೆಲ್ಲ ನೋಡಿಕೊಂಡು ಸೌರಣಿಯಿಂದ ಇರತಕ್ಕ ನ್ನು ವೇಶ ಎಲ್ಲಿಯ ವರೆಗೂ ಇರತ್ತದೆ ? ಈ ರಾಜ್ಯದಲ್ಲಿ ಆಹಾರ ವಿತರಣೆ ಹೇಗೆ ನಡೆಯುತ್ತಿದೆ ಎನ್ನುವುದನ್ನು ಇವರಿಗೆ ಅಂತರಾತ್ಮವಿದ್ದರೆ ವಿಮರ್ಶೆ ಮಾಡಿ ನೋಡಲಿ. ತಾಲ್ಲೂಕುಗಳಲ್ಲಿ ಸಕ್ಕರೆಯನ್ನು ಹಂಚುವಾಗ ಯಾರ ಮುಖಾಂತರ ಹಂಚಿಕೆ ಮಾಡುತಿದ್ದಾರೆ ? ಅಲ್ಪಸ್ವಲ್ಪ ನಂಬಿಕೆಯಲ್ಲಿ ಇರುವ ಸತ್ಯವಂತ ಅಧಿಕಾರಿಗಳನ್ನು ಪ್ರಾಮಾಣಿಕ ಅಧಿಕಾರಿಗಳನ್ನು ವರ್ಗ ಮಾಡತಕ್ಕ ಜನ ಇವರು. ನಿ ಒಂದು ಮೂಟೆ ಸಕ್ಕರೆಗೆ 100-150 ರೂಪಾಯಿ ಬ್ಲಾಕ್ ಮಾರ್ಕೆಟ್‌ನಲ್ಲಿ ಹೆಚ್ಚಾಗಿ ಸಿಕ್ಕುತ್ತದೆ. ಇವರ ಪಕ್ಷದ ಏಜೆಂಟರು. ಬದು ವನು ನಾವಿರ ರೂಪಾಯಿ ಕೊಟ್ಟಾದ್ರೂ ಹತ್ತು ಮೂಟೆ ಸಕ್ಕರೆ ಕೊಡಿ ಎಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ನಾವು ಈಗಾಗಲೇ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ನಾನು ಈಗ ಹೇಳಿದ್ದು ಚನ್ನಪಟ್ಟಣ ತಾಲ್ಲೂಕಿನ ಒಂದು ನಿದರ್ಶನ. ಈ ಸರ್ಕಾರದವರು ಬೇಕಾದ ಎಲ್ಲ ವಿವರಗಳನ್ನೂ ಒದಗಿಸುತ್ತೇವೆಂದು ಹೇಳುತ್ತಾರೆ. ಯಾವುದೂ ಸಭೆಯ ಮುಂದೆ ಬರುವುದಿಲ್ಲ. ಹಿಂದೆ ಇದೇ ಸಭೆಯಿಲ್ಲ ಮಾನ್ಯ ಮಾದೇಗೌಡರು ಬತ್ತದ ವಿಷಯವಾಗಿ ಕೇಳಿದಾಗ, ಈ ಹೊಗಯಲ್ಲಿ ಅದರ ವಿವರಗಳನ್ನು ತಂದು ಸಭೆಗೆ ಒಪ್ಪಿಸುತ್ತೇನೆಂದು ಶ್ರೀಮಾನ್ ಕೆ ಎಚ್. ಪಾಟೀಲರು ತೋಳು ತಟ್ಟಿದರು! ಆ ದಿವಸದಿಂದ ಈ ದಿವಸದವರೆಗೂ ಮಾಹಿತಿ ಬಂದಿಲ್ಲ. ನಮಗೆ ನ ಡಿದಂತೆ ನಡೆಯತಕ್ಕ ಸರ್ಕಾರ ಬೇಕು. ನಿಮ್ಮನ್ನು ಟೀಕೆ ಮಾಡಿದ ಪಾತ್ರಕ್ಕ ವಿರೋಧ ಪಕ್ಷದವರಿಗೆ ಈ ದೇಶದ ಜನ ಓಟು ಕೊಡುವುದಿಲ್ಲ ಎಂದು ತಿಳಿದುಕೊಂಡಿರುವವರ ಪೈಕಿ ನಾನೂ ಒಬ್ಬ. ನನ್ನ ನಡೆ ನುಡಿ ನೋಡಿ, ನನ್ನ ಕರ್ತವ್ಯ ತಿಳಿದುಕೊಂಡಿರುವವರು ನನ್ನ ಹಿಂದೆ. ನನ್ನ ಪಕ್ಷದ ಹಿಂದೆ ಬರುತ್ತಾರೆ. ಬಾಯಲ್ಲಿ ಹೇಳುವುದು ಒಂದು ಕಾರ್ಯತಃ ನಡೆಯುವುದು ಒಂದು ರೀತಿಯಾದರೆ ಹೇಗೆ ಜನ ನಮ್ಮ ಹಿಂದೆ ಬರುತ್ತಾರೆ ! ನಾನು ವೈಯಕ್ತಿಕವಾಗಿ ಮಂತ್ರಿಗಳ ಬಗ್ಗೆ ಅಪಾರ ಗೌರವಟ್ಟಿದ್ದೇನೆ. ಇವರ ಜೊತೆಯಲ್ಲಿ ಅನೇಕ ಶ್ರೀಮಂತರು, ಅನೇಕ ರಾಜಕೀಯ ಪಟುಗಳು ಇದ್ದುಕೊಂಡು ತಮಗೆ ಬೇಕಾದ ಹಾಗೆ ಇವರನ್ನು ನಡೆಸುತ್ತಿದ್ದಾರೆ; ಮಹಾ ಮೂರ್ತಿಯವರು ಇವರನ್ನು ನಡೆಸುತ್ತಿದ್ದಾರೆ ಎಂದು ಕೇಳಿದ್ದೇನೆ, ಮುಖ್ಯ ಮಂತ್ರಿಗಳು ಎಲ್ಲ ಪಕ್ಷದ, ಎಲ್ಲ ವರ್ಗದ ಜನರ ಮುಖಂಡರು. ಇವರ ಗುಣ, ಚಾರಿತ್ರ್ಯದ ಬಗ್ಗೆ ಪ್ರಶ್ನೆ ಮಾಡಬೇಕಾಗಿಲ್ಲ, ಆದರೆ ಇವರ ಸರ್ಕಾರ ಮಹಾ ಮೂರ್ತಿಗಳ ವಶವಾಗುತ್ತಿದೆ. ಶ್ರೀ ಕೆ. ಕೆ. ಮೂರ್ತಿ ಎನ್ನುವವರನ್ನು ನಾನೂ ಮಹಾ ಮೂರ್ತಿ ಎಂದು ಕರೆಯುತ್ತದ್ದೇನೆ. ಇಂಥವರನ್ನು ದೂರವಿಡುವುದು ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್:—ಮಾನ್ಯ ಸದಸ್ಯರು ಏನು ಎನ್ನುವುದನ್ನು ಹೇಳುವುದಿಲ್ಲ. ಕೊಗಿದೆ, ಗಾಳಿ ಇದೆ, ಹಲ್ಲು ರೊಜ ರೊಜ ಎಂದು ಹೇಳಿದರೆ ಯಾರು, ಏನು ಎಂದು ತಿಳಿಸು

(ಶ್ರೀ ಡಿ. ದೇವರಾಜ ಅರಸ್)

ಕೊಳ್ಳೋಣ ? ಮೂರ್ತಿ ಎನ್ನುವವರಿದ್ದಾರೆ. ನಿಮ್ಮ ಜೊತೆಯಲ್ಲಿ ಓಡಾಡುವವರು ನಮ್ಮ ಜೊತೆಯಲ್ಲಿ ಓಡಾಡುವವರು ಇದ್ದಾರೆ. ಅವಕ್ಕೆ ಏನು ಸಂಬಂಧ ? ಸರ್ಕಾರದ ಮೇಲೆ ಪರಿಣಾಮ ಬೀರುವುದು, ಸರ್ಕಾರಕ್ಕೆ ಲುಕ್ಸಾನು ಏನಾಗಿದೆ, ನಾವೇನಾದರೂ ಫಾಯಿದೆ ಮಾಡಿಕೊಂಡಿದ್ದೇವೆಯೇ ? ಏನಾದರೂ ಇದ್ದರೆ ಹೇಳಲಿ ! ತಪ್ಪಿದ್ದರೆ ತಿದ್ದಿಕೊಳ್ಳೋಣ. ಏನೂ ಇಲ್ಲದೆ ಎಲ್ಲರ ಮೇಲೂ ಒಂದೊಂದು ಹೆಳುತ್ತಾರೆ. ತಪ್ಪಿದ್ದವರ ಮೇಲೆ ಹೇಳಿದವರೂ ಇರುತ್ತಾರೆ, ನನ್ನ ಮೇಲೆ ಹೇಳುವವರೂ ಇರುತ್ತಾರೆ ನನ್ನ ವಿಷಯದಲ್ಲಿ ಗೌರವವಿದೆ ಎಂದು ಒಂದು ಕಡೆ ಹೇಳುತ್ತಾರೆ. ಆ ವಿಷಯದಲ್ಲಿ ನನಗೂ ಗೌರವವಿದೆ. ಯಾರ ಮೇಲಾದರೂ ಒಂದು ವಿಚಾರ ಹೇಳಬೇಕಾದರೆ ನಿರ್ದಿಷ್ಟವಾಗಿ ಹೇಳಬೇಕು. ನನ್ನದು ತಪ್ಪಿದ್ದರೆ ನೇರವಾಗಿ ಹೇಳಲಿ. ಅದು ನಿಜವೇ ತಪ್ಪೇ ಎಂದು ಹೇಳಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ರಾಜ್ಯದ ಮುಖ್ಯಮಂತ್ರಿಗಳ ವಿಷಯ ಸಂಗ್ರಹಣ ಕಡೆ ಬಹಳ ಕಾತುರರಾಗಿದ್ದಾರೆ. ಸಂದರ್ಭಗಳನ್ನು ಉಲ್ಲೇಖಿಸಿದರೆ ತಿಳಿದು ಕೊಳ್ಳುವುದಕ್ಕೆ ಅನುಕೂಲರಾಗಿದ್ದಾರೆ. ಅವರು ರಾಜಕಾರಣದಲ್ಲಿ ಬಹಳ ಹಳಬರು. 'ಒಲೆ ಉರಿಯದೆ ಹೊಗೆ ಆಡುವುದಿಲ್ಲ, ಎನ್ನುವ ಗಾದೆ ಇದೆ ಶ್ರೀ ಕೆ. ಕೆ. ಮೂರ್ತಿ ಅವರು ಪರ್ಮಿಟ್ ಇಲ್ಲದೆ ರಾಮನಗರದಲ್ಲಿ ಸೀಮೆ ಎಣ್ಣೆ ಮಾರಿದ ಸಂದರ್ಭ ಈ ಸಭೆಯಲ್ಲಿ ಪ್ರಸ್ತಾಪ ಆದಾಗ ಮಾರನೇ ದಿವಸ ಕೊಟ್ಟರು ಎಂದು ಹೇಳಿ ಆಶ್ಚರ್ಯಕರವೆನ್ನಿಸಿತು. ಇದು ಒಂದು ನಿದರ್ಶನ. ಅಪರಾಧ ಯಾರೇ ಮಾಡಿದರು, ನಾನು ಈ ಸಭೆಯ ಸದಸ್ಯನಾಗಿ ಅಪರಾಧ ಮಾಡಿದ್ದರೆ, ಶ್ರೀ ದೇವರಾಜ ಅರಸ್ ಅವರ ಕೀರ್ತಿ ಬೆಳಗಬೇಕಾದರೆ, ನನಗೆ ಶಿಕ್ಷೆ ಆಗಬೇಕು. ಅಪರಾಧ ಮಾಡಿದವನಿಗೆ ಶಿಕ್ಷೆ ಆಗಲೇ ಬೇಕು, ಉಗ್ರವಾದ ಶಿಕ್ಷೆ ಆಗಬೇಕು. ಈ ಸಭೆಯ ಅನೇಕ ಸದಸ್ಯರು ಅನೇಕ ವಿಧವಾಗಿ ಪ್ರಸ್ತಾಪ ಮಾಡಿದ್ದಾರೆ. ಶ್ರೀ ಕೆ. ಕೆ. ಮೂರ್ತಿ ಅವರು ಸರ್ಕಾರದ ಅನೇಕ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡತಕ್ಕವರಿಗೆ ಈಗಾಗಲೇ ಹೆದರಿಸಿದ್ದಾರೆ. ನೀನು ಈ ಸ್ಥಾನಕ್ಕೆ ರಾಜಿನಾಮೆ ಕೊಡಬೇಕು, ಇಲ್ಲದೆ ಹೋದರೆ ನಾನು ನಮ್ಮ ಪಕ್ಷವನ್ನು ನೇಮಿಸುತ್ತೇವೆ ಎಂದು. ಈ ರಾಜ್ಯದ ವ್ಯವಸ್ಥಾಪಕ ಮಂತ್ರಿಗಳು ಒಂದು ಆಯೋಗವನ್ನು ನೇಮಕ ಮಾಡಲಿ. ಆ ಆಯೋಗದ ಮುಂದೆ ತಪ್ಪುಗಳನ್ನು ಸಾಬೀತು ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಈ ಸರ್ಕಾರ ಅವರನ್ನು ತುಂಬ ಹಚ್ಚಿಕೊಳ್ಳುತ್ತವೆ, ಪಹಿಸಿಕೊಳ್ಳುತ್ತದೆ ಎಂದು ಸಂಪೂರ್ಣವಾಗಿ ನನಗೆ ನಂಬಿಕೆ ಇರುವುದರಿಂದ, ಇವರ ಮುಂದೆ ಸ್ಪಷ್ಟ ಅಂಕಿ ಅಂಶಗಳನ್ನು ಕೊಟ್ಟರೆ ಇದಕ್ಕೆ ಗತ್ಯಂತರವಿಲ್ಲ ಎನ್ನುವುದರಿಂದ ಈಗ ರಾದರೂ ಧರ್ಮ ಇವರ ಹೆಸರಿನಲ್ಲಿ ವೈಸೂರು ರಾಜ್ಯದಲ್ಲಿ ಉಳಿಯಲಿ' ಶ್ರೀಗಣಿಯಲ್ಲಿ ಬರಲಿ ಎನ್ನುವ ದೃಷ್ಟಿಯಿಂದ ರಾಜ್ಯದಲ್ಲಿ ಶ್ರೀ ನಿಜಲಿಂಗಪ್ಪನವರ ಸರ್ಕಾರ ಮಾಡಿರತಕ್ಕ ಅನ್ಯಾಯಕ್ಕೆ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಮಾಡಿರತಕ್ಕ ಅನ್ಯಾಯಗಳ ಬಗ್ಗೆ, ಶ್ರೀ ಹನುಮಯ್ಯನವರ ಸರ್ಕಾರ ಮಾಡಿತಕ್ಕ ಅನ್ಯಾಯಗಳ ಬಗ್ಗೆ ಒಂದು ಉನ್ನತ ಮಟ್ಟದ ವಿಚಾರಣಾ ಸಮಿತಿಯನ್ನು ಶ್ರೀಮಾನ್ ದೇವರಾಜ ಅರಸು ಅವರು ನೇಮಿಸಿದರೆ ಮಾದರಿ ಮುಖ್ಯಮಂತ್ರಿಯಾಗಿ ಈ ರಾಜ್ಯದಲ್ಲಿ ಆಗುತ್ತಾರೆ ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ನಮ್ಮ ಮುಖ್ಯ ಮಂತ್ರಿಗಳಲ್ಲಿ ಒಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಈ ರಾಜ್ಯದಲ್ಲಿರುವ ಪೋಲೀಸ್ ಇಲಾಖೆ ಬಗ್ಗೆ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದು ಉಚಿತ. ಆ ಇಲಾಖೆಯಲ್ಲಿ ರಕ್ಷಣೆಗಿಂತ ಭಕ್ಷಣೆಯೇ ಜಾಸ್ತಿಯಾಗಿದೆ. ರಾಜ್ಯದ ಅನೇಕ ಪೋಲೀಸ್ ಠಾಣೆಗಳಲ್ಲಿ ದೂರುಗಳನ್ನು ಕೊಡುವುದಕ್ಕೆ ಹೋದರೆ ಫಿರ್ಯಾದು ಕೊಡುವವನ ಹತ್ತಿರ ಎತ್ತು ಯಾರ ಹೇರೆ ಫಿರ್ಯಾದು ಕೊಡಲ್ಪಡುತ್ತದೆಯೋ ಅವರ ಹತ್ತಿರ ಬಹಿರಂಗವಾಗಿ ಸುಲಿಗೆಯಾಗುತ್ತಿದೆ. ದೇಶದ ಪ್ರಮುಖ ರಸ್ತೆಗಳಲ್ಲಿ ಪೋಲೀಸ್ ನವ್ ಇನ್‌ಸ್ಪೆಕ್ಟರ್, ಹೆಡ್ ಕಾನ್‌ಸ್ಟೇಬರ್ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಇದ್ದು, ಆ ಮಾರ್ಗದಲ್ಲಿ ಹೋಗತಕ್ಕ ಬಸ್ಸು ಲಾರಿಗಳಿಗೆ ಅಡ್ಡ ಹಾಕಿ ದುಡ್ಡು ವಸೂಲು ಮಾಡುತ್ತಾರೆ. ಇದು ಸುಲಿಗೆಯಲ್ಲವೇ ? ಇದು ನತ್ಯಕ್ಕೆ ದೂರವಾದದ್ದೇ ? ಇಂಥ ಕಾರ್ಯ ಶ್ರೀ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿ ಇರುವಾಗ ನಡೆಯುತ್ತಿದೆಯಲ್ಲ ಎನ್ನುವುದೇ ನಮ್ಮ ನಂಕಟ. ಇಂಥದನ್ನು ನಿವಾರಣೆ ಮಾಡಬೇಕು. ಕಂಟ್ರಾಕ್ಟ್ ಬಸ್ಸುಗಳ ಬಗ್ಗೆ ಕಾನೂನು ತಿದ್ದುಪಡಿಯಾಗಬೇಕೆಂದು ಹೇಳುತ್ತ ಇದ್ದರು. ಯಾವ ಕಾಲದಲ್ಲಿಯೂ ಇಲ್ಲದೆ ಇರುವಷ್ಟು ಸಂಖ್ಯೆಯಲ್ಲಿ ಅನ್ ಕಂಟ್ರಾಕ್ಟ್ ಬಸ್ಸುಗಳು ಓಡಾಡುತ್ತಿವೆ. ಇದಕ್ಕೆ ಕಾರಣರು